ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಜುಲೈ-೨೦೦೮ ಸಂಚಿಕೆ-೧೨



ಅಂಬರ ಚರಕಾ
ಗ್ರಾಮೀಣ ಉದ್ಯೋಗ
ಖಾತ್ರಿ ಯೋಜನೆಗೆ
ಸಿದ್ಧೌಷಧ

ದೇಶದ ಒಟ್ಟು ಬಟ್ಟೆಯ ಉತ್ಪಾದನೆಯಲ್ಲಿ ಖಾದಿ ಕ್ಷೇತ್ರ ಕೇವಲ ಶೇ ಒಂದರಷ್ಟು ಮಾತ್ರ ಬಟ್ಟೆಯನ್ನು ಪೂರೈಸುತ್ತಿದ್ದರೂ ಆ ಉದ್ಯಮದಲ್ಲಿ ತೊಡಗಿರುವವರ ಸಂಖ್ಯೆ ಹತ್ತು ಲಕ್ಷ ಇದೆ. ಆದರೆ ಕೇಂದ್ರಿಕೃತ ಮಿಲ್ ಬಟ್ಟೆ ಉದ್ಯಮವು ಶೇ ತೊಂಬತ್ತರಷ್ಟು ಬಟ್ಟೆಯನ್ನು ಉತ್ಪಾದಿಸುತ್ತಿದ್ದರೂ ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆ ಕೇವಲ ಮೂರು–ನಾಲ್ಕು ಲಕ್ಷ ಮಾತ್ರ, ಅತಿ ಹೆಚ್ಚು ಸಂಖ್ಯೆಯ ಜನರಿಗೆ ವರ್ಷವಿಡೀ ಉದ್ಯೋಗ ಭರವಸೆಯನ್ನು ಕೊಡುವ ಖಾದಿ ಕ್ಷೇತ್ರವನ್ನು ಕೇಂದ್ರ ಸರ್ಕಾರವು ಉದಾಸೀನ ಮಾಡಿದ್ದು ಮಹಾಪ್ರಮಾದವೆಂದು ಈ ಲೇಖನ ಸಾರುತ್ತದೆ.

ಮನುಷ್ಯನ ಬದುಕಿನಲ್ಲಿ ಹಾಸ್ಯ ಪ್ರವೃತ್ತಿ ಇದ್ದರೆ ಸಾವಿನಂಥ ಗಂಭೀರ ಸಂಗತಿಯನ್ನು ಸಂತೋಷವಾಗಿ ಸ್ವೀಕರಿಸಬಲ್ಲ ಎಂಬ ಪ್ರತಿಪಾದನೆಯನ್ನು ಗಾಂಧೀ ಮತ್ತು ಟಾಗೋರ್ ಮಾಡಿದ್ದಾರೆ.

ಸಮಾಜದ ಮತ್ತು ಭೂಮಿಯ ಆರೋಗ್ಯವನ್ನು ಹಾಳು ಮಾಡುವ ಕೀಟನಾಶಕಗಳ ವಿರುದ್ಧ ಮಾನವಕುಲದ ಪರವಾಗಿ ಧ್ವನಿ ಎತ್ತಿ ಜಾಗೃತಿಯನ್ನುಂಟು ಮಾಡಿದ ಓರ್ವ ಪರಿಸರ ಪ್ರೇಮಿ ಮಹಿಳೆಯ ಹೋರಾಟದ ಕಥೆ ಈ ಲೇಖನದಲ್ಲಿದೆ.

ಅನ್ಯಾಯದ ವಿರುದ್ಧ ಹೋರಾಡುವವರಲ್ಲಿ ಎರಡು ಪ್ರಕಾರದ ಜನರಿರುತ್ತಾರೆ.ಒಬ್ಬರು ನಿಸ್ಸಹಾಯಕತೆಯ ಮೂಲಕ ವ್ಯಕ್ತಪಡಿಸಿದರೆ ಇನ್ನೊಬ್ಬರು ತಮ್ಮ ಪ್ರಾಣವನ್ನು ತೆತ್ತು ಪ್ರತಿಭಟಿಸುತ್ತಾರೆ. ಎರಡನೆ ಪ್ರಕಾರದ ಪ್ರತಿಭಟನೆಯ ಎರಡು ಉದಾಹರಣೆಗಳು ಈ ಲೇಖನದಲ್ಲಿ ಕಾಣಿಸಲ್ಪಟ್ಟಿವೆ

ಈ ಲೇಖನದಲ್ಲಿ ಇಬ್ಬರು ಮಹಾನ್ ಋಷಿಗಳ ಮಹಾನ್ ಗುಣಗಳನ್ನು ಪರಿಚಯಿಸಲಾಗಿದೆ.

ಕೆಲವರು ಮಾನವೀಯತೆಯನ್ನು ಮಾತಿನಲ್ಲಿ ವ್ಯಕ್ತಪಡಿಸಿದರೆ ಇನ್ನು ಕೆಲವರು ಕಾರ್ಯತಃ ವ್ಯಕ್ತಪಡಿಸುತ್ತಾರೆ. ಕಾರ್ಯತಃ ಪ್ರಕಟಗೊಂಡ ಮಾನವೀಯತೆಯ ಒಂದು ಸನ್ನಿವೇಶದ ವಿವರಣೆ ಈ ಲೇಖನದಲ್ಲಿದೆ.

ಭೂಮಿಯ ಶೋಷಣೆ ಎಷ್ಟಾಗಿದೆಯೆಂದರೆ ಇಂದು ಜಗತ್ತಿನ ತಾಪಮಾನ ಹೆಚ್ಚಾಗುತ್ತಿದೆ. ಪ್ರಾಕೃತಿಕ ವೈಪರಿತ್ಯಗಳು ಉಂಟಾಗುತ್ತಿವೆ. ಈ ಕುರಿತು ಮನುಷ್ಯನ ಪರಿಸರಾತ್ಮಕ ದುಷ್ಕೃತ್ಯಗಳನ್ನು ಪರಿಸರ ವಿಜ್ಞಾನಿ ಲೇಖಕರು ತಮ್ಮ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜುಲೈ – ೨೦೦೮

ಸಂಪುಟ – ೮

ಸಂಚಿಕೆ – ೧೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/–

ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ–೫೭೧೪೩೧

ಜಿಲ್ಲಾ ಮಂಡ್ಯ

☏ ೦೮೨೩೬ ೩೧೯೩೪೪

e-mail - janapada@yahoo.com

ಊರುಗೋಲು

ಏಳು ವರ್ಷ ನನಗೆ ಒಂದು ಹೆಜ್ಜೆ
ಇಡಲಿಕ್ಕಾಗಿದ್ದಿಲ್ಲ.
ಪ್ರಸಿದ್ಧ ವೈದ್ಯನ ಹತ್ತಿರ ನಾನು ಹೋದಾಗ
ಅವನು ಕೇಳಿದ : ಊರುಗೋಲು ಯಾಕೆ?
ನಾ ಹೇಳಿದೆ : ನಾನು ಕುಂಟ.

ಅದಕ್ಕವನೆಂದ : ಅದೇನೂ ಆಶ್ಚರ್ಯದ
ಮಾತಲ್ಲ.
ಎಲ್ಲಿ, ಇನ್ನೊಂದ್ಸಲ ಪ್ರಯತ್ನ ಮಾಡಪ್ಪ,
ನೋಡೋಣ.
ನೀನು ಕುಂಟ ಅನ್ನೋದಾದರೆ,
ಅದಕ್ಕೆ ಕಾರಣ ಈ ದರಿದ್ರ ಕೋಲುಗಳು.
ಎಲ್ಲಿ, ಕೆಳಗೆ ಬೀಳು ! ನೆಲದ ಮೇಲೆ ನಿಧಾನ
ನಡಿ, ನೋಡೋಣ !

ಹಾಗೆ ಹೇಳಿ ಅವನು ನನ್ನ ಸೊಗಸಾದ
ಊರುಗೋಲನ್ನು ತೆಗೆದುಕೊಂಡು
ಒಬ್ಬ ಸ್ನೇಹಿತ ಹಲ್ಲುಕಿರಿಯೋ ಹಾಗೆ ನಗ್ತಾ
ಅವನ್ನ ನನ್ನ ಬೆನ್ನ ಹಿಂದೆ ಮುರಿದು ಹಾಕಿ
ಬೆಂಕಿಗೂಡಿಗೆ ಹಾಕಿ ಬಿಟ್ಟ.

ಹೌದು ನನಗೀಗ ವಾಸಿಯಾಗಿದೆ : ನಾನು
ನಡೀಬಲ್ಲೆ.
ಬರೀ ಒಂದು ನಗುವಿನಿಂದ
ವಾಸಿಯಾಗಿಬಿಡ್ತು.
ಆದರೂ, ಯಾವಾಗಲಾದರೂ
ಕೋಲುಗಳನ್ನು ನೋಡಿದರೆ
ನಾನು ಮತ್ತೆ ಸ್ವಲ್ಪ ಹೊತ್ತು ಕೆಟ್ಟದಾಗಿ
ನಡೀತೀನಿ.

– ಬರ್ಟೋಲ್ಟ್ ಬ್ರೆಕ್ಟ್

ವಿಚಾರ ದೀಪ್ತಿ

ರಾಜಾಜಿ ಮತ್ತು ನನ್ನ ತಂದೆಯವರಾದ ನವರತ್ನರಾಮರಾವ್ ತುಂಬಾ ಆತ್ಮೀಯ ಸ್ನೇಹಿತರಾಗಿದ್ದರು. ಅವರ ಈ ಸ್ನೇಹ ನನ್ನ ತಂದೆಯ ಮರಣದವರೆಗೆ ಅಂದರೆ ಆರು ದಶಕಗಳ ಕಾಲ ಇತ್ತು. ರಾಜಾಜಿ ಬೆಂಗಳೂರಿಗೆ ಬಂದಾಗಲೆಲ್ಲ ತಪ್ಪದೆ ನಮ್ಮ ಮನೆಯಲ್ಲಿಯೆ ಉಳಿದುಕೊಳ್ಳುತ್ತಿದ್ದರು. ಅವರು ಹೊಂದಿದ್ದ ವಿವಿಧ ಪ್ರಕಾರದ ಉನ್ನತ ಹುದ್ದೆಗಳ ಕಾರಣದಿಂದಾಗಿ ಅವರಿಗೆ ಒದಗಿಸಲಾಗಿದ್ದ ಪೋಲಿಸ್ ಭದ್ರತೆ ನಮ್ಮ ಮನೆಯ ಅವರ ವಾಸಕ್ಕೆ ಅಡ್ಡಿ ಬರುತ್ತಿರಲಿಲ್ಲ.

೧೯೪೦ ನೇ ಇಸವಿ. ಎಂದಿನಂತೆ ರಾಜಾಜಿ ತಮ್ಮ ಬೆಂಗಳೂರಿನ ಭೇಟಿಯ ಸಂದರ್ಭದಲ್ಲಿ ನಮ್ಮಲ್ಲಿ ಉಳಿದುಕೊಂಡಿದ್ದರು. ನಮ್ಮ ಬೀದಿಯ ಮಕ್ಕಳಾದ ನಾವು ಆಗ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆವು. ನಮ್ಮ ಮನೆಯ ಅಂಗಳದಲ್ಲಿ ಕ್ರಿಕೆಟ್ ಆಡುತ್ತಿದ್ದೆವು.

ಆ ದಿನ ಬೆಳಿಗ್ಗೆ ರಾಜಾಜಿಯವರು ಜಗಲಿಯ ಮೇಲೆ ಒಬ್ಬರೆ ಕುಳಿತು ನಮ್ಮ ಆಟವನ್ನು ನೋಡುತ್ತಿದ್ದರು. ಆಗ ನಮ್ಮ ತಂದೆಯವರು ಮನೆಯೊಳಗೆ ಸ್ನಾನ ಮಾಡುತ್ತಿದ್ದರು. ಆಟವು ಭರದಲ್ಲಿ ಸಾಗುತ್ತಿದ್ದಾಗ ರಾಜಾಜಿಯವರು ನಿಧಾನವಾಗಿ ಕೆಳಗಿಳಿದು ಬಂದರು ಮತ್ತು ನಮ್ಮ ಆಟದಲ್ಲಿ ತಾವೂ ಒಬ್ಬ ಆಟಗಾರನಾಗಲು ಬಯಸಿರುವುದಾಗಿ ಹೇಳಿದರು! ನಮ್ಮೆಲ್ಲರಿಗೂ ಆಶ್ಚರ್ಯವಾಯಿತು. ಈ ಮೊದಲು ನೀವು ಎಂದಾದರೂ ಕ್ರಿಕೆಟ್ ಆಡಿದ್ದೀರಾ. ಎಂದು ನಾವು ಕೇಳಿದೆವು. ಅವರು ತುಂಟಾಟದ ನಗೆ ಬೀರುತ್ತಾ ನಮ್ಮ ಕಡೆಗೆ ನೋಡಿ ತಾವು ಕ್ರಿಕೆಟ್ ಆಡಿಲ್ಲ. ಆದರೆ ಅದನ್ನು ಆಡುವುದು ಹೇಗೆ ಎಂಬುದು ತಮಗೆ ಗೊತ್ತಿದೆ ಎಂದು ಹೇಳಿದರು. ಕ್ರಿಕೆಟ್‌ನಲ್ಲಿ ಅಂಥದ್ದೇನಿದೆ ಎಂದು ನಗುತ್ತಾ ಅಂದರು. ಚೆಂಡು ತೆಗೆದುಕೊಂಡು ವಿಕೆಟ್‌ಗೆ ಹೊಡೆಯುವುದಷ್ಟೆ ಅಲ್ಲವೆ? ಬನ್ನಿ ನನಗೆ ಚೆಂಡನ್ನು ಕೊಡಿ ನಾನು ಅದನ್ನು ಎಸೆಯುವೆ! ನಿಮ್ಮಲ್ಲಿಯ ಅತ್ಯುತ್ತಮ ಆಟಗಾರನನ್ನು ಅಯ್ಕೆ ಮಾಡಿ ನನ್ನನ್ನು ಎದುರಿಸಲು ಕಳುಹಿಸಿ !

ಆದರೆ ನೀವು ಮಕ್ಕಳು ಚೆಂಡನ್ನು ಎಸೆಯುವ ರೀತಿಯಲ್ಲಿ ಎಸೆಯಲು ನಾನು ಇಷ್ಟಪಡುವುದಿಲ್ಲ. ನಾನು ಚೆಂಡನ್ನು ಎಸೆಯುವ ಬೇರೆ ಕ್ರಮವನ್ನು ಅನುಸರಿಸಬಹುದಾ ಎಂದು ಅವರು ಕೇಳಿದರು. ನಾವೆಲ್ಲ ಹುಡುಗರು ಕೂಡಲೆ ನಮ್ಮೊಳಗೆ ಚರ್ಚಿಸಿ ಆ ರೀತಿ ಚೆಂಡೆಸೆಯಲು ರಾಜಾಜಿಯವರಿಗೆ ಅವಕಾಶ ಕೊಡಬೇಕೆಂದು ಅಭಿಮಾನಪೂರ್ವಕವಾಗಿ ಹೇಳಿದೆವು. ಚೆಂಡನ್ನು ಎಸೆಯುವ ಅವರ ಕುಶಲತೆಯನ್ನು ನೋಡುವುದಕ್ಕಾಗಿ ನಮ್ಮಲ್ಲಿಯ ಶ್ರೇಷ್ಠ ಬ್ಯಾಟ್ಸ್‌ಮನ್ ಶೀನನನ್ನು ಮೈದಾನಕ್ಕೆ ಇಳಿಸಿದೆವು. ಅವನು ವಿಕೆಟ್ ಬಳಿ ಅಗಾಧವಾದ ಎದುರಾಳಿಯನ್ನು ಎದುರಿಸುವ ಯೋಧನ ರೀವಿಯಲ್ಲಿ ನಿಂತುಕೊಂಡನು. ರಾಜಾಜಿ ಆಗ ತಾನೆ ಅಂದಿನ ಅವಿಭಜಿತ ಮದ್ರಾಸ್ ರಾಜ್ಯದ ಪ್ರಧಾನಿ ಪದವಿಯನ್ನು ತೊರೆದು ಬಂದಿದ್ದರು. (ಸ್ವಾತಂತ್ರ್ಯ ಪೂರ್ವದಲ್ಲಿ ರಾಜ್ಯದ ಮಂತ್ರಿಗಳನ್ನು ಪ್ರಧಾನಿ ಎಂದು ಕರೆಯುತ್ತಿದ್ದರು.) ಅವರು ಕಾರ್ಕ್ ಚೆಂಡನ್ನು ಕೈಗೆ ತೆಗೆದುಕೊಂಡರು. ಅದನ್ನು ತಮ್ಮ ಕೈಯಲ್ಲಿ ಒಂದೆರಡು ಬಾರಿ ಮೇಲೆ ಎಸೆದು ಹಿಡಿದರು. ಅವರ ಈ ವಿಧಾನವು ಇನ್ನೇನು ಚೆಂಡನ್ನೆಸೆಯುವ ಸಿದ್ಧತೆಯಂತೆ ಕಾಣುತ್ತಿತ್ತು. ನಾವು ನಮ್ಮ ಉಸಿರು ಕಟ್ಟಿಕೊಂಡು ಇದೆಲ್ಲವನ್ನು ನೋಡುತ್ತಿದ್ದೆವು. ಅವರು ಬ್ಯಾಟ್ಸ್‌ಮನ್ ಕಡೆಗೆ ಜೋರಾಗಿ ಚೆಂಡನ್ನು ಎಸೆಯುವಂತೆ ನಟಿಸಿದರು. ಆದರೆ ಚೆಂಡನ್ನೆಸೆಯಲಿಲ್ಲ. ಅವರು ಈ ರೀತಿಯಾಗಿ ಪುನಃ ಮಾಡಿದರು. ನಾವೆಲ್ಲರು ಗೊಳ್ಳೆಂದು ನಕ್ಕೆವು. ಈ ಹಾಸ್ಯದೃಶ್ಯವನ್ನು ನಾವೆಲ್ಲ ನೋಡುತ್ತಿದ್ದಂತೆ ರಾಜಾಜಿ ತಮ್ಮ ಎಲ್ಲ ಶಕ್ತಿಯನ್ನು ಉಪಯೋಗಿಸಿ ಚೆಂಡನ್ನು ಎಸೆದರು. ಆಗ ಮಧ್ಯದ ಸ್ಟಂಪ್ ಬಿದ್ದು ಹೋಯಿತು. ಆದರೆ ಬ್ಯಾಟ್ಸ್‌ಮನ್‌ಗೆ ಗೊತ್ತೆ ಆಗಲಿಲ್ಲ. ಆಗ ನಾವೆಲ್ಲರೂ ಒಟ್ಟಾಗಿ ಇದು ಮೋಸ. ನೀವು ಈ ರೀತಿ ಮಾಡುವ ಹಾಗಿಲ್ಲ ಎಂದು ವಿರೋಧಿಸಿದೆವು.

"ನನ್ನ ಪ್ರಿಯ ಮಕ್ಕಳೆ, ಇದು ರಾಜಕಾರಣಿಗಳು ಆಡುವ ಆಟದ ರೀತಿ. ಗುರಿಗೆ ತಕ್ಕ ವಿಧಾನವಿರಬೇಕು ಅಲ್ಲವೆ ಎಂದು ಹೇಳಿ ನಗುತ್ತಾ ಮನೆಯತ್ತ ನಡೆದರು."

ರಾಜಾಜಿ ಆಗ ಹೇಳಿದ ಮಾತಿನ ಅರ್ಥ ನಾವು ದೊಡ್ಡವರಾದಂತೆ ನಿಧಾನವಾಗಿ ಆಗುತ್ತಾ ಬಂತು.

– *ನವರತ್ನ ಲಕ್ಷ್ಮಣ*

ಅಂಬರ ಚರಕಾ :
ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಿದ್ಧೌಷಧ

- ಸುರೇಂದ್ರ ಕೌಲಗಿ

ಹಿತ್ತಲ ಗಿಡ ಮದ್ದಲ್ಲ ಎಂಬ ಗಾದೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಪೂರ್ಣವಾಗಿ ಅನ್ವಯಿಸುತ್ತದೆ. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದ ಸಹಸ್ರಾರು ಗ್ರಾಮಗಳಲ್ಲಿ ಅಲ್ಲಿಯ ಪೂರ್ಣ ನಿರುದ್ಯೋಗಿ ಮತ್ತು ಅರೆ ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆಯನ್ನು ಯಾವ ಬಾಜಾ ಬಜಂತ್ರಿಯಿಲ್ಲದೆ ಕೊಡುತ್ತ ಬಂದಿರುವ ಗಾಂಧೀಜಿ ಪ್ರತಿಪಾದಿಸಿದ ಚರಕಾ ಉದ್ಯೋಗವನ್ನು ಅಬ್ಬರದ ಪ್ರಚಾರದಿಂದ ನಡೆಯುತ್ತಿರುವ ಉದ್ಯೋಗ ಖಾತ್ರಿ ಯೋಜನೆ ಸಂಪೂರ್ಣವಾಗಿ ಉದಾಸೀನಕ್ಕೆ ಒಳಪಡಿಸಿದೆ. ಚರಕಾ ಉದ್ಯೋಗ ಅಥವಾ ಖಾದಿ ಉದ್ಯಮದ ಹಿಂದೆ ಇರುವ ಸಾಮಾಜಿಕ-ಆರ್ಥಿಕ-ಸ್ವಾವಲಂಬನೆಯ ವಿಚಾರಗಳನ್ನು ಗಮನಿಸಿದರೆ ಈಗಿನ ಉದ್ಯೋಗ ಖಾತ್ರಿ ಯೋಜನೆಯ ಹಿಂದಿರುವ ವಿಚಾರಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿದೆ, ಹೆಚ್ಚು ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿದೆ, ಭ್ರಷ್ಟಾಚಾರ ರಹಿತವಾಗಿದೆ, ಹೆಚ್ಚು ಪರಿಸರ ಪ್ರೇಮಿಯಾಗಿದೆ, ಹೆಚ್ಚು ವಿಕೇಂದ್ರಿತವಾಗಿದೆ, ಹೆಚ್ಚು ಉದ್ಯೋಗ ಸೃಷ್ಟಿಸುವಂಥಾದ್ದಾಗಿದೆ, ನಿಜಾರ್ಥದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗವಾಗಿದೆ, ರಾಷ್ಟ್ರಗೌರವವನ್ನು ಹೆಚ್ಚಿಸುವಂಥಾದ್ದಾಗಿದೆ, ಕಡಿಮೆ ಬಂಡವಾಳ ಹೂಡಿಕೆಯಿಂದ ಹೆಚ್ಚು ಉದ್ಯೋಗಗಳನ್ನು ವರ್ಷವಿಡೀ ಸೃಷ್ಟಿಸುವಂಥಾದ್ದಾಗಿದೆ, ಕೃಷಿ ಆಧಾರಿತ ಮತ್ತು ಕೃಷಿ ಪೋಷಕ ಉದ್ಯೋಗವಾಗಿದೆ. ಚರಕಾ ಉದ್ಯೋಗದ ಈ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಕಳೆದ ಮೂರು ವರ್ಷಗಳಿಂದ ಜಾರಿಯಲ್ಲಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋನೆಯನ್ನು ಗಮನಿಸಿದರೆ ಅದು ಎಷ್ಟು ಕ್ಷಣಿಕ, ಎಷ್ಟು ದುಬಾರಿ, ಎಷ್ಟು ಕಷ್ಟದಾಯಕ, ಎಷ್ಟು ಪರಿಸರ ವಿನಾಶಕಾರಿ, ಎಷ್ಟು ಕೃಷಿ ಮತ್ತು ರೈತ ವಿರೋಧಿ, ಎಷ್ಟು ಮಧ್ಯವರ್ತಿಗಳ ಹಾವಳಿ, ಎಷ್ಟು ಯಂತ್ರಗಳ ಉಪಯೋಗ, ಎಷ್ಟು ಭ್ರಷ್ಟಾಚಾರ ಇದೆ ಎಂಬುದೆಲ್ಲ ವಿಶೇಷ ಅಧ್ಯಯನವಿಲ್ಲದೆಯೇ ಮೇಲ್ನೋಟಕ್ಕೇನೆ ಎಲ್ಲರಿಗೂ ಕಾಣಿಸುವಂಥ, ಅನುಭವಕ್ಕೆ ಬರುವಂಥ ಸಂಗತಿಗಳಾಗಿವೆ.

ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ವರ್ಷದಲ್ಲಿ ಒಂದು ನೂರು ದಿನ ಮಾತ್ರ ಉದ್ಯೋಗ ಕೊಡುವ ಭರವಸೆ ಕೊಡುತ್ತದೆ. ಇನ್ನು ಉಳಿದ ೨೬೫ ದಿನಗಳ ಕಾಲ ಉದ್ಯೋಗ ಕೊಡುವ ಬಗ್ಗೆ ದಿವ್ಯ ಮೌನ ತಾಳುತ್ತದೆ. ಉದ್ಯೋಗ ಕೊಡದೇ ಹೋದಲ್ಲಿ ನಿರುದ್ಯೋಗ ಭತ್ಯೆಯನ್ನು ಕೊಡುವುದಾಗಿ ಸಾರುತ್ತದೆ. ಈಗಿನ ಜನಸಂಖ್ಯಾ ಆಸ್ಫೋಟನೆಯನ್ನೂ, ಅದರೊಂದಿಗೆ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಂಖ್ಯೆಯನ್ನೂ, ನಗರ ವಲಸೆಯನ್ನೂ ಗಮನಿಸಿದರೆ ಈ ಉದ್ಯೋಗ ಖಾತ್ರಿ ಯೋಜನೆ ಮಂತ್ರಕ್ಕಿಂತ ಉಗುಳನ್ನೇ ಹೆಚ್ಚು ಉಗುಳುತ್ತಿದೆ ಎಂದು ಅನುಭವಕ್ಕೆ ಬರದೇ ಇರಲಾರದು. ನಿರುದ್ಯೋಗ ಭತ್ಯೆಯ ಪ್ರಮಾಣವೇ ಉದ್ಯೋಗದ ಮೂಲಕ ಕೊಡುವ ಒಟ್ಟು ಕೂಲಿ ಮೊತ್ತಕ್ಕಿಂತ

ಹೆಚ್ಚಾಗಿದೆ! ಅಂದರೆ ಉದ್ಯೋಗ ಕೊಡುವುದಕ್ಕಿಂತ ಹೆಚ್ಚಾಗಿ ಹಣ ವಿತರಣೆಯೇ ಈ ಯೋಜನೆಯ ಮುಖ್ಯ ತಿರುಳಾಗಿ ರೂಪಗೊಳ್ಳುತ್ತಿದೆ. ಅಂದರೆ ಉದ್ಯೋಗ ಖಾತ್ರಿಗಿಂತಲೂ ಹಣದ ಖಾತ್ರಿಗೆ ಹೆಚ್ಚು ಮಹತ್ವ ಬಂದಿದೆ. ನಿರುದ್ಯೋಗ ಭತ್ಯೆಯು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಎಂಥ ಹೊರೆ ಹಾಕುವುದು ಎಂದು ಬೇರೆ ಹೇಳಬೇಕಾಗಿಲ್ಲ. ಇಂದು ದೇಶವು ಅಗಾಧವಾದ ಮತ್ತು ಅಪಾಯದ ಹಣದುಬ್ಬರದ ಸಮಸ್ಯೆಯನ್ನು ಎದುರಿಸುತ್ತಿರುವಾಗ, ಇಂಧನದ ಮೂಲವಾದ ಕಚ್ಚಾ ತೈಲದ ಅಭಾವವನ್ನು ಎದುರಿಸುತ್ತಿರುವಾಗ, ಈಗಾಗಲೆ ೭೩ ಸಾವಿರ ಕೋಟಿ ಪ್ರಮಾಣದ ರೈತರ ಸಾಲ ಮನ್ನಾದಂಥ ಹಣಕಾಸಿನ ಚಕ್ರವ್ಯೂಹ ಕೋಟೆಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸಿಕ್ಕಿಹಾಕಿಕೊಂಡಿರುವಾಗ ದೇಶದ ಎಲ್ಲ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿರುವಾಗ ಉದ್ಯೋಗ ಕೊಡುವುದಕ್ಕಿಂತ ಹೆಚ್ಚಾಗಿ ನಿರುದ್ಯೋಗ ಭತ್ಯೆಯನ್ನು ಕೊಡುವ ಯೋಜನೆ ಎಷ್ಟರ ಮಟ್ಟಿಗೆ ಸಾಧು ಮತ್ತು ಸೂಕ್ತ ಎಂಬುದನ್ನು ದೇಶದ ಅರ್ಥಶಾಸ್ತ್ರಜ್ಞರು ಗಂಭೀರವಾಗಿ ಆಲೋಚಿಸಬೇಕಾಗಿದೆ.

ಈಗ ಚಾಲ್ತಿಯಲ್ಲಿರುವ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅನೇಕ ಮೂಲಭೂತ ಸಮಸ್ಯೆಗಳಿವೆ ಅವುಗಳಲ್ಲಿ ಕೆಲವು ಈ ಕೆಳಗೆ ಕಾಣಿಸಿದಂತಿವೆ :-

೧. ಈ ಯೋಜನೆಗೆ ಪ್ರತಿವರ್ಷ ಬೇಕಾಗುವ ಇಂದಿನ ಲೆಕ್ಕಾಚಾರದಂತೆ ೫೦ ಸಾವಿರ ಕೋಟಿ ರುಪಾಯಿ! ಇಷ್ಟು ದೊಡ್ಡ ಪ್ರಮಾಣದ ಖರ್ಚಿಗೆ ತಕ್ಕಂತೆ ದೇಶದ ಖಜಾನೆಗೆ ನಗದಾಗಿ ಬಂದು ಸೇರುವ ಹಣದ ಲೆಕ್ಕ ದೊರೆತಿಲ್ಲ. ಯೋಜನೆಯು ತೆರಿಗೆಗಳ ಮೂಲಕವಾಗಲೀ, ಜಿ.ಡಿ.ಪಿ. ವೃದ್ಧಿಸುವ ಮೂಲಕ ನೇರವಾಗಿ ಆಗಲೀ, ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಗೆ ಗಮನಕೊಡುವುದಕ್ಕಿಂತ, ಕಟ್ಟಡಗಳ ನಿರ್ಮಾಣ, ಕೆರೆ-ಕುಂಟೆಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ಶಾಲಾ ಕಟ್ಟಡಗಳ ನಿರ್ಮಾಣ, ಕೆರೆ-ಕಾಲುವೆಗಳಲ್ಲಿಯ ಹೂಳೆತ್ತುವ ಕೆಲಸ ಈ ಮುಂತಾದ ಮೂಲಭೂತ ಸೌಕರ್ಯಗಳ ನಿರ್ಮಾಣದತ್ತ ಗಮನಕೊಡುತ್ತದೆ. ಮೂಲಭೂತ ಸೌಕರ್ಯಗಳ ನಿರ್ಮಾಣದಿಂದ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಾಗಬಹುದಾದರೂ ಅದು ತುಂಬಾ ನಿಧಾನವಾದ ಪ್ರಕ್ರಿಯೆ ಹಾಗೂ ಜಟಿಲವಾದ ಪ್ರಕ್ರಿಯೆ ಅಲ್ಲದೆ ತಾನು ಹಾಕಿದ ಮರಿಗಳನ್ನೇ ತಾನು ತಿನ್ನುವ ತಾಯಿ ಪ್ರಾಣಿಯಂತೆ ಇದೆ. ಉದಾಹರಣೆಗೆ ಮೂಲಭೂತ ಸೌಕರ್ಯಗಳ ಹೆಸರಿನಲ್ಲಿ ಈಗ ಎಲ್ಲೆಲ್ಲೂ ತಲೆ ಎತ್ತುತ್ತಿರುವ ವಿಮಾನ ನಿಲ್ದಾಣಗಳ ಯೋಜನೆಯನ್ನೇ ಗಮನಿಸೋಣ. ಒಂದೊಂದು ವಿಮಾನ ಯೋಜನೆಗೂ ಸಾವಿರಾರು ಎಕರೆ ಭೂಮಿ ಬೇಕು. ಇಂದು ದೇಶದ ತುಂಬೆಲ್ಲಾ ಇರುವ ವಿಮಾನ ನಿಲ್ದಾಣಗಳು ಆಕ್ರಮಿಸಿಕೊಂಡಿರುವ ಪ್ರದೇಶದ ವಿಸ್ತೀರ್ಣ ಒಂದು ದೊಡ್ಡ ರಾಜ್ಯದ ವಿಸ್ತೀರ್ಣಕ್ಕೆ ಸಮವಾಗಿದೆ. ಒಂದು ಸಲ ನಿಲ್ದಾಣದ ಸ್ಥಾಪನೆಯಾಯಿತೆಂದರೆ ಆ ಭೂಮಿ ಶಾಶ್ವತವಾಗಿ ಕೃಷಿಯಿಂದ ವಂಚಿತವಾಗುತ್ತದೆ. ಇದೇ ಸ್ಥಿತಿ ರಾಜ್ಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣದಿಂದಾಗುತ್ತಿದೆ. ಇತ್ತೀಚೆಗೆ ಬಂದಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಯಿಂದಲೂ ಆಗುತ್ತಿದೆ. ಎಲ್ಲೆಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ , ಉದ್ಯೋಗ ಸೃಷ್ಟಿಸುವ ಹೆಸರಿನಲ್ಲಿ ಕಾಮಗಾರಿಗಳಾಗುತ್ತಿವೆಯೋ ಅಲ್ಲೆಲ್ಲಾ ವಿಸ್ತಾರವಾದ, ಫಲವತ್ತಾದ ಭೂಮಿ ನಷ್ಟವಾಗುತ್ತಿದೆ.

ಪರೋಕ್ಷವಾಗಿ ಒಂದು ಅಭಿವೃದ್ಧಿ ಇನ್ನೊಂದು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿದೆ. ತಪ್ಪು ಅಭಿವೃದ್ಧಿ ನೀತಿಯಿಂದ ನೀರಿನ ಅಭಾವ ಉಂಟಾಗಿದೆ, ಭೂಮಿಯ ಫಲವತ್ತತೆ ಕ್ಷೀಣವಾಗಿದೆ, ಪ್ರಾಕೃತಿಕ ವಿಕೋಪಗಳು ಹೆಚ್ಚಾಗಿವೆ, ಸಮುದಾಯಗಳು ತಮ್ಮ ಸಂಸ್ಕೃತಿ-ಕಲೆ- ಭಾಷೆ ಇತ್ಯಾದಿಗಳನ್ನು ಕಳೆದುಕೊಳ್ಳುತ್ತಿವೆ. ಇಷ್ಟು ಸಾಲದೆಂಬಂತೆ ನೀರಿಗಾಗಿ, ತೈಲಕ್ಕಾಗಿ, ಭೂಮಿಗಾಗಿ ಭಯಾನಕ ಶಸ್ತ್ರಾಸ್ತ್ರಗಳೊಂದಿಗೆ ಜಾಗತಿಕ ಮಟ್ಟದಲ್ಲಿ ಮಹಾಯುದ್ಧವಾಗುವ ಸಾಧ್ಯತೆ ಹೆಚ್ಚುತ್ತಿದೆ. ಇದು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗಳಿಂದಾಗುತ್ತಿರುವ ನಕಾರಾತ್ಮಕ ಪರಿಣಾಮಗಳು. ಆದರೆ ಉದ್ಯೋಗ ಖಾತ್ರಿ ಯೋನೆಗಳು ವಿಶ್ವ ಪ್ರಕ್ರಿಯೆಯಾಗಿವೆ. ಅನೇಕ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳೂ ಈ ಪ್ರಕಾರದ ಯೋಜನೆಯನ್ನು ಒಪ್ಪಿಕೊಂಡಿವೆ. ೧೯೮೦ನೇ ಇಸ್ವಿ ವೇಳೆಯಲ್ಲಿ ಸುಮಾರು ಮೂವತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಈ ಯೋಜನೆಯನ್ನು ತಮ್ಮದನ್ನಾಗಿಸಿಕೊಂಡಿದ್ದವು. ಅಂದರೆ ಈ ದೇಶಗಳೆಲ್ಲವೂ ಅಭಿವೃದ್ಧಿಯ ಹೆಸರಿನಲ್ಲಿ ಮಾನವಕುಲದ ನಿಜವಾದ ಹಿತಕ್ಕೆ ವಿಮುಖವಾಗಿ ನಿಲ್ಲುವ ಸಾಹಸಮಾಡುತ್ತಿವೆ.

೨. ಈ ಖಾತ್ರಿ ಯೋಜನೆಯಲ್ಲಿ ಮನುಷ್ಯನ ಕೈಗಳಿಗೆ ಮತ್ತು ಬುದ್ಧಿಗೆ ಕೆಲಸವನ್ನು ಕೊಡುವುದರ ಬದಲಾಗಿ ವಿವಿಧ ಪ್ರಕಾರದ ಸಂಕೀರ್ಣ ತಾಂತ್ರಿಕತೆಯ ಯಂತ್ರಗಳಿಗೆ ಮತ್ತು ಗುತ್ತಿಗೆದಾರರಿಗೆ ಹೆಚ್ಚು-ಹೆಚ್ಚು ಕೆಲಸವನ್ನು ಕೊಡಲಾಗುತ್ತಿದೆ. ಯಂತ್ರಗಳು ಬಂದವೆಂದರೆ ಅವು ತಮ್ಮೊಂದಿಗೆ ನಿರುದ್ಯೋಗ, ಶೋಷಣೆ, ಭ್ರಷ್ಟಾಚಾರ, ದಳ್ಳಾಳಿತನ ಇತ್ಯಾದಿಗಳನ್ನು ತಪ್ಪದೇ ತರುತ್ತವೆ. ತಕ್ಷಣ ಮತ್ತು ವೇಗವಾಗಿ ಅಭಿವೃದ್ಧಿ ಕಂಡರೂ ಕಾಲ ಕ್ರಮೇಣ ಅವು ಸಾಮಾಜಿಕವಾಗಿ ಬಹು ನಷ್ಟಕಾರಕವೆಂದು ಗೊತ್ತಾಗುತ್ತದೆ. ಈ ವಿಷಯ ಗೊತ್ತಾಗುವ ವೇಳೆಗೆ ಏನೂ ಅರಿಯದ ಅನುಭವವಿರದ ಹೊಸ ತಲೆಮಾರು ಹುಟ್ಟಿಕೊಂಡಿರುತ್ತದೆ. ಅದು ಹಿಂದಿನ ತಲೆಮಾರಿನವರ ತಪ್ಪನ್ನು ಸರಿಮಾಡುವುದರಲ್ಲಿ ತನ್ನ ಸಂಪನ್ಮೂಲಗಳನ್ನು ವ್ಯಯಿಸುತ್ತ ಕಾಲ ಕಳೆಯುತ್ತದೆ.

೩. ಈ ಖಾತ್ರಿ ಯೋಜನೆಯ ಪ್ರಮುಖ ದೋಷವೇನೆಂದರೆ ಇದರ ಹೆಸರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂದಿದ್ದರೂ ಈ ಯೋಜನೆಯು ನಿಜವಾದ ಅರ್ಥದಲ್ಲಿ ಗ್ರಾಮಾಭಿಮುಖವಾಗಿಲ್ಲ. ಬದಲಿಗೆ ಗ್ರಾಮದಲ್ಲಿರುವ ಜನರನ್ನು, ಕೃಷಿಕರನ್ನು ಒಕ್ಕಲೆಬ್ಬಿಸುವ ಯೋಜನೆಯಾಗಿದೆ ; ಗ್ರಾಮವನ್ನು ಸಮೃದ್ಧಗೊಳಿಸುವುದರ ಬದಲಾಗಿ ಬರಡುಮಾಡುವ ಯೋಜನೆಯಾಗಿದೆ. ಬಡವರು ಹೆಚ್ಚು ಬಡವರಾಗುವ, ಶ್ರೀಮಂತರು ಹೆಚ್ಚು ಶ್ರೀಮಂತರಾಗುವ ಯೋಜನೆ ಇದಾಗಿದೆ. ಈ ಯೋಜನೆಯ ಮೂಲಕ ನಿರ್ಮಾಣವಾಗುವ ಸಂಪನ್ಮೂಲಗಳು ಪರೋಕ್ಷವಾಗಿ ಇದ್ದುಳ್ಳವರ ವಶವಾಗುವ ಯೋಜನೆಯಾಗಿದೆ.

೪. ಈ ಯೋಜನೆ ಜಾರಿಗೆ ಬಂದು ಎರಡುಮೂರು ವರ್ಷಗಳಾದವು, ಈ ಯೋಜನೆ ಜಾರಿಗೆ ಬರುತ್ತಲೆ ಕಾಕತಾಳೀಯವೆಂಬಂತೆ ಆತ್ಮಹತ್ಯೆಯ ಪ್ರಕರಣಗಳೂ ಹೆಚ್ಚಾಗಿವೆ. ಅಂದರೆ ಈ ಯೋಜನೆಯ ಅನುಷ್ಠಾನದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಅಧಿಕಾರಶಾಹಿಗಳ ಹೊಣಗೇಡಿತನ, ಗ್ರಾಮೀಣರ ಪಾತ್ರ ಇಲ್ಲದೆ ಇರುವ ಸಂಗತಿಗಳು ಕಂಡುಬರುತ್ತಿವೆ. ಸುಮಾರು ಮುನ್ನೂರು ಜಿಲ್ಲೆ ಮತ್ತು ೭೦ ಕೋಟಿ ಜನರಿಗೆ ಸಂಬಂಧಿಸಿದ ಈ ಯೋಜನೆಯೇ ಒಂದು ರೀತಿಯಲ್ಲಿ ತಲೆಕೆಳಗಾಗಿ ಪಿರಮಿಡ್‌ಗಳನ್ನು ಕಟ್ಟುವ ಪ್ರಯತ್ನವಾಗಿದೆ.

ಈ ಯೋಜನೆಯ ರಚನಾಕಾರರು ಭಾರತೀಯ ಗುಣಲಕ್ಷಣಗಳನ್ನು ಹೊಂದಿರುವ ಅಭಿವೃದ್ಧಿ ಸಿದ್ಧಾಂತದಿಂದ ಪ್ರಭಾವಿತರಾಗಿರುವುದಕ್ಕಿಂತ ಪಾಶ್ಚಿಮಾತ್ಯ ಮಾದರಿಯ ಸಿದ್ಧಾಂತದಿಂದ ಪ್ರಭಾವಿತಗೊಂಡಿದ್ದಾರೆ. ಹಾಗೆ ಇಲ್ಲದೆ ಹೋಗಿದ್ದರೆ ಇಂದಿಗೆ ಸರಿಯಾಗಿ ಒಂದು ನೂರು ವರ್ಷಗಳ ಹಿಂದೆ ೧೯೦೮ರಲ್ಲಿ ಮಹಾತ್ಮ ಗಾಂಧೀಜಿ ಚರಖವಿಲ್ಲದೆ ಸ್ವರಾಜ್ಯವಿಲ್ಲವೆಂದು ಹೇಳಿದ್ದ ಮಾತನ್ನು ನಮ್ಮ ಯೋಜನಾಕಾರರು ಮರೆಯುತ್ತಿರಲಿಲ್ಲ. ಉದ್ಯೋಗದ ಬರವನ್ನೂ "ಶ್ರೀಮಂತಿಕೆಯನ್ನೂ" ಹೋಗಲಾಡಿಸಲು ಚರಕಾವನ್ನು ಗಾಂಧೀಜಿ ಸೂಚಿಸಿದ್ದನ್ನು ಮರೆಯುತ್ತಿರಲಿಲ್ಲ. ಈಗ ಈ ಗ್ರಾಮೀಣ ಖಾತ್ರಿ ಯೋಜನೆಯಿಂದ ಗಾಂಧೀಜಿ ಹೇಳಿದ್ದ ಮಾತಿಗೆ ವಿರುದ್ಧವಾದುದೇ ನಡೆಯುತ್ತಿದೆ. ನಿರುದ್ಯೋಗದ ಬರ ಹೋಗುವುದರ ಬದಲಾಗಿ ಉದ್ಯೋಗದ ಬರ ಹೆಚ್ಚುತ್ತಿದೆ; ಆದಾಯದ ವಿತರಣೆಯಾಗುವುದರ ಬದಲು ಕೆಲವರೇ ಶ್ರೀಮಂತರಾಗುತ್ತಿದ್ದಾರೆ.

೧೯೨೧ ರಲ್ಲಿ ಗಾಂಧೀಜಿ ರೂಪಿಸಿದ್ದ ಚರಕಾ ನಿಧಾನವಾಗಿ ಹೊಸ ರೂಪ ಪಡೆಯುತ್ತ ಬಂದು ಇಂದು ಎಂಟು ಕದರುಗಳ ಚರಖಾವಾಗಿ ರೂಪಗೊಂಡು ಭಾರತದಾದ್ಯಂತ ಅನೇಕ ಹಳ್ಳಿಗಳಲ್ಲಿ ಲಕ್ಷಾಂತರ ಗ್ರಾಮೀಣರಿಗೆ ಮುಖ್ಯವಾಗಿ ಮಹಿಳೆಯರಿಗೆ ವರ್ಷವಿಡೀ ಒಂದು ದಿನವೂ ತಪ್ಪದೆ ಉದ್ಯೋಗದ ಭರವಸೆ ಕೊಡುತ್ತ ಅಹಿಂಸಾತ್ಮಕ ಕ್ರಾಂತಿಯನ್ನೇ ಉಂಟುಮಾಡುತ್ತಿದೆ. ಅಂಬರ ಚರಖಾದ ಗುಣವಿಶೇಷಗಳು ಇಂತಿವೆ :-

೧. ಎಂಟು ಕದರಿನ ಒಂದು ಚರಕಾದ ಬೆಲೆ ಸುಮಾರು ಎರಡು ಸಾವಿರ. ಇದನ್ನು ಎಲ್ಲಿಗೆ ಬೇಕಾದರೂ ಸಾಗಿಸಬಹುದು. ಇದನ್ನು ಇಡುವುದಕ್ಕೆ ೩'x೩, ಸ್ಥಳ ಸಾಕು. ವಿದ್ಯುಚ್ಛಕ್ತಿ ಬೇಕಿಲ್ಲ. ಇದಕ್ಕೆ ಬೇಕಾಗುವ ಕಚ್ಚಾ ಪದಾರ್ಥ ಹತ್ತಿ. ಇದು ಸ್ಥಳದಲ್ಲಿಯೇ ಸಿಗುವುದರಿಂದ ಸಾಗಾಣಿಕೆಯ ಖರ್ಚು ಉಳಿಯುತ್ತದೆ. ಈ ಕಚ್ಚಾ ಪದಾರ್ಥವನ್ನು ಪಡೆಯಲು ಭೂಮಿಯ ಹೊಟ್ಟೆಯನ್ನು ಬಗೆಯಬೇಕಾಗಿಲ್ಲ. ಬದಲಿಗೆ ಅದನ್ನು ಪ್ರೀತಿಯಿಂದ ಪೋಷಿಸಬೇಕಾಗುತ್ತದೆ;

೨. ಚರಕಾವನ್ನು ನಡೆಸಲು ಯಾವುದೇ ವಿಶೇಷವಾದ ತರಬೇತಿ ಬೇಕಾಗಿಲ್ಲ. ಶಿಕ್ಷಣ ಬೇಕಾಗಿಲ್ಲ. ಸಾಮಾನ್ಯ ಜ್ಞಾನವಿರುವ ಯಾವುದೇ ವ್ಯಕ್ತಿ ಇದನ್ನು ನಡೆಸಬಹುದು. ಕಲಿ-ಕಲಿಯುತ್ತಲೇ ಸಂಪಾದನೆಯು ಆಗುತ್ತದೆ. ಸ್ಟೈಫೆಂಡ್‌ನಂಥ ಹೆಚ್ಚುವರಿ ಖರ್ಚಿಗೆ ದಾರಿಯಿಲ್ಲ.

೩. ಸಾಮೂಹಿಕ ಸ್ಥಳದಲ್ಲಾಗಲೀ, ಮನೆಯಲ್ಲಾಗಲೀ ನೆರಳಿನಲ್ಲೇ ಕುಳಿತು ಸುರಕ್ಷಿತವಾಗಿದ್ದುಕೊಂಡು ಕೆಲಸ ಮಾಡಬಹುದು.

೪. ಅನುಕೂಲವಾದ ಸಮಯದಲ್ಲಿ ಕೆಲಸಮಾಡಬಹುದು.ಯಾವುದೇ ಕಾನೂನು ಕಟ್ಟಳೆಯ ನಿರ್ಬಂಧವಿಲ್ಲ.

೫. ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಒಂದು ದಿನಕ್ಕೆ ಸುಮಾರು ಎಪ್ಪತ್ತು ರುಪಾಯಿ ಕೂಲಿಸಿಗುತ್ತದೆ. ಅದು ಕೇವಲ ವರ್ಷಕ್ಕೆ ನೂರು ದಿನ ಮಾತ್ರ ಆದರೆ ಚರಖಾದ ಮೇಲೆ ಐವತ್ತರಿಂದ ಅರವತ್ತು ರುಪಾಯಿ ಮುನ್ನೂರ ಅರವತ್ತೈದು ದಿನಗಳೂ ದೊರೆಯುತ್ತದೆ.

೬.. ಕೆಲಸ ಬೇಕೆಂದು ಅಧಿಕಾರಿಗಳಲ್ಲಿ ಹೆಸರನ್ನು ನೋಂದಾಯಿಸಬೇಕಾಗಿಲ್ಲ. ಇದು

ನಿಶ್ಚಿತ ಸ್ಥಳದಲ್ಲಿ ನಿಶ್ಚಿತ ಕೆಲಸ, ಮಧ್ಯವರ್ತಿಗಳಿಗೆ ಸ್ಥಾನವಿಲ್ಲ. ಶೇಕಡಾ ೧೨ ರಷ್ಟು ಕ್ಷೇಮನಿಧಿಯ ಭರವಸೆ ಕೂಡ ಇದೆ.

೭. ಚರಕಾ ಜೀವನಕ್ಕೆ ಮೂಲಭೂತವಾಗಿ ಬೇಕಾದ ಬಟ್ಟೆಯನ್ನು ತಯಾರಿಸಲು ಸಹಕಾರಿಯಾಗಿದೆ. ಮಹಿಳೆಯರಿಗೆ ತುಂಬಾ ಆಪ್ತ ಬಂಧುವಾಗಿದೆ.

೮. ಚರಕಾದ ಉದ್ಯೋಗ ಮಾಡುವವರಿಗೆ ದೊರೆಯುವ ನಿಶ್ಚಿತ ಉದ್ಯೋಗ ಮತ್ತು ಸಂಪಾದನೆಯ ಕಾರಣದಿಂದಾಗಿ ಆಹಾರ ಭದ್ರತೆಯು ತಾನಾಗಿಯೇ ಒದಗಿ ಬರುತ್ತದೆ.

೯.ಚರಕಾದಿಂದ ಉತ್ಪತ್ತಿಯಾಗುವ ನೂಲಿನಿಂದ ಆಯಾ ಸ್ಥಳದಲ್ಲಿಯೇ ಮಗ್ಗಗಳನ್ನು ಸ್ಥಾಪಿಸುವುದರ ಮೂಲಕ ವಿವಿಧ ಬಗೆಯ ಬಟ್ಟೆಯನ್ನೂ ತಯಾರಿಸಬಹುದಾದ್ದರಿಂದ ನೇಯ್ಗೆ ಕೆಲಸದಲ್ಲಿ ಅನೇಕರಿಗೆ ಪ್ರತ್ಯೇಕವಾಗಿ ಕೆಲಸ ದೊರೆಯುತ್ತದೆ. ನೇಯ್ಗೆ ಕೆಲಸವನ್ನು ಪುರುಷರೂ, ಮಹಿಳೆಯರೂ ಮಾಡಬಹುದು.

೧೦. ಬಟ್ಟೆಗೆ ಮತ್ತು ನೂಲಿಗೆ ಬಣ್ಣಹಾಕುವ ಕೆಲಸ ಕೂಡ ಸೃಷ್ಟಿಯಾಗುತ್ತದೆ. ನಂತರ ಸಿದ್ಧವಾದ ಬಟ್ಟೆಯನ್ನು ಸಿದ್ಧ ಉಡುಪಾಗಿ ಪರಿವರ್ತಿಸುವ ಕೆಲಸದ ಅವಕಾಶದ ಬಾಗಿಲೂ ತೆರೆಯುತ್ತದೆ. ಒಂದು ಕುಟುಂಬವಷ್ಟೇ ಏಕೆ ಇಡೀ ಗ್ರಾಮವೇ ಬಟ್ಟೆಯ ವಿಷಯದಲ್ಲಿ ಸ್ವಾವಲಂಬಿಯಾಗಬಹುದು.

೧೧. ಆಗ ಆ ಗ್ರಾಮದಲ್ಲಿ ಸ್ವಯಂಚಾಲಿತ ಅರ್ಥವ್ಯವಸ್ಥೆ ನಿರ್ಮಾಣವಾಗುವುದು. ವಿದೇಶಗಳಿಂದ ಸಾಲ ಪಡೆಯುವುದು ತಪ್ಪುವುದು. ಆಗ ದೇಶದಲ್ಲಿಯ ಬಡತನ ಹಾಗೂ ಕಾಣುವ ಮತ್ತು ಕಾಣದ ನಿರುದ್ಯೋಗವು ಇಲ್ಲದಂತಾಗುವುದು. ಉದ್ಯೋಗ ಖಾತ್ರಿ ಯೋಜನೆ ಹಳ್ಳಿಗಳಲ್ಲಿ ಯಶಸ್ವಿಯಾಗುವಂತೆ ನಗರಗಳಲ್ಲಿ ಆಗಲು ಸಾಧ್ಯವಿಲ್ಲ. ಏಕೆಂದರೆ ಉದ್ಯೋಗ ಸೃಷ್ಟಿಯಾಗಲು ಅಗತ್ಯವಾದ ಎಲ್ಲ ಮೂಲಭೂತ ಸಂಪನ್ಮೂಲಗಳು ಗ್ರಾಮದಲ್ಲಿ ಇದೆ. ಭೂಮಿ ಇದೆ, ಕಾಡು ಇದೆ, ಜನಶಕ್ತಿ ಇದೆ, ಪಶುಶಕ್ತಿಯಿದೆ, ಕೃಷಿ ಇದೆ. ಈ ಅನುಕೂಲತೆಗಳು ನಗರಗಳಲ್ಲಿ ಇಲ್ಲ. ಪ್ರಸಿದ್ಧ ಅರ್ಥಶಾಸ್ತ್ರ ಮತ್ತು ನೊಬೆಲ್ ಪಾರಿತೋಷಕ ಸನ್ಮಾನಿತ ಅಮರ್ತ್ಯಸೇನ್ ಇವರು ತಮ್ಮ 'ಆರ್ಗ್ಯುಮೆಂಟೇಟಿವ್ ಇಂಡಿಯನ್' ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ, "ನೂರಾರು ಬೆಂಗಳೂರುಗಳಾಗಲಿ, ಹೈದರಬಾದ್‌ಗಳಾಗಲಿ ತಮ್ಮ ಬಲದಿಂದಲೇ ಭಾರತದ ಬಡತನದ ಜಾಡ್ಯವನ್ನು ಹೋಗಲಾಡಿಸಲಾರವು. ದೇಶದಲ್ಲಿ ಅತ್ಯಂತ ಬಡವರಾಗಿರುವವರು ತಾಂತ್ರಿಕ ತಂತ್ರಜ್ಞಾನ ಮತ್ತು ತತ್ಸಂಬಂಧಿ ಅಭಿವೃದ್ಧಿ ಯೋಜನೆಗಳಿಂದ ಬಹು ಕಡಿಮೆ ಲಾಭ ಪಡೆಯುತ್ತಾರೆ."

೭. ಕೊನೆಯದಾಗಿ, ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದ ಪೂರ್ಣ ಹೊಣೆಗಾರಿಕೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡುವ ಗುರಿಯಿದೆ. ವೈಚಾರಿಕವಾಗಿ, ತಾತ್ವಿಕವಾಗಿ ಈ ಗುರಿಯೇನೋ ಸರಿ. ಆದರೆ ಇಂದು ಗ್ರಾಮ ಪಂಚಾಯಿತಿಗಳು ದ್ವೇಷಾಧಾರಿತ, ಅಸೂಯೆ ಆಧಾರಿತ ರಾಜಕೀಯ ಪಕ್ಷಗಳ ಕೈಗೊಂಬೆಯಾಗಿವೆ; ಅಧಿಕಾರಿಗಳ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿವೆ. ಆದ್ದರಿಂದ ಎಲ್ಲಿಯವರೆಗೆ ಪಂಚಾಯಿತಿಗಳ ಈ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಉದ್ಯೋಗ ಖಾತ್ರಿ ಯೋಜನೆಯ ಸದುದ್ದೇಶ್ಯ ಈಡೇರುವುದು ಕಷ್ಟ ಸಾಧ್ಯ. ಬದಲಿಗೆ ವಿಕೇಂದ್ರಿತ ವ್ಯವಸ್ಥೆಯಲ್ಲಿರುವ ಅಂಬರ ಚರಕಾ ಉದ್ಯೋಗ ಯೋಜನೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಿದ್ಧೌಷಧವಾಗಿದೆ. * * *

ಸಂಗೀತ ಕಲಾವಿದರು - ೧೨

ಬಾನ್ಸುರಿ ವಾದಕ ಪಂಕಜ್ ಕುಮಾರ್ ಚಟರ್ಜಿ

ಪಂಕಜ್ ಕುಮಾರ್ ಚಟರ್ಜಿಯುವರು ಬನಾರಸ್‌ನ ನಿವಾಸಿ. ಬಾಲ್ಯಾವಸ್ಥೆಯಿಂದಲೆ ಲಖನೌ ಪದ್ಧತಿಯ ಸಂಗೀತ ಪಾಠವನ್ನು ಅಭ್ಯಾಸಮಾಡುವುದರ ಮೂಲಕ ತಮ್ಮ ವೃತ್ತಿ ಶಿಕ್ಷಣವನ್ನು ಶ್ರೀ ಸುದೀಪ್‌ರಾಯ್ ಚೌಧರಿ, ಅರುಣ್ ಚಕ್ರವರ್ತಿಯವರಿಂದ ಪಡೆದರು. ಆನಂತರ ಸುಪ್ರಸಿದ್ಧ ಶಾಸ್ತ್ರೀಯ ಬಾನ್ಸುರಿ ವಾದಕ ಸ್ವರ್ಗೀಯ ಬೇನು ಚಟರ್ಜಿಯವರಿಂದ ಮಾರ್ಗದರ್ಶನ ಪಡೆದರು. ೧೯೭೦ರಿಂದ ಇವರು ಬನಾರಸ್-ಲಖನೌ ಪದ್ಧತಿಯ ವಿದ್ವಾನ್ ಮತ್ತು ಹಿರಿಯ ಪ್ರಸಿದ್ಧ ಬಾನ್ಸುರಿ ಕಲಾಕಾರರ ಶಿಷ್ಯರಾಗಿದ್ದರು. ಇವರು ಶಾಸ್ತ್ರೀಯ ಗಾಯನದಲ್ಲಿ ಸ್ವರ್ಗೀಯ ಚಿನ್ಮಯ ಲಾಹಿರಿಯವರ ಶಿಷ್ಯರಾಗಿರುವ ಶ್ರೀ ಮೃಣಾಲ್ ಬ್ಯಾನರ್ಜಿಯರಿಂದಲೂ ಕೂಡ ಶಿಕ್ಷಣ ಪಡೆದರು. ಇವರ ಬಾನ್ಸುರಿ ವಾದನದ ಶೈಲಿಯಲ್ಲಿ ಪಾರಂಪರಿಕ ವಿಶೇಷತೆಗಳನ್ನು ಕಾಣಬಹುದು. ಇವರು ರಾಗಗಳನ್ನು ಪಾರಂಪರಿಕ ರೀತಿಯಲ್ಲಿ ನಿಷ್ಠೆಯಿಂದ ನುಡಿಸುತ್ತಾರೆ. ಇವರು ಭಾರತ ಮತ್ತು ವಿದೇಶಗಳಲ್ಲಿ ಅನೇಕ ಗೋಷ್ಠಿಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಸದ್ಯ ಇವರು ಆಕಾಶವಾಣಿ ಕಲ್ಕತ್ತೆಯಲ್ಲಿ ವಿಭಾಗೀಯ ಕಲಾಕಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಗೀತ ಕಲಾವಿದರು - ೧೩

ಸಂಗೀತಜ್ಞ ಡಿ. ಕುಮಾರ್‌ದಾಸ್

ಡಿ.ಕುಮಾರ್‌ದಾಸ್ ಸುಪ್ರಸಿದ್ಧ ಶಾಸ್ತ್ರೀಯ ಪದ್ಧತಿಯ ಹಿಂದೂಸ್ತಾನಿ ಗಾಯಕರಲ್ಲಿ ಒಬ್ಬರಾಗಿದ್ದಾರೆ. ಇವರ ಜನ್ಮವು ೧೯೫೪ರಲ್ಲಿ ಕರ್ನಾಟಕದ ಬಳ್ಳಾರಿ ಜಿಲ್ಲೆಯ ದೆಲಿಬೆಂಚ್ ಎಂಬ ಗ್ರಾಮದಲ್ಲಿ ಆಯಿತು. ಇವರು ಬಾಲ್ಯದಿಂದಲೆ ವಿಲಕ್ಷಣ ಸಾಮರ್ಥ್ಯದ ಪ್ರತಿಭಾ ಸಂಪನ್ನ ವ್ಯಕ್ತಿ. ಆದ್ದರಿಂದ ಆ ಗ್ರಾಮದ ರೈತರು ಇವರ ಸಂಗೀತಾಭ್ಯಾಸಕ್ಕೆ ಧನಸಹಾಯ ಮಾಡಿದರು. ಇವರನ್ನು ಗದಗಿನಲ್ಲಿರುವ ವೀರೇಶ್ವರ ಪುಣ್ಯಾಶ್ರಮಕ್ಕೆ ಕಳುಹಿಸಿದರು. ಅಲ್ಲಿ ಇವರು ಆಚಾರ್ಯ ಡಾ.ಪುಟ್ಟರಾಜ ಗವಾಯಿಯವರ ಶಿಷ್ಯಗಣಕ್ಕೆ ಸೇರಿಕೊಂಡರು. ಅಲ್ಲಿ ಅವರು ೧೨ ವರ್ಷಗಳ ಕಾಲ ಪ್ರಶಿಕ್ಷಣ ಪಡೆದರು. ಮಧುರ ಕಂಠದ ಸ್ವಾಮಿ ಕುಮಾರ್‌ದಾಸ್‌ರವರು ತಾಳ, ರಾಗಗಳನ್ನು ಸಶಕ್ತವಾಗಿ ಪ್ರಸ್ತುತ ಮಾಡುವುದರಲ್ಲಿ ಪಳಗಿದವರಾದರು. ಇವರ ಗಾಯನದಲ್ಲಿ ಕಿರಾನಾ ಮತ್ತು ಗ್ವಾಲಿಯರ್ ಪದ್ಧತಿಯ ಇಣಕು ನೋಟ ಕಂಡು ಬರುತ್ತದೆ. ಖ್ಯಾಲ್ ಅಲ್ಲದೆ ಇವರು ವಚನಗಳನ್ನು ಮತ್ತು ದಾಸರ ಪದಗಳನ್ನು ಕೂಡ ಸುಶ್ರಾವ್ಯವಾಗಿ ಹಾಡುತ್ತಾರೆ. ಕುಮಾರ್‌ದಾಸ್‌ರವರು ಗೋವಾ, ಮೈಸೂರು, ಬೆಂಗಳೂರು, ಚೆನ್ನೈ@, ಮುಂಬೈ, ವಾರಣಾಸಿ ಇತ್ಯಾದಿ ಸ್ಥಳಗಳಲ್ಲಿ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದಾರೆ.

ಸಾವು ಮತ್ತು ಹಾಸ್ಯಗಳ ಬಗ್ಗೆ ಟಾಗೋರ್ ಮತ್ತು ಗಾಂಧಿ

– ಗುರುದಯಾಳ್ ಮಲ್ಲಿಕ್

ಭಾರತದಲ್ಲಿ ಸಾವು ಎಂಬ ಪದಕ್ಕೆ ಇರುವ ಅನೇಕ ಪರ್ಯಾಯ ಶಬ್ದಗಳಲ್ಲಿ ಧರ್ಮಪರಿಪಾಲನೆ ಎಂಬುದೂ ಒಂದು. ಜೀವನದ ವ್ಯವಸ್ಥೆಯಲ್ಲಿ ಸಾವು ಎಂಬುದು ಇರದಿದ್ದರೆ ಮನುಷ್ಯ ತನ್ನ ಹುಟ್ಟಿನ ಉದ್ದೇಶ್ಯವೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಆದ್ದರಿಂದ ಸಾವು ಎಂಬುದು ನಿಜವಾಗಿಯೂ ಪರಮಾತ್ಮನ ಕೃಪೆ.

ಗಾಂಧೀಜಿಯವರಿಗೆ ಸಾವು ಮತ್ತು ಜೀವನ ಎರಡೂ ಒಂದೇ ನಾಣ್ಯದ ಎರಡು ಮುಖಗಳಾಗಿದ್ದವು. ಟಾಗೋರರಿಗೆ ಅವು ಒಂದೇ ತಾಯಿಯ ಎರಡು ಮಗ್ಗಲುಗಳಾಗಿದ್ದವು. ತಾಯಿ ಮಗುವನ್ನು ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ಬದಲಾಯಿಸಿದಾಗ ಕ್ಷಣಕಾಲ ಮಗು ತನ್ನ ಸಮಾಧಾನದ ಸ್ಥಳದಿಂದ ಬೇರ್ಪಡಿಸಲ್ಪಡುತ್ತದೆ. ಆಗ ಮಗು ಅಳುತ್ತದೆ. ಆದರೆ ಅದಕ್ಕೆ ಪುನಃ ಸಮಾಧಾನದ ತಾಣ ಸಿಕ್ಕಾಗ ಅದು ಶಾಂತಿಯನ್ನೂ ಮತ್ತು ತೃಪ್ತಿಯನ್ನೂ ಅನುಭವಿಸುತ್ತದೆ. ಅದರಂತೆಯೇ, ಸಾವು ಮತ್ತು ಜೀವನ ಅನಂತ ಜೀವನದಲ್ಲಿ ಸೇರಿಸಲ್ಪಟ್ಟಿವೆ. ಆದ್ದರಿಂದ ಪ್ರಾಚೀನಕಾಲದ ಋಷಿಯೊಬ್ಬರು ಸಾವನ್ನು ನಶ್ವರತೆಯ ನೆರಳೆಂದು ವರ್ಣಿಸಿದ್ದಾರೆ.

ಅಂದಮೇಲೆ ಸಾವು ಎಂಬುದು ಅಂತಿಮ ನಿಲುಗಡೆಯಲ್ಲ ; ಅದು ಜೀವನದ ಚೈತನ್ಯಕ್ಕೆ ಹೊಸದೊಂದು ದಿಕ್ಕು ಅಷ್ಟೆ ಅಥವಾ ಜೀವನದ ಸಮರಸತೆ ಮತ್ತು ಹೊಸತನದ ಹೊಸ ಗ್ರಹಿಕೆ. ಕಲಾಕಾರ ಒಂದು ಚಿತ್ರವನ್ನು ರೂಪಿಸುವಾಗ ಅವನು ಆಗಾಗ್ಗೆ ಆ ಚಿತ್ರದಿಂದ ದೂರ ನಿಂತು ತನ್ನ ಚಿತ್ರದ ಬೆಳವಣಿಗೆಯನ್ನು ಅವಲೋಕಿಸುತ್ತಾನೆ. ಸಾವು ಕೂಡ ಇದೇ ತರಹ ಜೀವನದ ಕ್ಷೇತ್ರದಿಂದ ಒಂದು ಘಳಿಗೆ ಆಕುಂಚನಗೊಂಡಂತೆ. ಬರವಣಿಗೆ ಅಥವಾ ಮಾತಿನಲ್ಲಿ ಇರುವ ವಿರಾಮ ಚಿನ್ಹೆಗಳಂತೆ ಜೀವನದೊಂದಿಗೆ ಸಾವಿನ ಸಂಬಂಧ. ವಿರಾಮ ಚಿನ್ಹೆಗಳು ವಾಕ್ಯದಲ್ಲಿಯ ಸಮರಸತೆಯ ಬದ್ಧತೆಯನ್ನು ಕಾಪಾಡುವುದರೊಂದಿಗೆ ವಾಕ್ಯಾರ್ಥವನ್ನು ಇನ್ನಷ್ಟು ಅರ್ಥಪೂರ್ಣವನ್ನಾಗಿಯೂ ಮಾಡುತ್ತವೆ.

ಸತ್ಯಾಂಶವೇನೆಂದರೆ ಮಾನವನ ಹೃದಯದಲ್ಲಿಯ ಯಾವುದೋ ಒಂದು ಅಂಶ ಸಾವೆಂಬುದು ಜೀವನದ ನಿಲುಗಡೆಯೆಂಬುದನ್ನು ನಂಬಲು ನಿರಾಕರಿಸುತ್ತದೆ. ಹಾಗಿಲ್ಲದೆ ಹೋಗಿದ್ದರೆ ಮನುಷ್ಯ "ಹೇ ದೇವರೇ, ನನ್ನನ್ನು ಮೃತ್ಯುವಿನಿಂದ ಅಮೃತತ್ವದ ಕಡೆಗೆ ಕೊಂಡೊಯ್ಯು" ಎಂದು ಪ್ರಾರ್ಥಿಸುವುದಿಲ್ಲ. ಆದರೂ ಕೂಡ ಬಹಳಷ್ಟು ಜನರು ಸಾವಿಗೆ ಹೆದರುತ್ತಾರೆ. ಏಕೆ ? ಏಕೆಂದರೆ ಅವರು ಬಹಳಷ್ಟು ವಸ್ತುಗಳನ್ನು ಹಿಡಿದಿಟ್ಟುಕೊಂಡಿರುತ್ತಾರೆ ; ಮತ್ತು ವ್ಯಕ್ತಿ ಸಂಬಂಧಗಳನ್ನು ಹೊಂದಿರುತ್ತಾರೆ. ಈ ಎಲ್ಲವುಗಳನ್ನು ಕಳೆದುಕೊಳ್ಳುತ್ತೇನೆಂಬ ವಿಚಾರವೇ ಅವರ ಮನದಲ್ಲಿ ಭಯವನ್ನು ತುಂಬಿಬಿಡುತ್ತದೆ. ಆ ಜನರಿಗೆ ಅವರು ಹೊಂದಿರುವ ಪದಾರ್ಥಗಳೇ ಅವರ

ವ್ಯಕ್ತಿತ್ವವಾಗಿರುತ್ತದೆ. ಈ ಪದಾರ್ಥಗಳಿಲ್ಲದೆ. ತಾವು ಶೂನ್ಯವಾಗಿಬಿಡುತ್ತೇವೆಂದು ಅವರು ಯೋಚಿಸುತ್ತಾರೆ. ಇದು ಅವರಿಗೆ ಎಲ್ಲಿಲ್ಲದ ನೋವನ್ನುಂಟುಮಾಡುತ್ತದೆ. ಆದರೆ ಸಾವೆಂಬುದು ಜೀವನದ ಸನಾತನ ಸತ್ಯವಾದ ಪರಿಪೂರ್ಣತೆಯತ್ತ ದಿಗ್ದರ್ಶಕವಾಗಿದೆ. ಮೊಗ್ಗು ತಾನೊಂದು ಹೂವಾಗಿ ಅರಳಲು ಸಾಯುತ್ತದೆ. ಆ ಹೂ ಹಣ್ಣಾಗಿ ಜನ್ಮ ಪಡೆಯಲೆಂದೇ ನಶಿಸುತ್ತದೆ. ಸಾವಿನ ನಂತರದ ಪ್ರತಿಯೊಂದು ಹಂತವೂ ಆತ್ಮಪರಿಪೂರ್ಣತೆಯತೆಯ ಸನಿಹಕ್ಕೆ ಇಟ್ಟ ಹೆಜ್ಜೆಯಾಗಿದೆ. ಓರ್ವ ಪರ್ಶಿಯನ್ ಸಂತ ಆತ್ಮವಿನಾಶ ಆತ್ಮಶೋಧನೆಗೆ ದಾರಿಯೆಂದು ಹಾಡಿಲ್ಲವೆ? "ನಾನು ಮರವಾಗಿ ಸತ್ತೆ. ಆದರೆ ಪ್ರಾಣಿಯಾದೆ. ಪ್ರಾಣಿಯಾಗಿ ಸತ್ತೆ. ಮನುಷ್ಯನಾಗಿ ಜನ್ಮವೆತ್ತಿದೆ. ಮನುಷ್ಯನಾಗಿ ಸತ್ತರೆ, ದೇವದೂತನಾಗಿ ಜನ್ಮತಾಳುತ್ತೇನೆ. ಅಂದ ಮೇಲೆ ಸಾಯುವುದರಿಂದ ನಾನೆಂದು ಕೀಳಾದೆ?" ಸಾವು ಖಂಡಿತವಾಗಿಯೂ ಚೇತನಕ್ಕೆ ಮತ್ತು ಜೀವನದ ಈಶ್ವರಿಯತೆಗೆ ಹೆದ್ದಾರಿ.

ಹಾಸ್ಯವು ಪ್ರಾರ್ಥನೆಯ ಹಾಗೆ. ಅದು ಆಲಯದಿಂದ ಬಯಲಿನತ್ತ ಒಯ್ಯುತ್ತದೆ. ಸೂರ್ಯನ ಬೆಳಕಿಗೂ ಮೈ ಒಡ್ಡಿಸುತ್ತದೆ. ಸೋತು ಹೋದ ಮನುಷ್ಯನಿಗೆ ಪ್ರಾಣವಾಯು ಮತ್ತು ಓಝೋನ್ ಇದ್ದಂತೆ ಹಾಸ್ಯ. ಯಾವ ರೀತಿ ನಗರದಲ್ಲಿ ತೋಟ ಮತ್ತು ಕ್ರೀಡಾ ಮೈದಾನಗಳು ಜನನಿಬಿಡ ಪ್ರದೇಶದಲ್ಲಿಯ ಜನರಿಗೆ ಹುಮ್ಮಸ್ಸು ತುಂಬುವ ಗಾಳಿ ಬೀಸಲು ಅನುವುಮಾಡಿಕೊಡುತ್ತವೋ ಹಾಗೆಯೇ ಹಾಸ್ಯ ಮತ್ತು ಪ್ರಾರ್ಥನೆ ಮನುಷ್ಯನ ಪುಪ್ಪುಸಗಳಾಗಿವೆ. ಗಾಂಧೀಜಿ ಆಗಾಗ್ಗೆ ಹೀಗೆ ಹೇಳುತ್ತಿದ್ದದ್ದುಂಟು, "ನನ್ನಲ್ಲೇನಾದರೂ ನಿಯಮಿತ ಪ್ರಾರ್ಥನೆಯ ಅಭ್ಯಾಸದಂತೆ ಹಾಸ್ಯ ಪ್ರಜ್ಞೆಯಿಲ್ಲದೆ ಹೋಗಿದ್ದರೆ ಅನೇಕ ವರ್ಷಗಳ ಕಾಲ ನಾನು ನಡೆಸಿದ್ದ ವಿವಿಧ ಬಗೆಯ ಕಾರ್ಯಬಾಹುಳ್ಯದ ಭಾರವನ್ನು ಹೊರಲು ನನಗೆ ಸಾಧ್ಯವಾಗುತ್ತಿರಲಿಲ್ಲ." ಇದೇ ರೀತಿ ಟಾಗೋರರ ಸಂಭಾಷಣೆಗಳಿಗೂ ಅವರ ಸಾಹಿತ್ಯಕ ಕೃತಿಗಳಿಗೂ ಹಾಸ್ಯದ ಲೇಪನ ಇರದೇ ಇರುತ್ತಿರಲಿಲ್ಲ. ಹಾಸ್ಯ ಮತ್ತು ಪ್ರಾರ್ಥನೆ ಬಂಧುಗಳೇನೋ ಎಂಬಂತಿವೆ. ಒಮ್ಮೆ ಶ್ರದ್ಧಾಳು ಯುವಕ ಓರ್ವ ಆಧ್ಯಾತ್ಮಿಕ ಗುರುವಿನ ಬಳಿ ಹೋಗಿ ತನಗೆ ಆತ್ಮಶಕ್ತಿಯ ನಿಗೂಢತೆಯನ್ನು ಪರಿಚಯಿಸಿಕೊಡಬೇಕೆಂದು ಬಿನ್ನವಿಸಿದ. ಆದರೆ ಗುರು ಆತನಿಗೆ ಹಾಸ್ಯ ಚಟಾಕಿಗಳುಳ್ಳ ಪುಸ್ತಕವನ್ನು ತರಲು ಹೇಳಿದ. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಆ ಹಾಸ್ಯ ಚಟಾಕಿಗಳನ್ನು ಬೇರೆಯವರಿಗೆ ಓದಿ ಹೇಳುವಂತೆ ಸೂಚಿಸಿದ. ಆ ಯುವಕ ಈ ವಿಚಿತ್ರ ಬಗೆಯ ಶಿಕ್ಷಣದ ಬಗ್ಗೆ ಮೂಕ ವಿಸ್ಮಿತನಾದ. ಪ್ರಾರ್ಥನೆಯಂತೆಯೇ ಹಾಸ್ಯ ಕೂಡ ಮನೋಭಿತ್ತಿಯಲ್ಲಿ ಕಿಟಕಿಯನ್ನು ತೆರೆಯುವುದು ನಿಜ. ಈ ಕಿಟಕಿಯ ಮೂಲಕ ಹೊಸ ಗಾಳಿ ಬೀಸಿಬಂದು ಒಳಗಿರುವ ಸ್ವಾರ್ಥದ ಉಸಿರುಗಟ್ಟುವಿಕೆಯನ್ನು ತಪ್ಪಿಸಿ ಬ್ರಹ್ಮಾಂಡದ ವಿಶಾಲತೆಯತ್ತ ನೋಡುವ ಹಾಗೆ ಮಾಡುತ್ತದೆ. ಆಗ ಮನುಷ್ಯ ತನ್ನ ಸ್ವಂತ ಚಿಂತೆಯನ್ನೂ, ಆಶೆಗಳನ್ನೂ, ವ್ಯವಹಾರಗಳನ್ನೂ ಕೆಲ ಗಳಿಗೆಯಾದರೂ ಮರೆಯುವಂತೆ ಮಾಡುತ್ತದೆ. ಆದ್ದರಿಂದ ನಿಜವಾದ ಆಧ್ಯಾತ್ಮಿಕ ಪುರುಷ ಸಂತೋಷಭರಿತನೂ, ಸಹೃದಯಿಯೂ ಆಗಿರುತ್ತಾನೆ. ಅವನು ಓರ್ವ ಪರಿಪೂರ್ಣ ಸಭ್ಯ ವ್ಯಕ್ತಿ. ಹಾಸ್ಯ ಪ್ರವೃತ್ತಿಯಿಲ್ಲದ ವ್ಯಕ್ತಿ ಬೇರೆಯವರ ಬಗ್ಗೆ ಯಾವಾಗಲೂ ಅಸಹನೆಯುಳ್ಳವನೂ, ಅವರು ಏನೇಮಾಡಿದರೂ, ಮಾತನಾಡಿದರೂ

ಅದರ ಬಗ್ಗೆ ಸಹನೆಯಿಲ್ಲದವನೂ ಆಗಿರುತ್ತಾನೆ. ಎಲ್ಲೆಲ್ಲಿಯೂ ಅವನಿಗೆ ಹಠಮಾರಿತನದ ಘಾಟು ಅನುಭವವಾಗುತ್ತದೆ. ಆದ್ದರಿಂದ ತನ್ನ ಅಭಿಪ್ರಾಯಕ್ಕೆ ಭಿನ್ನವಾದುದರ ಆಹ್ವಾನವನ್ನು ಎದುರಿಸುವುದರಿಂದ ವಿಮುಖನಾಗುತ್ತಾನೆ. ಅಂದರೆ ಸತ್ಯದ ಇನ್ನೊಂದು ಪಾರ್ಶ್ವವನ್ನು ತಿಳಿದುಕೊಳ್ಳುವಲ್ಲಿ ವಿಫಲನಾಗುತ್ತಾನೆ. ಪ್ರಾರ್ಥನೆಯಲ್ಲಿಯಂತೆ ಹಾಸ್ಯದಲ್ಲಿ ಕೂಡ ಮೇಲುಕೀಳುಗಳೆಂಬ ಎಲ್ಲ ಭೇದಗಳು ನೆಲಸಮವಾಗುತ್ತವೆ. ಹಾಸ್ಯ ಪ್ರವೃತ್ತಿಯುಳ್ಳ ವ್ಯಕ್ತಿಯ ಮುಖವು ಹೇಗೆ ಸಂತೋಷದಿಂದ ಅರಳಿರುತ್ತದೋ ಹಾಗೆಯೇ ಪ್ರಾರ್ಥನೆಯಲ್ಲಿರುವ ವ್ಯಕ್ತಿಯ ಮುಖವು ಆತ್ಮ ತೇಜಸ್ಸಿನಿಂದ ಅರಳಿರುತ್ತದೆ. ಪ್ರಾರ್ಥನೆ ಮತ್ತು ಹಾಸ್ಯ ನಿಜವಾಗಿಯೂ ಆತ್ಮದ ನಗುವೇ ಆಗಿದೆ. ತನ್ಮೂಲಕ ಅದು ತತ್‌ಕ್ಷಣ ಸಮತೆಯನ್ನು ಸಾಧಿಸುತ್ತದೆ. ಹಾಗೂ ಸಮತೆಯನ್ನು ತರುವ ಕೀಲೂ ಆಗುತ್ತದೆ.

– ಅನು: ಸು.ಕೌ

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು :–

೧. ವ್ಯೋಮಗಾಥೆ

೨. ಕನ್ನಡ ತಾಂತ್ರಿಕ ಕಮ್ಮಟ – ೨೦೦೩ – ಚಂದ್ರನತ್ತ

೩. ಕನ್ನಡ ತಾಂತ್ರಿಕ ಕಮ್ಮಟ – ೨೦೦೪ – ಉಪಗ್ರಹ ಆಧಾರಿತ ಪಥ ನಿರ್ದೇಶನ

೪. ಕನ್ನಡ ತಾಂತ್ರಿಕ ಕಮ್ಮಟ – ೨೦೦೫– ಅಂತರಿಕ್ಷದಲ್ಲಿ ಮಾನವ

೫. ಕನ್ನಡ ತಾಂತ್ರಿಕ ಕಮ್ಮಟ – ೨೦೦೬– ಸಣ್ಣ ಉಪಗ್ರಹಗಳ ತಂತ್ರಜ್ಞಾನಗಳು

೬. ಕನ್ನಡ ತಾಂತ್ರಿಕ ಕಮ್ಮಟ – ೨೦೦೩– ಉಪಗ್ರಹಗಳ ಪ್ರಯೋಜನಗಳು

ಪ್ರಕಾಶಕರು :–

ಕರ್ನಾಟಕ ರಾಜ್ಯೋತ್ಸವ ಸಮಿತಿ ಹಾಗೂ ಇಸ್ರೋ ಉಪಗ್ರಹ ಕೇಂದ್ರ,
ಬೆಂಗಳೂರು – ೫೬೦೦೧೭

ಬೆಂಗಳೂರಿನಲ್ಲಿರುವ ಇಸ್ರೋ ಉಪಗ್ರಹ ಕೇಂದ್ರ ಕನ್ನಡದಲ್ಲಿ ಆಕಾಶದ ಮತ್ತು ಮುಖ್ಯವಾಗಿ ಉಪಗ್ರಹಗಳ ಹಾಗೂ ಚಂದ್ರನ ವಿಷಯವಾಗಿ ವೈಜ್ಞಾನಿಕ ಸಾಹಿತ್ಯವನ್ನು ಹೊರತರುತ್ತಿರುವುದು ಮೆಚ್ಚತಕ್ಕ ಕಾರ್ಯವಾಗಿದೆ. ಕರ್ನಾಟಕ ರಾಜ್ಯೋತ್ಸವವನ್ನು ಇಸ್ರೋ ಸಂಸ್ಥೆ ಕನ್ನಡ ಭಾಷೆಯಲ್ಲಿ ವೈಜ್ಞಾನಿಕ ವಿಚಾರಗಳ ಪ್ರಕಟಣಾಶಕ್ತಿಯನ್ನು ಸಮರ್ಥವಾಗಿ ಬೆಳೆಸುವ ಕಾರ್ಯವನ್ನು ಮಾಡುತ್ತಾ ಬರುವುದರ ಮೂಲಕ ಆಚರಿಸಿದೆ. ಇಷ್ಟರಲ್ಲಿಯೆ ಚಂದ್ರಯಾನ ಎಂಬ ಯೋಜನೆಯಡಿಯಲ್ಲಿ ಚಂದ್ರಗ್ರಹಕ್ಕೆ ಮಾನವನನ್ನು ಕಳುಹಿಸುವ ದೊಡ್ಡ ವೈಜ್ಞಾನಿಕ ಸಾಹಸದಲ್ಲಿ ಇಸ್ರೋ ತೊಡಗಿರುವಾಗ ಸಹಜವಾಗಿಯೆ ಎಲ್ಲರ ಗಮನ ಈ ವಿಷಯದತ್ತ ಹೊರಳುವುದು ಸ್ವಾಭಾವಿಕ. ಯಾವುದೇ ಕ್ಷೇತ್ರದ ಮಹತ್ತರ ಸಾಧನೆ ಜನಸಾಮಾನ್ಯರನ್ನು ಅಜ್ಞಾನದಲ್ಲಿಟ್ಟು ಸಾಗಿದರೆ ಅದಕ್ಕೆ ಯಾವುದೇ ಜನಪದ ಮನ್ನಣೆ ಸಿಗದೆ ಅದರ ಉದ್ದೇಶಿತ ಗುರಿಗಳು ನೆರವೇರದೆ ಉಳಿದು ಹೋಗುತ್ತವೆ.

೧೮ ನೇ ಪುಟ ನೋಡಿ

ವಸಂತಗಳೇಕೆ ಮೌನವಾಗುತ್ತಿವೆ?

– ವೀಜಿ

ರಾಸಾಯನಿಕ ವಿಷ ಬಳಕೆಯಿಂದ ಪ್ರಕೃತಿಯ ಮೇಲಾಗುವ ಭಯಾನಕ ಪರಿಣಾಮವನ್ನು 'ವಸಂತಗಳೇಕೆ ಮೌನವಾಗುತ್ತಿವೆ' ಎಂಬ ಕಾವ್ಯಾತ್ಮಕ ಸೂಕ್ಷ್ಮ ಪ್ರಶ್ನೆ ಕೇಳುತ್ತಲೇ ತೋರಿಸಿಕೊಟ್ಟ, ಈ ವಿಷವರ್ತುಲದಲ್ಲಿ ಸಿಕ್ಕಿಬಿದ್ದ ಜಗತ್ತಿಗೆ ಅದರ ಅಪಾಯದ ಆಳ-ಅಗಲಗಳೆಡೆಗೆ ಕಣ್ಣು ತೆರೆಸಿ ಜಾಗತಿಕ ಪರಿಸರ ಚಳವಳಿಗೆ ಬುನಾದಿ ಹಾಕಿದ ರೇಚಲ್ ಕಾರ್ಸನ್ ಎಂಬ ಅಸಾಧಾರಣ ಮಹಿಳೆಯ ಜನ್ಮ ಜತಾಬ್ದಿ ಈಗ. "ಕವಯತ್ರಿಯ ಸಂವೇದನಾಶೀಲತೆ, ವಿಜ್ಞಾನಿಯ ಕಟ್ಟುನಿಟ್ಟು" ಹೊಂದಿದ ಈ ಅಪರೂಪದ ಮಹಿಳೆಯನ್ನು ಯು.ಎಸ್. ಸೆನೆಟ್‌ನಲ್ಲಿ ಒಂದು ಗೌರವಾರ್ಥ ನಿರ್ಣಯ ಹೊರತರಲು ಮೇರಿ ಲ್ಯಾಂಡ್‌ನ ಸೆನೆಟರ್ ಬೆಂಜಮಿನ್ ಕಾರ್ಡಿನ್ ಯೋಜಿಸಿದ್ದರು. ರಸಾಯನಿಕ ಕೈಗಾರಿಕೆಗೆ ಇದು ನುಂಗಲಾರದ ತುತ್ತಾಯಿತು. ತಮ್ಮೆಲ್ಲ ಬಲವನ್ನು ಬಳಸಿ ಸೆನೆಟ್‌ನ ಕೆಲ ರಿಪಬ್ಲಿಕನ್‌ಗಳ ಮೂಲಕ ಈ ನಿರ್ಣಯ ಹೊರಬರದಂತೆ ನೋಡಿಕೊಂಡಿದ್ದಾರೆ. 'ಡಿ.ಡಿ.ಟಿ ಬಳಕೆ ನಿಷೇಧಿಸಿದ್ದರಿಂದ ಸೊಳ್ಳೆಗಳು ಹೆಚ್ಚಾಯಿತು' ಎಂಬ ಅವೈಜ್ಞಾನಿಕ ಸವಕಲು ಹೇಳಿಕೆಯನ್ನೇ ಇಲ್ಲಿಯೂ ಮುಂದಿಟ್ಟರು. ಬೇರೆ ಯಾವ ವಾದವೂ ಅವರಿಗೆ ಹೊಳೆಯಲಿಲ್ಲ. ಡಿ.ಡಿ.ಟಿ ನಿಷೇಧಕ್ಕೆ ಕಾರಣವಾದ ಈಕೆ ಜಗತ್ತಿನಾದ್ಯಂತ ಲಕ್ಷಾಂತರ ಜನ ಮಲೇರಿಯದಿಂದ ಸಾಯುವುದಕ್ಕೆ ಕಾರಣಳಾಗಿದ್ದಾಳೆ ಎಂದು ಹೇಳುತ್ತಾ ಯುಗಾಂಡದಲ್ಲಿ ೨೦೦೫ರಲ್ಲಿ ಮಲೇರಿಯಾದಿಂದ ಸತ್ತ ೫೦ ಮಕ್ಕಳ ಫೋಟೋಗಳನ್ನು ಪ್ರದರ್ಶಿಸುತ್ತಾರೆ. ನಿಜ ಏನೆಂದರೆ, ಡಿ.ಡಿ.ಟಿ ಅಧಿಕೃತವಾಗಿ ನಿಷೇಧಗೊಂಡ ದಶಕದ ಹಿಂದೆಯೆ ಆಫ್ರಿಕಾದಲ್ಲಿ ಅದರ ಬಳಕೆಯನ್ನು ನಿಲ್ಲಿಸಲಾಗಿತ್ತು. ಸೊಳ್ಳೆಗಳು ಅದಕ್ಕೆ ಸಂಪೂರ್ಣ ಪ್ರತಿರೋಧ ಬೆಳೆಸಿಕೊಂಡಿದ್ದ ಕಾರಣ ಅದರ ಬಳಕೆ ಕೈಬಿಡಲಾಗಿತ್ತು.

ರೇಚಲ್ ಕಾರ್ಸನ್ ಒಂದು ಶತಮಾನದ ಹಿಂದೆ ಅಂದರೆ, ೨೭ಮೇ ೧೯೦೭ರಲ್ಲಿ ಜನಿಸಿದರು. ತಮ್ಮ ಪುಸ್ತಕಗಳ ಮೂಲಕ ಮತ್ತು ಪರಿಸರಕ್ಕೆ ಎಗ್ಗಿಲ್ಲದ ಹರಡುವ ವಿಷಗಳ ವಿರುದ್ಧ ದಿಟ್ಟವಾದ ಹೋರಾಟ ಕಟ್ಟುವ ಮೂಲಕ ಆಧುನಿಕ ಜಾಗತಿಕ ಪರಿಸರ ಚಳವಳಿಗೆ ನಾಂದಿಯಾದರು. ಜೀವ ಶಾಸ್ತ್ರಜ್ಞೆ ರೇಚಲ್ ಕಾರ್ಸನ್ ಸಾಗರ ಜೀವಶಾಸ್ತದಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ಅವರು ೧೯೬೨ರಲ್ಲಿ ಪ್ರಕಟಿಸಿದ ತಮ್ಮ ಪುಸ್ತಕ ***Silent Spring*** ನಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆಯನ್ನು ಕಟುವಾಗಿ ಪ್ರಶ್ನಿಸಿದರು. ಇವರ ಪುಸಕದಿಂದಾಗಿ ಮೊಟ್ಟ ಮೊದಲ ಬಾರಿಗೆ ಅಮೆರಿಕದಲ್ಲಿ ಡಿ.ಡಿ.ಟಿಯ ಬಳಕೆಯ ಮೇಲೆ ನಿಷೇಧ ತರಲಾಯಿತು.

ತಮ್ಮ ಈ ಹೋರಾಟದಿಂದಾಗಿ ಅವರು ಕೃಷಿ ಮತ್ತು ರಾಸಾಯನಿಕ ಕೈಗಾರಿಕೆಗಳ ಕೆಂಗಣ್ಣಿಗೆ ಬಲಿಯಾದರು. ಅವರನ್ನು 'ವೃತ್ತಿಪರತೆ ಇಲ್ಲದ ಹುಚ್ಚು ಕಮ್ಯೂನಿಸ್ಟ್ ಹೆಂಗಸು' ಎಂದು ಕಾರ್ಪೊರೇಟ್ ಪ್ರಪಂಚ ಹೀಗಳೆಯಿತು. ಇವರ ವಿರುದ್ಧದ ಪ್ರಚಾರ ಇವತ್ತಿಗೂ ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆಯೆಂದರೆ, ಇಲ್ಲಿನ ಹಿತಾಸಕ್ತಿಗಳೆಲ್ಲ ಒಂದಾಗಿ "CO2: we call it life"- misinformation campaign on climate change ಎಂಬ ಹಾಸ್ಯಾಸ್ಪದ ಗುಂಪು ಕಟ್ಟಿಕೊಂಡಿದ್ದಾರೆ.

ಪ್ರಕೃತಿಯೊಂದಿಗಿನ ನಮ್ಮ ಬೆಚ್ಚಗಿನ–ನಿಕಟ ಸಂಬಂಧದ ಬಗ್ಗೆ ನಮ್ಮ ಅರಿವನ್ನು ತಟ್ಟಿ ಎಬ್ಬಿಸಲು ಪ್ರಯತ್ನಿಸಿದ ಕಾರ್ಸನ್ ಅಪ್ರತಿಮ ಸಾಗರ ಜೀವ ಶಾಸ್ತ್ರಜ್ಞೆ ಎಂಬುದು

ಅಷ್ಟೇನೂ ಪ್ರಚಾರವಾಗಿಲ್ಲ. "The Edge of the Sea"ಎನ್ನುವ ಅವರ ಪುಸ್ತಕ ಸಾಗರ ಬದುಕಿನ ಬಗ್ಗೆ ಪ್ರಪಂಚದಾದ್ಯಂತ ಅನೇಕರ ಅರಿವನ್ನೇ ಬದಲಾಯಿಸಿದೆ.

೧೯೬೨ರಲ್ಲಿ ಪ್ರಕಟವಾದ ಕಾರ್ಸನ್‌ರ ಈ ಪುಸ್ತಕ ಕೀಟನಾಶಕಗಳ ಎಗ್ಗಿಲ್ಲದ ಬಳಕೆಯಿಂದ ಪರಿಸರ ಮತ್ತು ಮಾನವರ ಮೇಲಾಗುತ್ತಿರುವ ಪರಿಣಾಮವನ್ನು ತೀಕ್ಷ್ಣವಾಗಿ ಹೇಳುವ ಮೂಲಕ ಇಡೀ ಪ್ರಪಂಚದಲ್ಲೇ ಕ್ರಾಂತಿಕಾರಿ ಬದಲಾವಣೆಗಳ ಅಲೆ ಎಬ್ಬಿಸಿತು. ಅಂತರಾಷ್ಟ್ರೀಯವಾಗಿ ಬೆಸ್ಟ್ ಸೆಲ್ಲರ್ ಪುಸ್ತಕವೆಂಬ ಮನ್ನಣೆಗೆ ಒಳಗಾಯಿತು.

ಪುಸ್ತಕದ ಮೊದಲ ಕೆಲವು ಅಧ್ಯಾಯಗಳಲ್ಲಿ ರೇಚಲ್ ಕಾರ್ಸನ್, ಪ್ರತಿ ವರ್ಷ ಸೇರ್ಪಡೆಗೊಳ್ಳುವ ಸುಮಾರು ೫೦೦ ರಾಸಾಯನಿಕ ಕೀಟನಾಶಕಗಳು ಈ ಭೂಮಿಯನ್ನು ಎಲ್ಲ ಬಗೆಯ ಜೀವಿಗಳಿಗೆ ಬದುಕಲು ದುಃಸ್ಸಾಧ್ಯವಾದ ತಾಣವಾಗಿ ಹೇಗೆ ಪರಿಣಮಿಸುತ್ತಿವೆ, ಕೇವಲ ಕೀಟಗಳ ಮೇಲಷ್ಟೇ ಅವುಗಳ ಪರಿಣಾಮವನ್ನು ನೋಡುವ ತಜ್ಞರು ಅದರ ಒಟ್ಟಾರೆ ಪರಿಣಾಮವನ್ನು ನೋಡುವ ಕಣ್ಣುಕಳೆದುಕೊಂಡಿದ್ದಾರೆ ಎಂದು ನಿದರ್ಶನ ಸಹಿತ ವಾದಿಸುತ್ತಾರೆ.

ಕ್ಲೋರಿನೀಕರಿಸಿದ ಹೈಡ್ರೋ-ಕಾರ್ಬನ್‌ಗಳು ಮತ್ತು ಆಗ್ರಾನೋಫಾಸ್ಫೇಟ್‌ಗಳು, ಹಕ್ಕಿಗಳು ಮತ್ತು ಮೀನುಗಳನ್ನೂ ದೊಡ್ಡರೀತಿಯಲ್ಲಿ ಕೊಲ್ಲುತ್ತಿವೆ ಮತ್ತು ಮಾನವನ ನರಮಂಡಲದ ಮೇಲೆ ಪರಿಣಾಮ ತಂದು ಅಪಾರ ಸಾವುಗಳಿಗೆ ಕಾರಣವಾಗಿವೆ ಎಂದು ತೋರಿಸಿಕೊಡುತ್ತಾರೆ. ಒಂದು ಕಾಲಕ್ಕೆ ಕಳೆನಾಶಕಗಳು ಪ್ರಾಣಿಗಳಿಗೆ ಅಪಾಯವಿಲ್ಲ ಎಂದು ತಿಳಿಯಲಾಗಿತ್ತು. ಆದರೆ ಅವು ಭೂಮಿಯ ಮೇಲಿನ ಮತ್ತು ಭೂಮಿ ಒಳಗಿನ ನೀರನ್ನು ಹೇಗೆ ವಿಷಗೊಳಿಸುತ್ತವೆ ಎಂದು ಕಾರ್ಸನ್ ತೋರಿಸಿಕೊಟ್ಟರು. ಮಣ್ಣಿಗೆ ರಾಸಾಯನಿಕಗಳನ್ನು ಕೊಡುವುದರಿಂದ ಅಲ್ಲಿರುವ ಜೀವಿಗಳು ಹೇಗೆ ಸರ್ವನಾಶವಾಗಿ ಹೋಗುತ್ತವೆ ಮತ್ತು ಇದರಿಂದ ಪ್ರಕೃತಿಯಲ್ಲಿ ಹೇಗೆ ಅಸಮತೋಲನ ಉಂಟಾಗುತ್ತದೆ ಎಂದು ಮೊಟ್ಟಮೊದಲು ತಮ್ಮ ಈ ಪುಸ್ತಕದಲ್ಲಿ ವಿವರಿಸುತ್ತಾರೆ. ಅಲ್ಲದೆ ರಾಸಾಯನಿಕ ವಿಷದಿಂದ ಸತ್ತ ಹುಳಗಳನ್ನು ತಿಂದ ಪ್ರಾಣಿಗಳಿಗೆ ವಿಷ ರವಾನೆಯಾಗಿ ಸಾಯುವ, ಮಣ್ಣಿನಲ್ಲಿ ಕ್ಲೋರಿನೀಕರಿಸಿದ ಹೈಡ್ರೋ-ಕಾರ್ಬನ್‌ಗಳು ಬಹು ದಿನಗಳ ಕಾಲ ಇದ್ದಾಗ ಅಲ್ಲಿ ಬೆಳೆಯುವ ಸಸ್ಯಗಳಿಗೆ ಅವು ರವಾನೆಯಾಗುವ ರೀತಿಯನ್ನು ತೋರಿಸಿಕೊಡುತ್ತಾರೆ.

ಸಾಕಷ್ಟು ಪರಿಣಾಮಕಾರಿ ಜೈವಿಕ ಕೀಟನಾಶಕಗಳು, ಸಸ್ಯಜನ್ಯ ಉತ್ಪನ್ನಗಳು ಇದ್ದಾಗ್ಯೂ ಸರ್ಕಾರಗಳು ಮತ್ತು ವಿಜ್ಞಾನಿಗಳು ಕಟು ವಿಷದ ಬಳಕೆಯನ್ನೇ ಉತ್ತೇಜಿಸುತ್ತಾರೆ/ ಶಿಫಾರಸು ಮಾಡುತ್ತಾರೆ. ಇದರಿಂದ ಪರಿಸರ, ಪ್ರಾಣಿ, ಪಕ್ಷಿ ಜೀವ ಜೀವಾಣುಗಳಾದಿಯಾಗಿ ಮಾನವರ ಮೇಲೆ ಉಂಟಾಗುವ ಪರಿಣಾಮವನ್ನು ಅವರು ಪರೀಕ್ಷೆ ಮಾಡುವುದೂ ಇಲ್ಲ. ಯೋಚಿಸುವುದೂ ಇಲ್ಲ ಎಂದು ಹೇಳುತ್ತಾರೆ.

ಆಹಾರದಲ್ಲಿನ ವಿಷಶೇಷದ ಅಪಾಯ ಕುರಿತು ಕಾರ್ಸನ್ ಅವರು, ಈ ವಿಚಾರದಲ್ಲಿ ಸರ್ಕಾರ ಆಡಳಿತದ ಮೂಲಕ ಕೊಡುವ ರಕ್ಷಣೆ ಕನಿಷ್ಟವಾದದ್ದಾಗಿದ್ದು ಒಂದು ರೀತಿಯ ಸುಳ್ಳು ಭದ್ರತೆಯ ಭಾವನೆ ಕೊಡುತ್ತದೆ ಎಂದು ಹೇಳುತ್ತಾರೆ. ಯಾಕೆಂದರೆ ಇದರ ಬಗ್ಗೆ ಲಭ್ಯವಿರುವ ಮಾಹಿತಿ ತೀರಾ ಅಪೂರ್ಣ. ಕೀಟನಾಶಕಗಳಿಂದ ಮಾನವರ ಆರೋಗ್ಯದ ಮೇಲಾಗುವ ಪರಿಣಾಮವನ್ನು ವಿವರವಾಗಿ ಪ್ರಸ್ತಾಪಿಸುವ ಅವರು, ಸಣ್ಣ ಸಣ್ಣ ಪ್ರಮಾಣದಲ್ಲಿ ನಿರಂತರವಾಗಿ ಸೇರುತ್ತಾ ಹೋಗುವ ವಿಷ ದೊಡ್ಡ ಸಮಸ್ಯೆಗಳಿಗೆ ಹೇಗೆ ಎಡೆಮಾಡಿಕೊಡುತ್ತದೆ ಎಂದು ತೋರಿಸುತ್ತಾರೆ. 'ತಡವಾಗಿ ಕಾಣಿಸಿಕೊಳ್ಳುವ ದೈಹಿಕ ರೋಗ ಚಿನ್ಹೆಗಳು' (delayed physiological symptoms ಉದಾ., ಮಾನಸಿಕ

ರೋಗಗಳು ಕ್ಯಾನ್ಸರ್ ಇತ್ಯಾದಿ) ಎಂಬ ಪರಿಕಲ್ಪನೆಯನ್ನು ಅವರು ಈ ಪುಸ್ತಕದಲ್ಲಿ ಮೊಟ್ಟಮೊದಲ ಬಾರಿಗೆ ಪ್ರಸ್ತಾಪಿಸಿದ್ದಾರೆ. ಡಿ.ಡಿ.ಟಿ ಮುಂತಾದವುಗಳ ಬಳಕೆಯಿಂದ ಟ್ಯೂಮರ್ ಮತ್ತು ರಕ್ತದ ಕ್ಯಾನ್ಸರ್ ಬಂದಿರುವ ಉದಾಹರಣೆಗಳನ್ನು ತೋರಿಸಿಕೊಡುತ್ತಾ ಡಿ.ಡಿ.ಟಿ ಬಳಸಿ ಸೊಳ್ಳೆಗಳನ್ನು ದೂರೀಕರಿಸುವ ಲಾಭಕ್ಕಿಂತ ಅದಕ್ಕೆ ತೆರಬೇಕಾಗಿರುವ ಬೆಲೆ ಎಷ್ಟು ದುಬಾರಿ ಎಂದು ಆಶ್ಚರ್ಯಪಡುತ್ತಾರೆ.

ಕಾರ್ಸನ್ ಅವರು ಕೀಟಗಳು ಕೀಟನಾಶಕಗಳಿಗೆ ಪ್ರತಿರೋಧ ಬೆಳೆಸಿಕೊಳ್ಳುವ ಬಗ್ಗೆ ಇಲ್ಲಿ ವಿಸ್ತಾರವಾಗಿ ವಿವರಿಸುತ್ತಾರೆ. ಇದಕ್ಕಾಗಿ ವಿಷದ ಪ್ರಮಾಣ ಹೆಚ್ಚಿಸುವ ಮತ್ತು ಸಿಂಪಡಣೆಗಳ ನಡುವಿನ ಅವಧಿಯನ್ನು ಕಡಿಮೆಮಾಡುವ ವಿ.ವಿ.ಗಳ/ ವಿಜ್ಞಾನಿಗಳ ದುಃಸ್ಸಾಹಸವನ್ನು ಖಂಡಿಸುತ್ತಾರೆ. ಪ್ರಕೃತಿಯನ್ನು ನಿಯಂತ್ರಿಸುತ್ತೇವೆನ್ನುವ ನಮ್ಮ ಆಸೆ ಒಂದು ದೊಡ್ಡ ದುರಹಂಕಾರವಲ್ಲದೆ ಬೇರೇನೂ ಅಲ್ಲ ಎಂದು ಹೇಳುವ ಮೂಲಕ ಪುಸ್ತಕವನ್ನು ಕೊನೆಗೊಳಿಸುತ್ತಾರೆ ಕಾರ್ಸನ್.

ಕಾರ್ಸನ್ ಮರಣವಾಗಿ ನಲವತ್ತು ವರ್ಷಗಳ ನಂತರ ಈಗಲೂ ಈ ಪುಸ್ತಕ ಭಾವತೀವ್ರತೆಯ ಅಲೆಗಳನ್ನು ಎಬ್ಬಿಸುತ್ತಲೇ ಇದೆ. ಒಂದು ಪುಸ್ತಕ ಸಮಾಜ ಬದಲಾವಣೆಯ ಹಾದಿಯಲ್ಲಿ ಎಂತಹ ಪಾತ್ರ ವಹಿಸಿಬಲ್ಲುದು ಎಂಬುದಕ್ಕೆ ಇದೊಂದು ಉದಾಹರಣೆ. ಒಬ್ಬ ಸೂಕ್ಷ್ಮ ಮನಸ್ಸಿನ ಮಹಿಳೆ ಪ್ರಪಂಚದ ಅತ್ಯಂತ ಬಲಶಾಲೀ ಕೈಗಾರಿಕೆಯಾದ ಕೀಟನಾಶಕ ಕೈಗಾರಿಕೆಯ ಮೇಲೆ ಚೇತರಿಸಿಕೊಳ್ಳಲಾಗದ ತೀಕ್ಷ್ಣ ಪ್ರಹಾರ ಕೊಟ್ಟ ಮತ್ತು ಪ್ರಕೃತಿಯ ಮೇಲೆ ಮಾನವನ ಪ್ರಭಾವ ಕುರಿತ ಅತಿ ಮುಖ್ಯ ಪ್ರಶ್ನೆಗಳನ್ನು ಎತ್ತಿದ ಮೊಟ್ಟ ಮೊದಲ ಸಂಗತಿ ಇದು.

ಪ್ರಪಂಚ ಎಂದು ಕಂಡರಿಯದ ಅತ್ಯಂತ ಬಲಶಾಲೀ ಕೀಟನಾಶಕ ಡಿ.ಡಿ.ಟಿ ಪ್ರಕೃತಿಯನ್ನೇ ನಿಶ್ಚಲಗೊಳಿಸಿಬಿಡುವ ಸಾಮರ್ಥ್ಯ ಹೊಂದಿದೆ. ಇತರ ಅನೇಕ ಕೀಟನಾಶಕಗಳಂತಲ್ಲದ ಈ ಡಿ.ಡಿ.ಟಿ ಒಂದೇ ಬೀಸಿಗೆ ಕೋಟ್ಯಾನುಕೋಟಿ ಜೀವಜಂತುಗಳನ್ನು ನಿರ್ನಾಮ ಮಾಡಬಿಡುವ ಡೆಡ್ಲಿ ವಿಷ. ೧೯೩೯ರಲ್ಲಿ ಸೊಳ್ಳೆ ನಾಶಕವಾಗಿ ಇದನ್ನು ಕಂಡುಹಿಡಿದ ವಿಜ್ಞಾನಿಗೆ ನೊಬೆಲ್ ಪಾರಿತೋಷಕ ಕೊಡಲಾಗಿದೆ. ೧೯೬೩ರಲ್ಲಿ ಅಮೇರಿಕಾ ದೇಶದ ಮುಖ್ಯ ಸಂಕೇತವಾದ ಹದ್ದು/ಗರುಡ ವಿನಾಶದ ಅಂಚಿನಲ್ಲಿರುವುದು ಕಂಡುಬಂತು. ತಾಯಿ ಹದ್ದು ಡಿ.ಡಿ.ಟಿ ಪೂರಿತ ಜೀವಿಗಳನ್ನು ತಿನ್ನುತ್ತಿದ್ದರಿಂದ ಅದರ ಮೊಟ್ಟೆಗಳು ಮರಿಯಾಗುವುದಕ್ಕೆ ಮುಂಚೆ ಒಡೆದು ನಾಶವಾಗುತ್ತಿದ್ದವು. ಆಗ ದೇಶದಲ್ಲಿ ಬೆಳೆಗಳ ಮೇಲೆ ಪ್ರಯೋಗಿಸಲಾಗುತ್ತಿದ್ದ ಪ್ರಮುಖ ಕೀಟನಾಶಕ ಡಿ.ಡಿ.ಟಿಯಾಗಿತ್ತು. ೧೯೭೨ರಲ್ಲಿ ಅಮೆರಿಕಾದಲ್ಲಿ ಡಿ.ಡಿ.ಟಿ ನಿಷೇಧವಾಯಿತು. ಆಗ ಹದ್ದುಗಳ ಸಂಖ್ಯೆ ೪೧೭ ಜೋಡಿಗಳಿಗೆ ಇಳಿದಿದ್ದು ಅವು ವಿನಾಶದ ಅಂಚಿನಲ್ಲಿರುವ ಪಕ್ಷಿಗಳ ಸಾಲಿಗೆ ಸೇರಿದ್ದವು. ೧೯೯೫ರ ವೇಳೆಗೆ ಇವುಗಳ ಸಂಖ್ಯೆ ೪೭೧೨ ಜೋಡಿಗಳಾಗಿತ್ತು! ವಿನಾಶದ ಅಂಚಿನಲ್ಲಿರುವ ಪ್ರಬೇಧಗಳ ಪಟ್ಟಿಯಿಂದ ಅವನ್ನು ತೆಗೆದು ಹಾಕಲಾಯಿತು. ಇದರ ಹೆಮ್ಮೆ ಕಾರ್ಸನ್‌ರ ಸೈಲೆಂಟ್ ಸ್ಪ್ರಿಂಗ್ ಪುಸ್ತಕಕ್ಕೆ ಸೇರುತ್ತದೆ.

ಹದ್ದು ಮಾತ್ರವಲ್ಲ ಸಾವಿರಾರು ಹಾಡು ಹಕ್ಕಿಗಳು ನಾಶವಾಗುತ್ತಾ ನಮ್ಮ ವಸಂತಗಳೇ ಮೌನವಾಗುತ್ತಿವೆ. ಹಕ್ಕಿಗಳ ಹಾಡುನಿಲ್ಲುತ್ತಿದೆಯೆಂದರೆ ಅದು ಮಾನವ ಕುಲದ ಹಾಡೂ ನಿಲ್ಲುವುದರ ಸೂಚನೆ ಎಂದು ಕಾರ್ಸನ್ ಹೇಳುತ್ತಾರೆ. ತಮ್ಮ ನೆಚ್ಚಿನ ವಿಷಯವಾದ ಪರಿಸರ ಶಾಸ್ತ್ರದಲ್ಲಿ ಸಂಶೋಧನೆ ಮಾಡಹೊರಟ ಕಾರ್ಸನ್ ಕೀಟನಾಶಕದ ಪರಿಣಾಮದ ಮೇಲೆ ಸಂಶೋಧನೆಗೆ ಇಳಿಯುತ್ತಾರೆ.

೧೯೫೮ರಿಂದಲೇ ಕಾರ್ಸನ್ ಡಿ.ಡಿ.ಟಿ ಬಗ್ಗೆ ಬರೆಯಲು ಪ್ರಾರಂಭಿಸುತ್ತಾರೆ. ಹಕ್ಕಿಗಳು ದೊಡ್ಡ ಸಂಖ್ಯೆಯಲ್ಲಿ ಸಾಯುತ್ತಿರುವ ಬಗ್ಗೆ ವಿಸ್ತಾರವಾಗಿ ಪತ್ರಿಕೆಗಳಲ್ಲಿ ಬರೆಯುತ್ತಾರೆ. ೧೯೬೨ರಲ್ಲಿ ನ್ಯೂ ಯಾರ್ಕರ್ ಪತ್ರಿಕೆಗೆ ಇದರ ಬಗ್ಗೆ ಬರೆದಾಗ ಟೀಕೆಗಳು, ಜನಸ್ಪಂದನೆ ಸ್ಫೋಟಕ ರೀತಿಯಲ್ಲಿ ಬರುತ್ತದೆ. ಅವರು ಬೆಸ್ಟ್ ಸೆಲ್ಲಿಂಗ್ ಲೇಖಕಿಯಾದರೂ ಡಿ.ಡಿ.ಟಿ. ಬಳಕೆ ಮಾತ್ರ ಮುಂದುವರೆಯುತ್ತದೆ.

ಸೈಲೆಂಟ್ ಸ್ಪ್ರಿಂಗ್ ಬರೆಯಲು ಕಾರ್ಸನ್ ನಾಲ್ಕು ವರ್ಷ ತೆಗೆದುಕೊಳ್ಳುತ್ತಾರೆ. ಡಿ.ಡಿ.ಟಿ. ಹೇಗೆ ಆಹಾರ ಸರಪಳಿಯನ್ನು ಪ್ರವೇಶಿಸಿ ಪ್ರಾಣಿಗಳ, ಮಾನವರ ಅಂಗಾಂಗಗಳಲ್ಲಿ ಹೇಗೆ ಶೇಖರಣೆಯಾಗುತ್ತಾ ಹೋಗುತ್ತದೆ ಎಂದು ಅಪಾರ ತಾಳ್ಮೆಯಿಂದ ವಿವರಿಸುತ್ತಾರೆ. ಒಂದು ಸಲ ಬೆಳೆಯ ಮೇಲೆ ಸಿಂಪಡಿಸಿದರೆ ತಿಂಗಳಾನುಗಟ್ಟಲೆ ಅಲ್ಲಿ ಇರುವ ಎಲ್ಲ ಕೀಟಗಳನ್ನು ನಾಶಪಡಿಸುತ್ತದೆ. ಮಳೆ ಬಂದು ಹೋದರೂ ಇದರ ಪರಿಣಾಮ ಇನ್ನೂ ಇರುತ್ತದೆ. "A fable for tomorrow" ಎಂಬ ತಮ್ಮ ಪುಸ್ತಕದ ಅತ್ಯಂತ ಕೌತುಕಮಯ ಅಧ್ಯಾಯದಲ್ಲಿ ಅವರು, ಒಂದು ಅಮೆರಿಕನ್ ಊರಿನಲ್ಲಿ ಮೀನಿನಿಂದ ಹಿಡಿದು ಹಕ್ಕಿಗಳವರೆಗೆ, ಅರಳುವ ಹೂಗಳಿಂದ ಹಿಡಿದು ಪುಟ್ಟ ಕಂದಮ್ಮಗಳವರೆಗೆ ಎಲ್ಲವೂ ಡಿ.ಡಿ.ಟಿ ಬಳಕೆಯಿಂದ ಮೌನಗೊಂಡ ಚಿತ್ರಣವನ್ನು ಕೊಡುತ್ತಾರೆ.

ಈ ಪುಸ್ತಕಕ್ಕೆ ಸಾಕಷ್ಟು ಪ್ರತಿರೋಧವನ್ನು ಮೊದಲೇ ಎದುರಿಸಿದ್ದ ಇವರು, ೫೫ ಪುಟಗಳ ದೀರ್ಘ ಟಿಪ್ಪಣಿ ಮತ್ತು ಇದನ್ನು ಓದಿ ಸಮ್ಮತಿ ಸೂಚಿಸಿದ ತಜ್ಞರ ಪಟ್ಟಿಯನ್ನು ಪುಸ್ತಕದ ಕೊನೆಗೆ ಕೊಟ್ಟಿದ್ದಾರೆ. ಅಮೆರಿಕದ ಅಧ್ಯಕ್ಷರು ಇದರ ಬಗ್ಗೆ ಪರಿಶೀಲನೆಗೆ ಆದೇಶ ಕೊಟ್ಟಾಗ ಅನೇಕ ಹೆಸರಾಂತ ವಿಜ್ಞಾನಿಗಳು ಈಕೆಯನ್ನು ಬೆಂಬಲಿಸಿ ನಿಲ್ಲುತ್ತಾರೆ. ಈ ಹೊತ್ತಿಗೂ ಅದು ನಡೆಯುತ್ತಲೇ ಇದೆ.

ಈ ಪುಸ್ತಕದ ಅತಿ ಮುಖ್ಯ ಕೊಡುಗೆಯೆಂದರೆ, ಪ್ರಕೃತಿ ಮಾನವನ ಕೈವಾಡದಿಂದ ನಲುಗುತ್ತದೆ ಎಂಬ ಅರಿವನ್ನು ಪ್ರಚುರಪಡಿಸಿದ್ದು. ಮತ್ತು ಬಹುತೇಕ ತಾಂತ್ರಿಕ ಪ್ರಗತಿ, ಆರ್ಥಿಕ ಪ್ರಗತಿಗಳು ನೇರವಾಗಿ ಪ್ರಕೃತಿಯ ಯಾವತ್ತೂ ಪ್ರಕ್ರಿಯೆ/ ಆಗುಹೋಗುಗಳ ಮೇಲೆ ದುಷ್ಪರಿಣಾಮ ಬೀರುವುದರಿಂದ ಅವುಗಳನ್ನು ಒಂದು ಹಂತದಲ್ಲಿ ತಡೆಹಿಡಿಯಲೇಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದ್ದು.

ರಾಸಾಯನಿಕ ಕೃಗಾರಿಕೆಗಳ ವಕ್ತಾರರು, "ಮಾನವ ಜನಾಂಗ ಕಾರ್ಸನ್ನರ ಉಪದೇಶ ಪಾಲನೆ ಮಾಡಿದರೆ ಕಗ್ಗತ್ತಲ ಯುಗಕ್ಕೆ ವಾಪಸ್ಸು ಹೋಗಬೇಕಾಗುತ್ತದೆ, ಈ ಭೂಮಿ ಕೀಟಗಳ, ರೋಗಗಳ ತಾಣವಾಗುತ್ತದೆ." ಎಂದು ಕೆಂಡಕಾರುತ್ತಾರೆ. ಅಷ್ಟಕ್ಕೂ ಕಾರ್ಸನ್ ಮಲೇರಿಯ ಸೊಳ್ಳೆಗಳಿಗೆ ಡಿ.ಡಿ.ಟಿ ಸಿಂಪಡಣೆ ನಿಷೇಧಿಸಬೇಕೆಂಬ ಪ್ರಸ್ತಾಪ ಮಾಡುವುದೇ ಇಲ್ಲ. ಕೀಟನಾಶಕವಾಗಿ ಇದರ ವಿವೇಚನಯುಕ್ತ ಬಳಕೆಯಾಗಬೇಕು ಎಂದಷ್ಟೇ ಹೇಳುತಾರೆ. ಆಕೆ ಹೆಸರಾಂತ ವಿಜ್ಞಾನಿಯಾದ್ದರಿಂದ ಅವರ ವಿರೋಧಿಗಳು ಹೆಚ್ಚು ಚಾಣಾಕ್ಷತೆ ತೋರಲು ಸಾಧ್ಯವಾಗುವುದಿಲ್ಲ. ಆದರೆ ಸೈಲೆಂಟ್ ಸ್ಪ್ರಿಂಗ್ ಪುಸ್ತಕದ "A fable for tomorrow" ಎಂಬ ಅಧ್ಯಾಯದಲ್ಲಿ ಬರುವ ಕಲ್ಪನಾತ್ಮಕ ಊರು, ಎಲ್ಲ ಸುಖ ಸೌಹಾರ್ಧದಲ್ಲಿ ಮುಳುಗಿದ್ದಾಗ ದುತ್ತೆಂದು ಬಂದಿಳಿಯುವ ರಾಕ್ಷಸ...... ಹೀಗೆ ಇದೆಲ್ಲ ಅಜ್ಜಿಕತೆ ನಾವು ಕೇಳಬೇಕೇನು? ಎಂದು ಕಿಡಿಕಾರುತ್ತಾರೆ ವಿರೋಧಿಗಳು. ಇದೇ ಕಾರ್ಸನ್ನರ ವೈಶಿಷ್ಟ್ಯ ಕೂಡಾ. ತೀರಾ ನವಿರಾದ ಭಾವನೆಗಳಲ್ಲಿ ಮುಳುಗಿರುವಾಗಲೇ ಆಹಾರ ಚಕ್ರದಲ್ಲಿ ಡಿ.ಡಿ.ಟಿ ಪ್ರವೇಶಿಸುವ ಭಯಾನಕತೆಯ ಕ್ವಚ್ಚಿತ್ತಾದ ವೈಜ್ಞಾನಿಕ ವಿವರಣೆ ಕೊಡಬಲ್ಲ ಸಾಮರ್ಥ್ಯ ಆಕೆಗಿದೆ.

ಕಾರ್ಸನ್ ಒಬ್ಬ ಭಾವೋದ್ರೇಕಿತ, ಜನರಲ್ಲಿ ಭಯ ಹುಟ್ಟಿಸಲು ಪ್ರಯತ್ನಿಸುವ ಬುದ್ಧಿ ಭ್ರಾಂತ ಮಹಿಳೆ ಎಂದು ಬೊಬ್ಬಿಡುತ್ತಾ, ಕೀಟನಾಶಕ ಕಂಪನಿಯೊಂದು ಈ 'ಕಮ್ಯುನಿಸ್ಟ್ ಮಹಿಳೆ' ಯ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸುತ್ತದೆ. ಈಕೆಗೆ ಸೋವಿಯತ್ ಯೂನಿಯನ್ ಜತೆ ಬೇಹುಗಾರಿಕಾ ಸಂಬಂಧವಿದೆ, ಅದರ ಜತೆ ಸೇರಿ ಅಮೆರಿಕಾದ ಆಹಾರ ಕೈಗಾರಿಕೆಗೆ ಕಳಂಕ ತರಲು ಪ್ರಯತ್ನಿಸುತ್ತಿದ್ದಾಳೆ ಎನ್ನುತ್ತದೆ. ಇದೆಲ್ಲದರ ನಡುವೆಯೇ ಪುಸ್ತಕ ಪ್ರಕಟವಾಗಿ ಬೆಸ್ಟ್ ಸೆಲ್ಲರ್ ಆಗುತ್ತದೆ.

ಪುಸ್ತಕ ಪ್ರಕಟವಾದ ತಕ್ಷಣವೇ ಆಗಿನ ಅಧ್ಯಕ್ಷ ಜಾನ್. ಎಫ್. ಕೆನಡಿ ಅವರು ಅಮೆರಿಕದಲ್ಲಿ ಕೀಟನಾಶಕದ ಬಳಕೆಯ ಬಗ್ಗೆ ಪರಿಶೋಧನೆ ಮಾಡಲು 'ಪ್ರೆಸಿಡೆಂಟ್ಸ್ ಸೈನ್ಸ್ ಅಡ್ವೈಸರಿ ಕಮಿಟಿ'ಗೆ ಆದೇಶ ನೀಡುತ್ತಾರೆ. ಇದು ಕೊನೆಗೆ ಡಿ.ಡಿ.ಟಿ ನಿಷೇಧದಲ್ಲಿ ಕೊನೆಗೊಳ್ಳುತ್ತದೆ.

ಕೀಟನಾಶಕ ಪಾಲಿಸಿಯನ್ನು ಸಂಯೋಜನೆ ಮಾಡಲು ಒಂದು ಕಮಿಷನ್ ಸ್ಥಾಪಿಸಬೇಕೆಂಬ ಕಾರಸನ್ ಅವರ ಒತ್ತಾಯದ ಫಲವಾಗಿಯೇ Environmental protection agency (EPA) ಅಸ್ತಿತ್ವಕ್ಕೆ ಬರುತ್ತದೆ. ಗಾಳಿ, ನೀರು, ಮಣ್ಣು/ಭೂಮಿಗಳ ಮಾಲಿನ್ಯ ಕುರಿತ ಅನೇಕ ಕಾನೂನುಗಳು ಹೊರಬರಲು ಈ ಪುಸ್ತಕ ಕಾರಣವಾಗುತ್ತದೆ. ಆಧುನಿಕ ಪರಿಸರ ಚಳವಳಿಯ ಹುಟ್ಟಿಗೆ ಕಾರಣರಾದ ಕಾರ್ಸನ್ ವಿರುದ್ಧ ಈಗಲೂ ವ್ಯವಸ್ಥಿತ ಪ್ರಚಾರ ನಡೆಯುತ್ತಿರುವ ಬಗ್ಗೆ ಅನೇಕರಿಗೆ ತಿಳಿದಿಲ್ಲ. ೧೯೬೪ರಲ್ಲಿ ಈಕೆ ಮರಣವಾಗುತ್ತದೆ. ೧೯೦೭ರಲ್ಲಿ ಹುಟ್ಟಿದ ಈಕೆ ಕಾಡು ಮೇಡು ತೊರೆ ಹಕ್ಕಿ ಪಕ್ಕಿಗಳು, ಹೂ, ಕೀಟಗಳ ಜತೆ ಕಾಲ ಕಳೆಯುತ್ತ ಅವುಗಳ ಬಗ್ಗೆ ಕಲಿಯುತ್ತಿದ್ದ ಸದ್ದುಗದ್ದಲವಿಲ್ಲದ ಹುಡುಗಿ. ಹನ್ನೊಂದನೇ ವಯಸ್ಸಿನಲ್ಲಿ ತನ್ನ ಮೊದಲ ಕತೆಯನ್ನು ಪ್ರಕಟಿಸುತ್ತಾಳೆ. ತಾನು ಲೇಖಕಿಯಾಗಲೇ ಬಯಸಿದ್ದವಳೀಕೆ. ಮಹಿಳೆಯರಿಗೆ ವಿಜ್ಞಾನದ ತೀವ್ರತೆಯನ್ನು ತಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಎಲ್ಲರೂ ಹೆದರಿಸಿದ್ದರೂ ಮುಂದೆ ವಿಜ್ಞಾನ ತೆಗೆದುಕೊಳ್ಳುತ್ತಾಳೆ. ತನ್ನ ಕೃತಿಗಳಲ್ಲಿ ತನ್ನ ಆಸಕ್ತಿಯ ಸಾಹಿತ್ಯ ಮತ್ತು ವಿಜ್ಞಾನಗಳನ್ನು ಬೆಸೆಯುತ್ತಾಳೆ. ಸಾಗರದ, ಮೀನಿನ ಬಗ್ಗೆ ವಿಶೇಷ ಅಧ್ಯಯನ ಮಾಡುತ್ತಾಳೆ. ಪ್ರಪಂಚದಾದ್ಯಂತ ಪ್ರಕೃತಿ ಮಾನವ ಸಹಚರ್ಯೆಯನ್ನು ಪುನರ್‌ಸ್ಥಾಪಿಸಲು ಹಂಬಲಿಸುವ, ಹೆಣಗುವ ಎಲ್ಲರಿಗೂ ಇಂದಿಗೂ ಈಕೆಯೇ ಸ್ಫೂರ್ತಿ. ಅವರ ಸಾವಿನ ನಂತರವಷ್ಟೆ ಅವರನ್ನು ೨೦ನೇ ಶತಮಾನದ ಪರಿಸರವಾದದ/ಪರಿಸರ ಚಳವಳಿಯ ಸ್ಥಾಪಕಿ ಎಂದು ಗುರುತಿಸಲಾಗಿದೆ.

ನಮ್ಮ ದಿನನಿತ್ಯದ ಬದುಕಿನ ವ್ಯಾಪಾರ ಹೇಗೆ ಈ ಭೂಮಿಯನ್ನು ನಲುಗಿಸುತ್ತದೆ ಎಂಬ ಅರಿವು ಇಂದು ಜಗತ್ತಿನಾದ್ಯಂತ ಸಮಾಜಗಳಲ್ಲಿ ಮೂಡಿದ್ದರೆ, ಕಳೆದ ೫೦ ವರ್ಷಗಳಲ್ಲಿ ಕೀಟನಾಶಕಗಳು ಮತ್ತು ವಿವಿಧ ಬಗೆಯ ಮಾಲಿನ್ಯಗಳ ಮೇಲೆ ಸರ್ಕಾರಗಳು ರೂಪಿಸುತ್ತಾ ಬಂದಿರುವ ನಿಯಂತ್ರಣಾ ಕಾಯಿದೆಗಳು ಹೇಗೆ ಹಲವರ ಅನುಕೂಲಕ್ಕಾಗಿಯೇ ರೂಪಿತವಾಗುತ್ತಿವೆ ಮತ್ತು ಕೇವಲ ಹಣವನ್ನೇ ಗುರಿಯಾಗಿಸಿಕೊಂಡು ನಮ್ಮ ಇಡೀ ಪರಿಸರ ವ್ಯವಸ್ಥೆಯನ್ನು ನುಚ್ಚು ನೂರಾಗಿಸುತಿವೆ ಎಂಬ ಅರಿವನ್ನು ವ್ಯಾಪಕವಾಗಿಸುವ ಪ್ರಚಾರಾಂದೋಲನ ಜೀವಂತವಾಗಿದ್ದರೆ ಅದಕ್ಕೆ ನಾವಿಂದು ಕೃತಜ್ಞರಾಗಬೇಕಾಗಿರುವುದು ರೈಚಲ್ ಕಾರ್ಸನ್ ಅವರಂಥವರಿಗೆ.

* * *

ಧೀರತನದ ಎರಡು ಉದಾಹರಣೆಗಳು

- ನೀಲತ್ತಹಳ್ಳಿ ಕಸ್ತೂರಿ

ಅನ್ಯಾಯ, ದೌರ್ಜನ್ಯಗಳನ್ನು ಸಹಿಸುವುದಿರಲಿ, ಅಥವಾ ಅವುಗಳಿಗೆ ತಲೆಬಾಗುವುದಿರಲಿ, ಅವು ಎಲ್ಲಿ ನಡೆದರೂ ಅವುಗಳನ್ನು ವಿರೋಧಿಸುವುದು ಧಿಕ್ಕರಿಸುವುದು ಸಮಾಜದಲ್ಲಿ ಇರಲೇಬೇಕಾದ ಮೌಲ್ಯ, ನಾಗರಿಕನ ನಡುವಳಿಕೆ. ಆದರೆ ಬಹುಪಾಲು ಜನ ಈ ಮೌಲ್ಯವನ್ನು ಪಾಲಿಸುವುದಿಲ್ಲ. ಈ ರೀತಿ ನಡೆದುಕೊಳ್ಳುವುದಿಲ್ಲ. ನಮಗೇ ಏನಾದರೂ ತೊಂದರೆ ಆದಲ್ಲಿ ನಾವು ಅಷ್ಟೋ ಇಷ್ಟು ಪ್ರತಿಭಟಿಸಿಯೇವು, ಕೊನೆಯಪಕ್ಷ ಆಕ್ರೋಶ ತೋರಿಸಿಯೇವು ಅಥವಾ ಕೈಲಾಗದವ ಮೈ ಪರಚಿಕೊಂಡ ಎಂದಹಾಗೆ ಕೊರಗಿಯೇವು ಅಷ್ಟೆ.

ಆದರೆ ಧೀರರಾದವರು, ನಿಜಕ್ಕೂ ಸಾಮಾಜಿಕ ಕಳಕಳಿ ಇದ್ದವರು ಹಾಗಲ್ಲ. ಅನ್ಯಾಯ ದೌರ್ಜನ್ಯ ಕೆಡುಕು ಎಲ್ಲೆ ನಡೆಯಲಿ, ಬೇರೆಯಾರಿಗಾದರೂ ಆಗಲಿ, ಅದರಲ್ಲಿ ತಮ್ಮ ಸ್ವಂತ ಹಿತ ಏನೂ ಇಲ್ಲದಿದ್ದರೂ ಸರಿಯೆ, ಅವರು ನಮಗೇಕಪ್ಪ ಎಂದು ಸುಮ್ಮನೆ ಇದ್ದು ಬಿಡುವುದಿಲ್ಲ. ನೋಡಿಯೂ ನೋಡದಂತೆ ಜಾಗ ಖಾಲಿ ಮಾಡುವುದಿಲ್ಲ. ಅಥವಾ ಅಯ್ಯೋಪಾಪ ಎಂದು ಉದ್ಗಾರ ಮಾಡಿ ಮುಗಿಸುಬಿಡುವುದಿಲ್ಲ. ಯಾರಿಗೇ ಅನ್ಯಾಯವಾಗಲಿ, ಯಾರೇ ದೌರ್ಜನ್ಯಕ್ಕೆ ತುತ್ತಾಗಲಿ, ತಾವು ಧೈರ್ಯದಿಂದ ಮುಂದೆ ಬಂದು ಅವರ ಪರ ನಿಂತು ಹೋರಾಡುತ್ತಾರೆ. ತಮ್ಮ ಸಕ್ರಿಯ ನೆರವು ನೀಡುತ್ತಾರೆ. ಅತಿಶ್ರೇಷ್ಠರಂತೂ, ತಮ್ಮ ಪ್ರಾಣವನ್ನೇ ಒಡ್ಡಿ ಹೋರಾಡುತ್ತಾರೆ.

ಇದಕ್ಕೆ ರಾಮಾಯಣದಲ್ಲಿ ಉದಾಹರಣೆ ಸಿಗುತ್ತದೆ. ರಾವಣ ಸೀತೆಯನ್ನು ಅಪಹರಿಸಿ ಓಡಿದಾಗ, ಸಮೀಪದಲ್ಲೆ ಇದ್ದ ಮುದಿಹಕ್ಕಿ ಜಟಾಯು "ನಿಲ್ಲು ರಾವಣ!" ಎನ್ನುತ್ತ ಅಡ್ಡಬಂದು ವೀರಾವೇಶದಿಂದ ಹೋರಾಡುತ್ತದೆ. ರಾವಣನನ್ನು ಸಾಕಷ್ಟು ದಂಡಿಸುತ್ತದೆ. ಆದರೆ ಆ ದುಷ್ಟನ ದೈತ್ಯಶಕ್ತಿಯ ಮುಂದೆ ಆ ಮುದಿಹಕ್ಕಿಯ ಪ್ರತಾಪ ಎಲ್ಲಿ? ಆ ಮಹಾನುಭಾವ ಹಕ್ಕಿ ತಾನೇ ಪ್ರಾಣ ಕೊಡುತ್ತದೆ. ಹಾಗೂ ಹೀಗೂ ರಾಮಲಕ್ಷ್ಮಣರು ಬರುವವರೆಗೂ ಕುಟುಕು ಜೀವದಿಂದ ಇದ್ದು, ಅವರು ಬಂದಾಗ ಅವರಿಗೆ ವಿಷಯ ತಿಳಿಸಿ, ತಾನು ಪ್ರಾಣ ಬಿಡುತ್ತದೆ.

ಇಂಥದೊಂದು ಪ್ರಸಂಗ ಗಾಂಧೀಜಿಯ ಜೀವಿತದಲ್ಲಿ ನಡೆಯಿತು. ಎಲ್ಲೇ ಏನು ಅನ್ಯಾಯ ನಡೆಯಲಿ ಅವರು ತಮ್ಮ ದನಿ ಎತ್ತುತ್ತಿದ್ದರು ಮಾತ್ರವಲ್ಲ, ಸಕ್ರಿಯವಾಗಿ ಸೆಟೆದು ನಿಲ್ಲುತ್ತಿದ್ದರು.

ಒಮ್ಮೆ ಒಬ್ಬ ಇಂಗ್ಲಿಷ್ ಎಸ್ಟೇಟು ಮಾಲೀಕ ತನ್ನ ಆಳುಗಳನ್ನು ಚಿತ್ರಹಿಂಸೆ ಮಾಡುತ್ತಿದ್ದ. ಪುಡಿಗಾಸು ಕೂಲಿಕೊಟ್ಟು ಪರ್ವತದಷ್ಟು ದುಡಿಸಿಕೊಂಡು ಶೋಷಿಸುತ್ತಿದ್ದ ವಿಷಯ ಗಾಂಧೀಜಿಗೆ ತಿಳಿಯಿತು. ಇದರ ಸತ್ಯಾಸತ್ಯತೆಯನ್ನು ವಿಚಾರಿಸಲು ತಾವೇ ಆ ಎಸ್ಟೇಟಿಗೆ ಹೋಗಿ ವಿಚಾರಿಸಲು ಮುಂದಾದರು.

ಸದ್ಯದಲ್ಲೆ ಗಾಂಧಿ ಎಸ್ಟೇಟಿಗೆ ಬರುತ್ತಾರೆ ಎಂಬ ಸುದ್ದಿ ಆ ಇಂಗ್ಲಿಷ್ ಧಣಿಯ

ಕಿವಿಗೆ ಬಿತ್ತು, ಆತ ಕೆಂಡಮಂಡಲನಾದ. "ಬರಲಿ ಆ ಗಾಂಧಿ, ಗುಂಡು ಹೊಡೆದು ಸುಟ್ಟು ಬಿಡುತ್ತೇನೆ" ಎಂದು ಹೌಹಾರಿದ. ಈ ಮಾತು ಕೇಳಿದ ಜನರೆಲ್ಲ ಆತಂಕಕ್ಕೆ ಒಳಗಾದರು. ಕೆಲವರು ಗಾಂಧೀಜಿ ಬಳಿಗೆ ಹೋಗಿ ತಾವು ಕೇಳಿದ ಮಾತನ್ನೆಲ್ಲ ಹೇಳಿದರು. "ಬಾಪೂಜಿ, ಎಸ್ಟೇಟಿಗೆ ಹೋಗಬೇಡಿ, ಆದಷ್ಟೂ ದೂರದ ಸುರಕ್ಷಿತ ಸ್ಥಳಕ್ಕೆ ಹೋಗಿ. ಈ ದುಷ್ಟನ ಸಹವಾಸ ಬೇಡ" ಎಂದು ಬೇಡಿಕೊಂಡರು.

ಗಾಂಧೀಜಿ ನಸುನಕ್ಕರು.

ಅಂದೇ ರಾತ್ರಿ, ಸರಿಹೊತ್ತು, ಕಾಳುಗತ್ತಲು. ಒಬ್ಬ ಬಡಕಲು ವ್ಯಕ್ತಿ ಒಂಟಿಯಾಗಿ ಎಸ್ಟೇಟು ಧಣಿಯ ಮನೆ ಬಾಗಿಲು ತಟ್ಟಿದ. ಎದ್ದು ಬಂದ ಧಣಿ ನೋಡಿದ, ಅವಕ್ಕಾದ. ಯಾರನ್ನು ಸುಟ್ಟುಹಾಕುವುದಾಗಿ ತಾನು ಬೊಬ್ಬೆ ಹಾಕಿದ್ದನೊ, ಅದೇ ವ್ಯಕ್ತಿ ಗಾಂಧಿ! ಒಬ್ಬನೇ ಬಂದಿದಾನೆ. ಯಾವ ರಕ್ಷಣೆಯೂ ಇಲ್ಲ. ಬಾಗಿಲಲ್ಲಿ ನಿಂತಿದಾನೆ!

ಗಾಂಧೀಜಿ ಹೇಳಿದರು, "ತಮ್ಮ, ನನ್ನನ್ನು ಗುಂಡುಹೊಡೆದು ಸಾಯಿಸಬೇಕೆಂದು ನಿನ್ನ ಇಚ್ಛೆ ಎಂದು ಕೇಳಿದೆ. ಇಗೋ ಬಂದಿದೇನೆ. ಏನು ಬೇಕಾದರೂ ಮಾಡು. ನೀನು ಸ್ವತಂತ್ರ, ಈಗ ಕತ್ತಲೆ, ಬೇರೆ ಯಾರೂ ಇಲ್ಲ, ಯಾರ ಸಾಕ್ಷಿಯೂ ಇಲ್ಲ, ನೀನು ಏನು ಮಾಡಿದರೂ ಯಾರಿಗೂ ಗೊತ್ತಾಗುವುದಿಲ್ಲ."

ಆಂಗ್ಲ ಎಸ್ಟೇಟು ಧಣಿ ಮೂಕನಾದ, ಇಂಥ ಪ್ರಾಮಾಣಿಕತೆ, ಇಂಥ ಧೈರ್ಯ, ಇಂಥ ಪಾರದರ್ಶಕತೆ, ಇಂಥ ನಿರ್ಭಯತೆ ಆತ ಎಂದೂ ಕಂಡಿರಲಿಲ್ಲ. ಈತ ಸಾಧಾರಣ ವ್ಯಕ್ತಿ ಅಲ್ಲ! ಧಣಿ ಗಾಂಧೀಜಿಯನ್ನು ಬಂಗಲೆಯೊಳಕ್ಕೆ ಕರೆದೊಯ್ದ. ರಾತ್ರಿ ಪೂರಾ ಇಬ್ಬರಿಗೂ ಮಾತುಕತೆ ನಡೆಯಿತು. ಕರಗಿಹೋದ ಆ ಧಣಿ, ಕೂಲಿಯಾಳುಗಳಿಗೆ ಸರಿಯಾದ ವೇತನವನ್ನಿತ್ತು ಚೆನ್ನಾಗಿ ನೋಡಿಕೊಳ್ಳುವುದಾಗಿ ಮಾತುಕೊಟ್ಟು, ಬಾಗಿಲವರೆಗೂ ಬಂದು ಗಾಂಧೀಜಿಯವರನ್ನು ಕಳುಹಿಸಿಕೊಟ್ಟ. (ಸಾಭಾರ – ಆಕಾಶವಾಣಿ)

* * *

೧೧ ನೇ ಪುಟದಿಂದ

ಇಂಥ ಒಂದು ಅಪಾಯದಿಂದ ಪಾರಾಗುವ ಪ್ರಯತ್ನವನ್ನು ಇಸ್ರೋ ಕನ್ನಡದಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿ ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ಮಾಡಿದೆ. ಅಲ್ಲದೆ ಅದರ ಪ್ರಕಟಣೆಗಳೆಲ್ಲವು ಕನ್ನಡ ಭಾಷೆಯಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ವಿಷಯವನ್ನು ಬೋಧನೆ ಮಾಡಬಹುದೆಂಬುದನ್ನು ಸಿದ್ಧಮಾಡಿ ತೋರಿಸಿದೆ. ಮೇಲ್ಕಾಣಿಸಿದ ಪುಸ್ತಕಗಳು ಕರ್ನಾಟಕದ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ಅಗತ್ಯವಾಗಿ ಇರಬೇಕಾದಂಥವುಗಳಾಗಿವೆ. ಈ ಪುಸ್ತಕಗಳ ಸಂಪಾದಕ ಮಂಡಳಿಯಲ್ಲಿ ವಿಜ್ಞಾನಿಗಳಾದ ವಿ.ಆರ್.ಕಟ್ಟಿ, ಪಿ.ಜಯಭಟ್, ಡಾ.ಎಂ.ಎಸ್.ಸುರೇಶ್, ಡಾ.ಕೆ.ಬದ್ರಿನಾರಾಯಣ್, ಡಾ.ಎಂ.ಎಸ್.ಶ್ರೀಧರ್, ಬಿ.ಎಸ್.ಜಗದೀಶ್‌ಬಾಬು ಮತ್ತು ಕೆ.ನಾವಡ್‌ರಂಥ ಕನ್ನಡ ಅಭಿಮಾನಿ ವಿಜ್ಞಾನಿಗಳಿದ್ದಾರೆ. ಪ್ರತಿಯೊಂದು ಸಂಪುಟದಲ್ಲಿ ಉಪಯುಕ್ತವಾದ ಚಿತ್ರಗಳಿವೆಯಲ್ಲದೆ ಪಾರಿಭಾಷಿಕ ಪದಗಳ ಪಟ್ಟಿಯೂ ಇದೆ. ಈ ಸಂಪುಟಗಳನ್ನು ಅಧ್ಯಯನ ಮಾಡಿದವರಿಗೆ ಅತಿ ಪರಿಚಯವಿದ್ದು ತುಂಬಾ ರಹಸ್ಯಮಯವಾಗಿರುವ ಆಕಾಶದ ನಿಗೂಢತೆ ಪರಿಚಯವಾಗುವುದರಲ್ಲಿ ಸಂದೇಹವಿಲ್ಲ.

* * *

ವಿಶ್ವಾತ್ಮ ಭಾವನೆಯ ವಾಮದೇವ
ಮತ್ತು
ಶಾಂತ ಮೂರ್ತಿ ವಸಿಷ್ಠ

– ವಿನೋಬಾ

ಋಗ್ವೇದದ ಹತ್ತು ಮಂಡಲಗಳಲ್ಲಿ ಇಡೀ ನಾಲ್ಕನೆ ಮಂಡಲ ವಾಮದೇವನದೇ ಆಗಿದೆ. ವಿಶ್ವಾತ್ಮ-ಭಾವನೆಯ ದೃಷ್ಟಾಂತದೊಂದಿಗೆ ಉಪನಿಷತ್‌ಗಳಲ್ಲಿ ವಾಮದೇವನ ವಚನಗಳು ಅವನ ಹೆಸರಿನೊಂದಿಗೆ ಉಧ್ರುತಗೊಂಡಿವೆ.

"ಈ ವಿಶ್ವದಲ್ಲಿ ಏನೆಲ್ಲ ಇದೆಯೊ ಅದು ನಾನು". ಜ್ಞಾನಿಯಾದ ಪುರುಷನು ನಿರಹಂಕಾರಿಯಾಗುತ್ತಾನೆ. ಅವನ ದೇಹಾಭಿಮಾನ ನಷ್ಟವಾಗುತ್ತದೆ. ಕ್ರಿಯಾಮಾತ್ರವೂ ಸಮಾಪ್ತಗೊಳ್ಳುತ್ತದೆ. ಆ ಸಮಯದಲ್ಲಿ ಅವನಿಗೆ ಒಂದು ಭಾವಾವಸ್ಥೆ ಪ್ರಾಪ್ತವಾಗುತ್ತದೆ. ಆ ಅವಸ್ಥೆಯನ್ನು ದೇಹದಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಭಾವನೋತ್ಕಟತೆಯ ಆ ಅವಸ್ಥೆಯಲ್ಲಿ ಜ್ಞಾನಿಪುರುಷನು ಇಡೀ ಸಂಸಾರದ ದೋಷವನ್ನೇ ತನ್ನದೆಂದು ಭಾವಿಸುತ್ತಾನೆ. ಅವನು ತ್ರಿಭುವನದ ಎಲ್ಲ ಪಾಪಿಗಳಿಗಿಂತಲೂ ಪಾಪಿ ಮತ್ತು ಪುಣ್ಯಕ್ಕಿಂತ ಪುಣ್ಯವಾನನೂ ಆಗುತ್ತಾನೆ. ಮತ್ತು ಹೀಗಾದ ನಂತರವೂ ಕೂಡ ಅವನು ತ್ರಿಭುವನದ ಪಾಪ-ಪುಣ್ಯದಿಂದ ಲೇಶಮಾತ್ರವೂ ಸ್ಪರ್ಷಿತನಾಗುವುದಿಲ್ಲ. ಈ ಭಾವಾವಸ್ಥೆ ಪ್ರಾಪ್ತವಾದ ಮೇಲೆ ಜ್ಞಾನಿ ಪಾರ್ಥಿವತೆಯ ಆಚೆಗೆ ಹೋಗಿ ಬಿಡುತ್ತಾನೆ. ಅವನ ಆತ್ಮವು ಹಕ್ಕಿಯಂತೆ ಹಾರಲು ಪ್ರಾರಂಭಿಸುತ್ತದೆ. ಪರಿಶುದ್ಧ ಆತ್ಮಜ್ಞಾನವಾದ ನಂತರ ಕೇವಲ ಶರೀರದ ಸಾಕ್ಷಿ ಮತ್ತು ಅಂತರ್ಯಾಮಿಯಾಗಿದ್ದೇನೆ ಎಂದಷ್ಟೇ ಅಲ್ಲ ವಿಶ್ವದ ದ್ರಷ್ಟಾ ಮತ್ತು ಅಂತರ್ಯಾಮಿಯಾಗಿದ್ದೇನೆಂಬ ಅನುಭವವಾಗುತ್ತದೆ. ಯಾರಿಗೆ "ನಾನು ಬ್ರಹ್ಮ" ಎಂಬ ಜ್ಞಾನವಾಗುತ್ತದೊ ಅವನು ಸರ್ವರೂಪನಾಗುತ್ತಾನೆ. ಈ ತತ್ವವನ್ನು ಸಿದ್ಧಮಾಡುವುದಕ್ಕಾಗಿ ವಾಮದೇವನ ಉದಾಹರಣೆಯನ್ನು ಕೊಡಲಾಗುತ್ತದೆ. ವಾಮದೇವನ ವಿಶ್ವಾತ್ಮ-ಭಾವ ಪ್ರತಿಪಾದನೆಯ ಸೂಕ್ತವು ನಾಲ್ಕನೆ ಮಂಡಲದ ೨೬ನೇ ಸೂಕ್ತದಲ್ಲಿದೆ. ಈ ಸೂಕ್ತದ ಪ್ರಾರಂಭ ಈ ರೀತಿ ಇದೆ-

ಅಹಂ ಮನುರಭವಂ ಸೂರ್ಯಾಶ್ಚ ಅಹಂ ಕಕ್ಷೀವಾಂ ಋಷಿ ರಶ್ಮಿ ವಿಪ್ರಃ
ಅಹಂ ಕುತಮಾರ್ಜನೇಯಂ ನೃಂಜೆ ಅಹಂ ಕವಿರೂಶನಾ ಪಶ್ಯತ ಮಾ (೪.೨.೧೨)

ನಾನೇ ಮನುವಾಗಿದ್ದೆ, ನಾನೇ ಸೂರ್ಯನಾಗಿದ್ದೆ. ನಾನು ಕಕ್ಷೀವಾನ್, ಕುತ್ಸ ನಾನು, ಉಶನಾ ಕವಿ ನಾನು.

ಇದೇ ಚರಣವನ್ನು ಬೃಹದಾರಣ್ಯಕೋಪನಿಷತ್‌ನಲ್ಲಿ ಆಧಾರದ ರೂಪದಲ್ಲಿ ತೆಗೆದುಕೊಳ್ಳಲಾಗಿದೆ. ಮತ್ತು ಇದರ ಉಲ್ಲೇಖವನ್ನು ಸೂತ್ರಕಾರರು ಮಾಡಿದ್ದಾರೆ. ಇದರ ಮೇಲಿಂದ ಉಪನಿಷತ್‌ಗಳ ಅವಿಭಿನ್ನ ಪರಂಪರೆ ಗಮನಕ್ಕೆ ಬರುತದೆ.

ಮುಂದೆ ಋಷಿ ಹೇಳುತ್ತಾನೆ. ನಾನು ಇಂದ್ರ, ಎಲ್ಲ ದೇವತೆಗಳೇ ನಾನು. ನಾನು ಈಶ್ವರ.

ಗರ್ಭನು ಸನ್ ಅನು ಏಷಾಂ ಅವೇದಂ ಅಹಂ ದೇವಾನಾಮ್ ಜನಿಮಾನಿ ವಿಶ್ವಾ (೪.೨.೧೪)

ನನಗೆ ದೇವತಾದಿಗಳ ಜನ್ಮ ರಹಸ್ಯ- ಜ್ಞಾನ ಗರ್ಭದಲ್ಲಿಯೆ ಆಗಿತ್ತು. ಇಂಥ ಭಾಷೆಯಿಂದಲೆ ಇಡಿ ಸೂಕ್ತ ತುಂಬಿದೆ. ಜಗತ್ತಿನಲ್ಲಿ ಏನೆಲ್ಲ ಆಗುತ್ತದೊ ಅದೆಲ್ಲವನ್ನೂ ನಾನು ಮಾಡಿದ್ದೇನೆ. ಪರಬ್ರಹ್ಮ ನಾನು. ಆರ್ಯರಿಗೆ ಈ ಭೂಮಿಯನ್ನು ಕೊಟ್ಟವರು ಯಾರು? ನಾನು-

ಅಹಂ ಭೂಮಿ ಮದದಾ ಮಾರ್ಯಾಯ ಅಹಂ ವೃಷ್ಟಿಂ ದಾಶುಷೆ ಮತ್ಯಾರ್ಯ
ಅಹಮಪೊ ಅನಯಂ ವಾವಶಾನಾಃ ಮಮ ದೇವಾಸೊ ಅನು ಕೇತಮಾಯನ್ (೪.೨.೧೩)
ಆರ್ಯಪುರುಷರ ನಿವಾಸಕ್ಕಾಗಿ ನಾನೇ ಭೂಮಿಯನ್ನು ಸೃಷ್ಟಿಸಿದೆ, ನಾನೇ ತ್ಯಾಗವೃತ್ತಿಯುಳ್ಳ ಮನುಷ್ಯನಿಗಾಗಿ (ದಾಷಷೆ) ಪರ್ಜನ್ಯದ ವೃಷ್ಟಿ ನಿರ್ಮಾಣ ಪರಮೇಶ್ವರ ಮಹಿಮೆಯನ್ನು ಹಾಡುತ್ತ (ವಾವಶಾನಾಃ) ಪೃಥ್ವಿಯ ತಳದಲ್ಲಿ ಹರಿಯುವ ಪವಿತ್ರ ನೀರಿಗೆ ನಾನೇ ಮಾರ್ಗ ತೋರಿಸಿದೆ, ಎಲ್ಲ ದೇವತೆಗಳು ನನ್ನ ಜ್ಞಾನದ ಅನುಕರಣೆ ಮಾಡುತ್ತಾರೆ.

ನನ್ನ ಕೈಯಿಂದ ಅಸಂಖ್ಯ ಪಾಪ ಮತ್ತು ಪುಣ್ಯಗಳಾಗಿವೆ, ಆದರೆ ನನಗೆ ಅವುಗಳ ಯಾವ ಸ್ಪರ್ಶವೂ ಆಗಿಲ್ಲ -

ವಾಮದೇವನ ಈ ಶೃತಿಯು ಅನುಸಾರವಾಗಿ ಅಹಂಕಾರವನ್ನು ವಿಶ್ವವ್ಯಾಪಕಮಾಡಿದ್ದರಿಂದ ಅದರ ಪರಮಾಣು ಅನಂತ ಕ್ಷೇತ್ರಗಳಲ್ಲಿ ಹಂಚಿ ಹೋಗುತ್ತವೆ.

ಬ್ರಹ್ಮಜ್ಞಾನದ ಮೂಲಕ ಅದ್ವೈತದ ದರ್ಶನವಾಗುತ್ತಲೇ ನಾನು ಇರುವೆಯಿಂದ ಹಿಡಿದು ಬ್ರಹ್ಮನವರೆಗೆ ವಿವಿಧ ರೂಪ ಧರಿಸಿ ವಿಶ್ವವ್ಯಾಪಕನಾಗಿದ್ದೇನೆ ಎಂಬ ಅನುಭವವಾಗುತ್ತದೆ. ಈ ಮಾತು ನಮಗೆ ವಾಮದೇವನ ಶ್ರೌತ ಉದಾಹರಣೆಯಿಂದಷ್ಟೆ ಅಲ್ಲ ಮುಂದೆ ಅರ್ವಾಚೀನ ಕಾಲದಲ್ಲಿ "ತುಕಾ ಆಕಾಶ ಎವಢಾ"- ತುಕಾರಾಮ ಆಕಾಶಕ್ಕೆ ಸಮಾನ ಎಂಬಂಥ ಅಭಂಗವಾಣಿಯಿಂದಲೂ ಕೂಡ ಕಾಣಬರುತ್ತದೆ. ಎಷ್ಟು ಅಂಶದಲ್ಲಿ ಅದ್ವೈತ ಭಾವನೆ ಜಾಗೃತವಾಗುತ್ತದೊ ಅಷ್ಟು ಅಂಶದಲ್ಲಿ ಈ ವಿಶ್ವರೂಪತೆಯ ಅನುಭವ ಯಾರಿಗೂ ಆಗಲೂ ಸಾಧ್ಯ. ಈ ವಿಶ್ವರೂಪದ ಮಹಾನ್ ಆತ್ಮಕ್ಕೆ ಜಗತ್ತಿನಲ್ಲೆಲ್ಲ ಸಜ್ಜನರಿಂದ ಆಗುವ ಸತ್ಕಾರ್ಯ ಮತ್ತು ದುಷ್ಟರಿಂದ ಆಗುವ ಅಸತ್-ಕರ್ಮ, ಎಲ್ಲವೂ ನನ್ನದೇ ಆಗಿವೆ ಎಂಬ ಅರಿವಾಗುವುದು ಸ್ವಾಭಾವಿಕ.

ಇದೇ ಅರ್ಥದಲ್ಲಿ ಬಹೂನಿ ಮೆ ಅಕೃತಾ ಕರ್ತ್ವಾನಿ (೪.೨.೪) ನಾನು ಬಹಳಷ್ಟು ಅಕಾರಣವಾದ ಕರ್ಮಗಳನ್ನು ಮಾಡಿದ್ದೇನೆ. ಹೀಗೆಂದು ವೈದಿಕ ಋಷಿಗಳ ಉದ್ಗಾರ ಹೊರಡುತ್ತದೆ. ಇಡೀ ಜಗತ್ತಿನಲ್ಲಿ ಯಾರೇ ಆಗಲಿ ಕಳ್ಳತನ ಮಾಡಿದರೆ ಅದು ಶಾಸ್ತ್ರೀಯ ಭಾಷೆಯಲ್ಲಿ - ಈ ಮಹಾತ್ಮರ ಮೂಲಕವೇ ಮಾಡಲಾದ ಕಳ್ಳತನವೆಂದೇ ತಿಳಿಯಲಾಗುತ್ತದೆ. ಯಾರೋ ಮಾಡಿದ ಕೊಲೆ ಮಾಹಾತ್ಮರ ಮೂಲಕ ಮಾಡಲಾದ ಕೊಲೆಯೆ ಆಗುತ್ತದೆ. ಆದರೆ ಇಂಥ ಎಷ್ಟೋ ಕೊಲೆ ಅಥವಾ ಎಷ್ಟೋ ಕಳ್ಳತನ ಈ ಮಹಾತ್ಮರ ಕೈಯಿಂದ ಆಗುತ್ತಿದ್ದರೂ ಕೂಡ ಆ ಕೃತ್ಯಗಳಿಂದ ಇವರ ಒಂದು ಕೂದಲೂ ಮಲಿನಗೊಳ್ಳುವುದಿಲ್ಲ. ಇದು ಕೂಡ ಆ ಜ್ಞಾನದ ಮಹಿಮೆ.

ಆತ್ಮಜ್ಞಾನದ ಭೂಮಿಕೆಯೊಂದಿಗೆ, ತನ್ನನ್ನು ತಾನೇ ಭಗವಂತನಿಗೆ ಸರ್ವಥಾ ಅರ್ಪಿಸಿಕೊಳ್ಳುವುದು. ಆತ್ಮಜ್ಞಾನದ ಇನ್ನೊಂದು ಭೂಮಿಕೆ. ಸ್ವಯಂ ತನ್ನನ್ನು ತಾನೇ ಬ್ರಹ್ಮನೆಂದು ತಿಳಿಯುವುದು. ವಾಮದೇವನ ಮತ್ತು ಗೀತೆಯಲ್ಲಿ ಶ್ರೀಕೃಷ್ಣನ ಭೂಮಿಕೆ ಇದೇ ಇದೆ. ನಾನೇ ಭಗವಂತ, ಈಶ್ವರೀಯ ವಿಧಾನ ನನ್ನ ಕೈನಲ್ಲಿದೆ - "ಡಿವೈನ್ ಡಿಸ್ಪೆನ್‌ಷನ್ ಈಸ್ ಮೈ ಡಿಸ್ಪೆನ್‌ಷನ್" ಈ ಪ್ರಕಾರ ಯಾರು ಆತ್ಮವನ್ನು ಗುರ್ತಿಸುತ್ತಾರೋ ಅವರ ಜ್ಞಾನ ಅತ್ಯಂತ ವ್ಯಾಪಕವಾಗಿರುತ್ತದೆ. ಇಂಥ ಜ್ಞಾನ ವಾಮದೇವನಿಗಿತ್ತು. ವಾಮದೇವನ ಕೆಲವು ಸೂಕ್ತಗಳಲ್ಲಿ ಈ ಭಾವನೆಯಿದೆ. ಉಳಿದ ಸೂಕ್ತಗಳಲ್ಲಿ ಆತ್ಮಜ್ಞಾನದ ಉಪಾಸನೆಯಿದೆ. ಅದು ವಾಮದೇವನ ಸಿದ್ಧಾಂತವಲ್ಲ, ಅದು ಒಂದು ಅನುಭವ.

ಉಪನಿಷತ್ತಿನ ಅಜ್ಞಾತ ಋಷಿಗಳಿಗೂ ಕೂಡ ಇಂಥದೇ ಅನುಭವವಾಗಿತ್ತು. ಆದರೆ ಅದು ವಾಮದೇವ ಮತ್ತು ಶ್ರೀಕೃಷ್ಣನಿಗೆ ಆಗಿದ್ದ ಅನುಭವಕ್ಕೆ ವಿಪರೀತವಾದ ರೀತಿಯಲ್ಲಿ ಆಗಿತ್ತು. ಆ ಋಷಿ ತನ್ನನ್ನು ಸಂಸಾರದಿಂದ ಬೇರೆಗೊಳಿಸುತ್ತಾ ಹೋಗಿ

ಶೂನ್ಯ ಮಾಡಿಕೊಂಡು ಬಿಟ್ಟಿದ್ದ. ಇದು ನಿರ್ಗುಣಭಾವ. ವಾಮದೇವ ಮತ್ತು ಶ್ರೀಕೃಷ್ಣ ತಮ್ಮನ್ನು ತಾವು ವ್ಯಾಪಕಗೊಳಿಸುತ್ತ ಸರ್ವವ್ಯಾಪಿ ಮಾಡಿಕೊಂಡು ಬಿಟ್ಟಿದ್ದರು. ಇದು ಸಗುಣಭಾವ. ಗಣಿತ ಭಾಷೆಯಲ್ಲಿ ನೆಗೆಟಿವ್ ಇನ್‌ಫಿನಿಟಿ ಮತ್ತು ಪಾಸಿಟಿವ್ ಇನ್‌ಫಿನಿಟಿ. (ಅಭಾವಾತ್ಮಕ ಅನಂತತೆ ಮತ್ತು ಭಾವಾತ್ಮಕ ಅನಂತತೆ) ಒಂದೇ ಸ್ಥಾನದಲ್ಲಿ ಸೇರುತ್ತವೆ. ನಿರ್ಗುಣಮಾರ್ಗ ಮತ್ತು ಸಗುಣಮಾರ್ಗ ಭಿನ್ನವಾಗಿದ್ದರೂ ಒಂದೇ ಸ್ಥಾನಕ್ಕೆ ತಲುಪುತ್ತವೆ. ಇದು ಪರಿಶುದ್ಧ ಆತ್ಮಜ್ಞಾನ.

ಉಪನಿಷತ್ತಿನ ಅಜ್ಞಾತ ಋಷಿ ಹಾಗೂ ವಾಮದೇವ ಮತ್ತು ಶ್ರೀಕೃಷ್ಣ ಈ ಮೂವರಿಗೂ ಪರಿಪೂರ್ಣ ವಿಶ್ವಾತ್ಮ – ದರ್ಶನವಾಗಿತ್ತು. ಮೂವರ ಪದ್ಧತಿಯಲ್ಲಿ ವ್ಯತ್ಯಾಸವಿರಲು ಸಾಧ್ಯ. ಪದ್ಧತಿಯಲ್ಲಿ ಇಂಥ ವ್ಯತ್ಯಾಸವಿದ್ದರೂ ಕೂಡ ಅವರೆಲ್ಲರಲ್ಲಿ ಎರಡು ಮಾತುಗಳು ಸಮಾನ ಇವೆ – ಒಂದು, ಪರಿಪೂರ್ಣ ನಿರಹಾಂಕರತೆ ಮತ್ತು ಎರಡನೆಯದು, ಇದರಿಂದಲೆ ಉತ್ಪನ್ನವಾಗುವ ಆತ್ಮಜ್ಞಾನ ನಂತರದ ಪೂರ್ವಚರಿತ್ರದೊಂದಿಗಿನ ಸಂಬಂಧ ವಿಚ್ಛೇದ.

ಯಾವ ರೀತಿ ಎಲ್ಲ ನದಿಗಳನ್ನೂ ಸಮುದ್ರವು ತನ್ನ ಹೊಟ್ಟೆಯಲ್ಲಿ ಸೇರಿಸಿಕೊಳ್ಳುತ್ತದೊ ಅದೇ ಪ್ರಕಾರ ಸಮಸ್ತ ಬ್ರಹ್ಮಾಂಡವನ್ನೂ – ಕವಿ – ಋಷಿ ತನ್ನ ಪ್ರೇಮದಿಂದ ಮುಚ್ಚಿಬಿಡುತ್ತಾನೆ. ಮಳೆ ಶುರುವಾಗುತ್ತಲೇ ಕಪ್ಪೆಗಳ ವಟಗುಟ್ಟುವಿಕೆಯನ್ನು ಕೇಳಿ ವಸಿಷ್ಠರಿಗೆ ಪರಮಾತ್ಮನ ಕೃಪೆಯ ಮಳೆಯಿಂದ ಕೃತಕೃತ್ಯರಾದ ಸತ್ಪುರುಷರೆ ಈ ಕಪ್ಪೆಗಳ ರೂಪದಲ್ಲಿ ತಮ್ಮ ಆನಂದದೋದ್ಗಾರವನ್ನು ಪ್ರಕಟಿಸುತ್ತಿದ್ದಾರೆ ಎಂದು ಅರಿವಾಯಿತು. ವಾಮದೇವ ಭಕ್ತಿಭಾವದಿಂದ ಆ ಕಪ್ಪೆಗಳ ಸ್ತುತಿ ಮಾಡಿದರು. ಈ ಸ್ತುತಿ ಋಗ್ವೇದದಲ್ಲಿ ಮಂಡೂಕ ಸ್ತುತಿ ಎಂಬ ಹೆಸರಿನಲ್ಲಿ ಸಂಕಲಿತವಾಗಿದೆ. ತಮ್ಮ ಪ್ರೇಮಪೂರ್ಣ ಮನೋವೃತ್ತಿಯ ವರ್ಣವನ್ನು ಲೇಪಿಸಿ ಕವಿ ಸೃಷ್ಟಿಯ ಕಡೆಗೆ ನೋಡುತ್ತಾನೆ. ಆಗ ಅವನ ಹೃದಯ ಸೃಷ್ಟಿದರ್ಶನದಿಂದ ಕುಣಿಯಲಾರಂಭಿಸುತ್ತದೆ.

ಬೇಸಿಗೆಯ ಕಾಲದಲ್ಲಿ ಕಪ್ಪೆಗಳನ್ನು ನೋಡಿದಾಗ ಅವು ಒಣಗಿವೆ; ರಕ್ತಮಾಂಸ ವಿಹೀನವಾಗಿವೆ. ವರ್ಷವಿಡೀ ತಪಸ್ಸಿನಿಂದ ಕ್ಷೀಣವಾಗಿರುವಂತೆ ಕಂಡುಬರುತ್ತವೆ. ಆದರೆ ಮಳೆಯ ಪುನರ್‌ದರ್ಶನವಾಗುತ್ತಲೇ ಅವುಗಳ ಧ್ವನಿಹೊರಹೊಮ್ಮುತ್ತದೆ. ಯಾವ ರೀತಿ ಭಗವಂತನ ಶಂಖ ಸ್ಪರ್ಶಮಾತ್ರದಿಂದ ಧ್ರುವನಿಗೆ ಧ್ವನಿ ಹೊರಹೊಮ್ಮಿತ್ತೋ ಹಾಗೆ. ನಂತರ ಅವು ಹಾಡಲು ಪ್ರಾರಂಭಿಸುತ್ತವೆ. ವಸಿಷ್ಠ ಋಷಿ ಅವುಗಳ ವರ್ಣನೆ ಮಾಡುತ್ತಾ ಗೋಮಾ ಯುರೇಕೊ ಅಜಮಾ ಯುರೇಕಃ – ಕೆಲವು ಕಪ್ಪೆಗಳು ಹಸುಗಳಂತೆ ಹಾಡಿದರೆ ಇನ್ನು ಕೆಲವು ಕುರಿಗಳಂತೆ ಎಂದು ಹೇಳುತ್ತಾರೆ.

ತಮ್ಮ ಇಡೀ ಜೀವನವನ್ನು ಸಂಸಾರಕ್ಕಾಗಿ ಅರ್ಪಣೆ ಮಾಡಿದವರ ಹೆಸರಿನಲ್ಲಿ ಬಹು ದೊಡ್ಡ ಪವಿತ್ರತೆ ಬಂದು ಬಿಡುತ್ತದೆ. ಅವರ ಹೆಸರೇ ನಕ್ಷತ್ರಕ್ಕೆ ಸಮಾನವಾಗಿ ನಮ್ಮ ಸಮ್ಮುಖದಲ್ಲಿರುತ್ತದೆ. ನಾವು ನಿತ್ಯತರ್ಪಣ ಮಾಡುತ್ತ ವಸಿಷ್ಠಂ ತರ್ಪಯಾಮಿ, ಭಾರದ್ವಾಜಂ ತರ್ಪಯಾಮಿ, ಅತ್ರಿಂ ತರ್ಪಯಾಮಿ ಎಂದು ಹೇಳುತ್ತೇವೆ. ಈ ಋಷಿಗಳ ಬಗ್ಗೆ ನಮಗೇನು ಗೊತ್ತಿದೆ? ಅವರ ಜೀವನ ವೃತ್ತಾಂತವನ್ನು ಬರೆಯಲು ಸಾಧ್ಯವೇ? ಅವರ ಜೀವನ ವೃತ್ತಾಂತವಿಲ್ಲದಿದ್ದರೂ ಕೂಡ ವಸಿಷ್ಠ ಎಂಬ ಹೆಸರೇ ಸಾಕು. ಹಿಂದೂಸ್ಥಾನದಲ್ಲಿ ಇಂಥ ಅನೇಕ ಮಹಾಪುರುಷರು ಆಗಿ ಹೋದರು. ನಮ್ಮ ಮೇಲೆ ಅವರೆಲ್ಲರ ಅನಂತ ಉಪಕಾರವಿದೆ. ಆದಾಗ್ಯೂ ಎಲ್ಲರ ಎಲ್ಲ ಮಾತುಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲ. ಒಬ್ಬೊಬ್ಬರ ಒಂದು ವಿಶಿಷ್ಟಗುಣವೇ ಗಮನದಲ್ಲಿರುತ್ತದೆ. ವಿಶ್ವಾಮಿತ್ರನ ಸತತ ಪ್ರಯತ್ನವಾದವೂ ವಸಿಷ್ಠರ ಸ್ಥಿರಶಾಂತಿಯೂ ನಮ್ಮ ಹೃದಯದಲ್ಲಿ

ಮನೆ ಮಾಡುತ್ತದೆ.

ಇಂಥ ಶಾಂತಮೂರ್ತಿ ವಸಿಷ್ಠನ ಶಾಂತಿಯ ವರ್ಣನೆಯನ್ನು ಮಾಡುತ್ತಾ, ಇಂದ್ರ "ಇವನ ಶಾಂತಿಯ ಮಹಿಮೆ ಸಮುದ್ರದಂತೆ ಗಂಭೀರವಾಗಿದೆಯೆಂದು ಉದ್ಗಾರ ತೆಗೆದಿದ್ದಾನೆ. ಸಮುದ್ರ ಸೇವಾ ಮಹಿಮಾ ಗಂಭೀರಃ. ಜೊತೆಗೆ ವಸಿಷ್ಠರ ಸಾಹಸವನ್ನು ಗಮನಿಸಿ ಇವರ ವಾಯುವೇಗವನ್ನು ಯಾರೊಂದಿಗೂ ಹೋಲಿಸಲಾಗುವುದಿಲ್ಲ ಎಂದು ಹೇಳಿದ್ದಾನೆ. ವಾತಸ್ಯೇವ ಪ್ರಜೆವೊ ನಾನ್ಯೇನ (೭.೩.೧೦) ವಸಿಷ್ಠ ಋಷಿಯು ಚೈತನ್ಯಮಯ ಶಾಂತಿ ಆತ್ಮದ ಶುದ್ಧರೂಪವಾಗಿದೆ. ಶಾಂತಿಯ ಪರಮ ಉಪಾಸಕರಾದ ವಸಿಷ್ಠರು ಶಾಂತಿ ತ್ರಯಾತ್ಮಕ ಪ್ರಾರ್ಥನೆಯನ್ನು ಈ ಕೆಳಗಿನ ಶಬ್ದಗಳ ಮೂಲಕ ಮಾಡುತ್ತಾರೆ.

ತ್ರೈಂಬಕಂ ಪ್ರಜಾಮಹೆ ಸುಗಂಧಿಂ ಪುಷ್ಟಿವರ್ಧನಂ
ಉರ್ವಾರೂಕಮಿವ ಬಂಧನಾತ್ ಮೃತ್ಯೋರ್ ಮಕ್ಷೀಯ ಮಾಮೃತಾತ್ (೨.೫೩.೩)

ಯಾರು ತನ್ನ ಮೂರು ಕಣ್ಣುಗಳಿಂದ ಕಾಮ – ಕ್ರೋಧ – ಲೋಭಗಳನ್ನು ದಹಿಸಿಬಿಟ್ಟಿದ್ದಾನೊ ಆ ಶಾಂತ ತೇಜದ ಉಪಾಸನೆ ನಾವು ಮಾಡುತ್ತೇವೆ. ಅವನ ಕೃಪೆಯಿಂದ ಜೀವನದ ಎಲ್ಲ ಅಪವಿತ್ರತೆ ತೊಳೆದು ಹೋಗುತ್ತದೆ ಮತ್ತು ಆತ್ಮಿಕ ಪುಷ್ಟಿ ಪ್ರಾಪ್ತವಾಗುತ್ತದೆ. ಆದ್ದರಿಂದ ಯಾವ ರೀತಿ ಪಕ್ವವಾಗಿರುವ ಹಣ್ಣು ತನ್ನ ತೊಟ್ಟಿನಿಂದ ಬೀಳುತ್ತದೊ ಅದೇ ಪ್ರಕಾರ ನಾವು ಕೂಡ ಮೃತ್ಯುವಿನಿಂದ ಮುಕ್ತವಾಗಬೇಕೆಂಬುದಷ್ಟೆ ನಮ್ಮ ಅಭಿಲಾಷೆಯಾಗಿದೆ. ಆದರೆ ಈ ಶಾಂತಿ ಸಮೃದ್ಧ ಅಮೃತತ್ವದಿಂದ ನಾವು ಎಂದೂ ಮುಕ್ತವಾಗದೆ ಇರಲಿ.

ಈ ಮೃತ್ಯುಂಜಯ ಮಹಾಮಂತ್ರ ಪ್ರಸಿದ್ಧವಾಗಿದೆ. ಎಲ್ಲರೂ ಈ ಮಂತ್ರದ ಮನನ ಮಾಡಲಿ. ಮತ್ತು ಓಂಕಾರ ರೂಪ ತ್ರೆಂಬಕದ ತ್ರಿವಿಧ ಶಾಂತಿಯ ಕಿರಣಗಳು ಹೃದಯಗುಹೆಯಲ್ಲಿ ಪ್ರವೇಶಮಾಡಲಿ. ಇಂಥ ಪ್ರಯತ್ನ ಸತತವಾಗಿ ನಡೆಯಲಿ.

ನಮ್ಮಲ್ಲಿ ಶಾಸ್ತ್ರಕಾರರು ಪತಿ–ಪತ್ನಿಯ ವಿವಾಹದ ಜೊತೆಗೆ ಒಂದು ವಿಧಿ ಹೇಳಿದ್ದಾರೆ. ವಸಿಷ್ಠ ಮತ್ತು ಅರುಂಧತಿಯ ದರ್ಶನಮಾಡುವುದು. ಆಕಾಶದಲ್ಲಿ ಈ ಎರಡು ನಕ್ಷತ್ರಗಳಿವೆ. ವಸಿಷ್ಠ ನಕ್ಷತ್ರವು ಸ್ವಲ್ಪ ಪ್ರಕಾಶಮಾನವಾಗಿದೆ. ಅರುಂಧತಿ ನಕ್ಷತ್ರವು ಅದರಿಂದ ನಾಲ್ಕು ಅಂಗುಲ ದೂರದಲ್ಲಿ ಕಾಣಿಸುತ್ತದೆ. ಇದು ಒಮ್ಮೆಲೆ ಕಾಣಿಸಲು ಸಾಧ್ಯವಾಗದಷ್ಟು ಚಿಕ್ಕದಾಗಿದೆ. ಬಹಳಷ್ಟು ಅಸ್ಪಷ್ಟವಾಗಿದೆ. ಆದರೆ ಸ್ವಚ್ಛವಾದ ದೃಷ್ಟಿಯಿದ್ದರೆ ಕಾಣುತ್ತದೆ. ವಸಿಷ್ಠನ ಜೊತೆಗೆ ಅನ್ಯ ಆರು ಋಷಿಗಳು ಒಟ್ಟಿಗಿದ್ದಾರೆ. ಆ ಆರು ಋಷಿಗಳ ಪತ್ನಿಯರು ಅವರೊಂದಿಗಿಲ್ಲ. ಆ ಋಷಿ ಪತ್ನಿಯರ ಬೇರೆ ಗುಚ್ಛವಿದೆ. ಅದನ್ನು ಕೃತ್ತಿಕಾ ಎನ್ನುತ್ತಾರೆ. ಅದು ದೂರವಿದೆ. ಒಂದು ನಿರ್ದಿಷ್ಟವಾದ ಸಮಯದಲ್ಲಿ ಮನೆಯಲ್ಲಿ ಒಟ್ಟಿಗೆ ಇರುವಂಥ ಮತ್ತು ನಂತರ ಹೊರಟು ಹೋಗುವಂಥ ಪದ್ಧತಿಯಿದೆ. ಆ ಆರು ಋಷಿಗಳು ಹೊರಟುಹೋಗಿದ್ದರು. ಆವರ ಪತ್ನಿಯರೂ ಬೇರೆ ಇದ್ದರು. ಆದರೆ ವಸಿಷ್ಠ ಮತ್ತು ಅರುಂಧತಿ ಜೊತೆ ಜೊತೆ ಇದ್ದರು. ಅವರು ಇವಳನ್ನು ಬಿಡಲಿಲ್ಲ. ಇವಳೂ ಅವರನ್ನು ಬಿಡಲಿಲ್ಲ. ಇಬ್ಬರೂ ಒಟ್ಟಿಗೆ ಇದ್ದರು. ಅವರ ದರ್ಶನವನ್ನು ಪತಿ–ಪತ್ನಿಯರಿಗೆ ಮಾಡಿಸುತ್ತಾರೆ. ಮತ್ತು ನಿಮ್ಮ ಜೀವನವು ನಿರ್ಮಲ ಮತ್ತು ಅನುಶಾಸಿತವಾಗಿರಲಿ. ಒಬ್ಬರು ಇನ್ನೊಬ್ಬರನ್ನು ಬಿಡದೆ ಇರುವಂತಿರಲಿ ಯಾವ ರೀತಿ ವಸಿಷ್ಠ ಮತ್ತು ಅರುಂಧತಿಯ ಸಂಬಂಧವಿತ್ತೊ ಹಾಗೆ. ಅರುಂಧತಿಯ ಅರ್ಥ ಪತಿಯ ಮಾರ್ಗದಲ್ಲಿ ಅಡ್ಡಿ ಮಾಡದಿರುವವಳು. ರುಂಧತಿ ಎಂದರೆ ರೋಧನ ಮಾಡುವವಳು. ಪತಿ ಎತ್ತರ ಎತ್ತರಕ್ಕೆ ಹೋಗಬೇಕೆಂದೆನ್ನುತ್ತಾನೆಂದರೆ ಅವಳೂ ಕೂಡ ಎತ್ತರೆತ್ತರಕ್ಕೆ ಹೋಗುವವಳಾಗಿರಬೇಕು.

* * * – ಅನು: ಸು.ಕೌ (ಮುಂದುವರೆಯುವುದು)

ಪ್ರಕಟಗೊಂಡ ಮಾನವೀಯತೆ

- ಮಹೇಶ್

ಮಾನವೀಯ ಸಂಬಂಧಗಳಿಗೆ ಬೆಲೆಕೊಡದ ಕ್ಷೇತ್ರವೆಂದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರ ! ಏಕೆಂದರೆ ಈ ಕ್ಷೇತ್ರದಲ್ಲಿ ಹರಿದಾಡುವ ಡಾಲರ್‌ಗಟ್ಟಲೆ ಹಣ. ಇದು ಮಾನವೀಯ ಗುಣಗಳೆಲ್ಲವನ್ನೂ ಮರೆಮಾಚಿಸಿಬಿಡುತ್ತದೆ. ಈ ಮಂದಿ ಸದಾ ಸುಖಲೋಲುಪತೆಯಿಂದ ತೇಲಾಡುವ ಕನಸನ್ನು ಸಾಕಾರಗೊಳಿಸಲು ಹವಣಿಸುತ್ತಾರೆ. ಸಮಾಜವನ್ನು ಕಾಡುತ್ತಿರುವ ಉಳಿದೆಲ್ಲ ಜಂಜಡಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಕೇವಲ ಸ್ವಾರ್ಥ ಸಾಧನೆಯೆಂಬ ಗುರಿಯನ್ನು ಬೆಂಬತ್ತುವುದೇ ಈ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಮಹಾನುಭಾವರ ಆಶಯವಾಗಿದೆ. ತನ್ನ ಕೆಲಸಗಾರರನ್ನು ಕೂಲಿಯವರಂತೆ ನಡೆಸಿಕೊಳ್ಳುವ ಕ್ಷೇತ್ರ ಇದಾಗಿದೆ. ಇಲ್ಲಿ ವ್ಯಕ್ತಿಗೌರವ, ಮಾನವೀಯತೆಗೆ ಕಿಂಚಿತ್ ಬೆಲೆಯಿರುವುದೇ ಇಲ್ಲ. ಇಂಥ ಅದೆಷ್ಟೋ ಘಟನೆಗಳು ನಮ್ಮ ಕಣ್ಮುಂದೆ ಜರುಗಿ ಮಾಯವಾಗಿ ಹೋಗಿವೆ. ಈ ಕ್ಷೇತ್ರದಲ್ಲಿನ ಇಂಥ ಅಮಾನವೀಯ ಘಟನೆಗೆ ಸ್ಪಷ್ಟ ನಿದರ್ಶನವೆಂದರೆ ಇತ್ತೀಚೆಗೆ ಸಂಭವಿಸಿದ ಕರ್ನಾಟಕದ ಸಾಫ್ಟ್‌ವೇರ್ ಇಂಜನಿಯರ್ ಸುರೇಶ್ ಕಲ್ಮನಿಯವರ ದುರಂತಮಯ ಹಾಗೂ ಯಾತನಾಮಯ ಸಾವು.

ಅಧಿಕ ಹಣ ಸಂಪಾದನೆ, ಐಷಾರಾಮಿ ಜೀವನದ ಕನಸು ಹೊತ್ತು ದೂರದ ಅಮೇರಿಕಾಕ್ಕೆ ಹಾರಿದ ಮಂಜುನಾಥ್ ಕಲ್ಮನಿ ಅಲ್ಲಿ ಒಂದು ಪ್ರಸಿದ್ಧ ಸಾಫ್ಟ್‌ವೇರ್ ಕಂಪನಿಯಲ್ಲಿ ಇಂಜನಿಯರ್‌ರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಆ ಸಂಸ್ಥೆಯ ಉನ್ನತಿಗೆ ತನ್ನ ಪ್ರತಿಭೆಯನ್ನೆ ಮುಡುಪಾಗಿಟ್ಟು ಸೇವೆ ಸಲ್ಲಿಸುತ್ತಾ ತಾನು ಇನ್ನೇನು ಯಶಸ್ವೀ ಜೀವನದ ತುತ್ತತುದಿಯಲ್ಲಿದ್ದೇನೆಂಬ ಅಂಶ ಮಂಜುನಾಥ್ ಕಲ್ಮನಿಯವರ ಕಲ್ಪನೆಗೆ ಬರುವ ಮುಂಚೆಯೇ ವಿಧಿ ಅವರ ಬದುಕಿನ ಪುಟಗಳೆಂಬ ಬಿಳಿ ಹಾಳೆಯ ಮೇಲೆ ಕಪ್ಪು ಶಾಹಿಯನ್ನು ಎರಚಿತು. ಒಂದು ದಿನ ಕಂಪನಿಗೆ ಕೆಲಸಕ್ಕಾಗಿ ಹೋಗುವ ಮಾರ್ಗಮಧ್ಯದಲ್ಲಿ ಆದ ಅಪಘಾತದಿಂದ ತನ್ನ ಬೆನ್ನುಮೂಳೆಗೆ ಬಿದ್ದ ತೀವ್ರ ಪೆಟ್ಟಿನಿಂದಾಗಿ ಇನ್ನೆಂದೂ ಮೇಲೆ ಎದ್ದು ಓಡಾಡಲಾಗದ ಅಸಹಾಯಕ ಸ್ಥಿತಿಗೆ ತಲುಪಿ ತಮ್ಮ ಸಾವಿನ ದಿನಗಣನೆಯನ್ನಾರಂಭಿಸಿದರು. ಇತ್ತ ಕಲ್ಮನಿಯವರು ಶಕ್ತರಾಗಿದ್ದಾಗ ಚೆನ್ನಾಗಿ ದುಡಿಸಿಕೊಂಡ ಕಂಪನಿ ತದನಂತರ ಇವರನ್ನು ಕೆಲಸದಿಂದ ವಜಾ ಮಾಡಿತು. ಏಕಾಂಗಿಯಾದ ಮಂಜುನಾಥ್ ತನ್ನ ಖರ್ಚಿನಲ್ಲಿಯೆ ಆಸ್ಪತ್ರೆಯ ಹಾಸಿಗೆಯ ಮೇಲೆ ಕಾಲ ಕಳೆದು ತನ್ನ ಕಂಪನಿ ಮತ್ತು ಸರ್ಕಾರದ ಉದಾಸೀನಕ್ಕೆ ಒಳಗಾದರು.

ಅಮೇರಿಕಾ ಸರ್ಕಾರ ಮಂಜುನಾಥ ಕಲ್ಮನಿಯೆಂಬ ಹೊರೆಯ ಭಾರವನ್ನು ಇಳಿಸಿಕೊಳ್ಳುವ ಸಲುವಾಗಿ ಇತ್ತ ಭಾರತದ ರಾಯಭಾರಿ ಕಛೇರಿಗಾಗಲಿ, ವಲಸೆವಿಭಾಗಕ್ಕಾಗಲಿ ಅಥವಾ ಪ್ರಧಾನಮಂತ್ರಿಯವರ ಕಾರ್ಯಾಲಯಕ್ಕಾಗಲಿ ಲಿಖಿತವಾಗಿ ಯಾವ ಮುನ್ಸೂಚನೆಯನ್ನೂ ನೀಡದೆ ಕೊರಿಯರ್ ಪಾರ್ಸೆಲನ್ನು ಎಸೆದು ಹೋಗುವಂತೆ ದಿಲ್ಲಿಗೆ ಅಕ್ರಮವಾಗಿ ಎಸೆದು ಹೋದರು. ಮಾಹಿತಿ ರಹಿತ ಹಾಗೂ ಕಾನೂನಿನ ನ್ಯೂನ್ಯತೆಯಿಂದ ಕಲ್ಮನಿ ಯಾರ ಗಮನಕ್ಕೂ ಬಾರದೇ ಅನಾಥವಾಗಿ ಸಾಯುತ್ತಿದ್ದರು.

ಆದರೆ ದಿಲ್ಲಿಯ ಸಫ್ದರ್‌ಜಂಗ್ ಆಸ್ಪತ್ರೆಯು ಕಾನೂನಿನ ತೊಡಕಿದ್ದರೂ ಮಾನವೀಯ ಅನುಕಂಪದಿಂದ ಕಲ್ಮನಿಯವರನ್ನು ಆಸ್ಪತ್ರೆಗೆ ದಾಖಲಿಸಿಕೊಂಡು ಅವರ ತಪಾಸಣೆಗೆ ಮುಂದಾಯಿತು. ಆದರೆ ತಪಾಸಣೆಯಿಂದ ದೃಢಪಟ್ಟ ಅಂಶ ಚಿಕಿತ್ಸೆ ನೀಡಿದರೂ ಪ್ರಯೋಜನಕಾರಿಯಾಗಲಾರದೆಂಬ ವಿಷಯ. ಆದರೂ ಮಾನವೀಯ ನೆಲೆಯಲ್ಲಿ ಕಲ್ಮನಿಯನ್ನು ಮೂರು ತಿಂಗಳು ತೀವ್ರ ನಿಗಾ ಘಟಕದಲ್ಲಿ ಇರಿಸಿಕೊಳ್ಳಲಾಯಿತು. ಆರಂಭದಲ್ಲಿ ಕಲ್ಮನಿಯ ಕುಟುಂಬದವರ್‍ಯಾರು ಆಗಮಿಸದಿದ್ದರೂ ನಂತರ ಆಗಮಿಸಿದ ಅವರ ತಾಯಿ ಹಾಗೂ ಸಹೋದರರಿಗೆ ದಿಲ್ಲಿಯ ಕರ್ನಾಟಕ ಭವನದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ, ಅವರ ಊಟ, ತಿಂಡಿಯ ಖರ್ಚು ಹಾಗೂ ಮಂಜುನಾಥ್ ಕಲ್ಮನಿಯು ಮೃತಪಟ್ಟ ನಂತರ ಅವರ ಶವವನ್ನು ಕರ್ನಾಟಕಕ್ಕೆ ತಂದುದರ ಖರ್ಚು, ಹಾಗೂ ಅವರ ಜೊತೆಗಿದ್ದ ನಾಲ್ವರ ವಿಮಾನ ಪ್ರಯಾಣ ಟಿಕೆಟ್ ಖರ್ಚು ಇವುಗಳೆಲ್ಲ ಸೇರಿ ೧ ಲಕ್ಷದ ೭೭ ಸಾವಿರ ರೂಗಳಾದವು. ಈ ಎಲ್ಲ ಖರ್ಚುಗಳನ್ನು ದಿಲ್ಲಿಯ ಕರ್ನಾಟಕ ಭವನದ ಉನ್ನತ ಅಧಿಕಾರಿಗಳಾದ ಶ್ರೀ ಸುಧೀರ್‌ಕುಮಾರ್, ಶ್ರೀ ಮಂಜೇಶ್ ಹಾಗೂ ಡಾ.ಶಿವಪುತ್ರ ಹೊಸಮನಿ ಮುಂತಾದ ಅಧಿಕಾರಿಗಳು ಭರಿಸಿದ್ದಾರೆ. ಮಾನವತೆಯ ಸಾಕಾರಮೂರ್ತಿಗಳಾದ ಈ ಮೂವರು ಅಧಿಕಾರಿಗಳು ಮಾಡಿರುವ ಮಾನವೀಯ ಖರ್ಚಿಗೆ ಸರ್ಕಾರ ಸಮ್ಮತಿ ನೀಡಿದರೆ ಖರ್ಚು ಸರ್ಕಾರದ ಬೊಕ್ಕಸದ ಲೆಕ್ಕಕ್ಕೆ ಹೋಗುತ್ತದೆ. ಇಲ್ಲದಿದ್ದಲ್ಲಿ ಈ ಅಧಿಕಾರಿಗಳೆ ತಮ್ಮ ಕೈಯಿಂದ ತುಂಬಬೇಕಾದ ಸ್ಥಿತಿ. ಮಂಜುನಾಥ ಕಲ್ಮನಿಯ ಚಿಕಿತ್ಸೆಯಿಂದ ಹಿಡಿದು ಆತನ ಶವದ ಮೇಲಿನ ಹೂಗುಚ್ಛದವರೆಗೂ ಈ ಎಲ್ಲ ಅಧಿಕಾರಿಗಳು ತಮ್ಮ ಸ್ವಂತ ಕೆಲಸವೆಂಬಂತೆ ಮಾಡುವುದರ ಮೂಲಕ ತಮ್ಮ ಮಾನವೀಯತೆ ಮೆರೆದಿದ್ದಾರೆ.

* * *

ಜನಪದ ಧ್ವನಿ

ಕರ್ನಾಟಕ ರಾಜಕಾರಣಿಗಳ ಅಸಂಬದ್ಧ ನಡವಳಿಕೆಗಳು

ಯಡಿಯೂರಪ್ಪನವರು ಮುಖ್ಯಮಂತ್ರಿಗಾಳದರು. ತಮ್ಮ ಸಂಪ್ರದಾಯದಂತೆ ವಿಶೇಷ ಪೂಜೆಗಳನ್ನು ನೆರವೇರಿಸಿದರು. ಮಠಾಧೀಶರ ಪಾದಕಮಲಗಳಿಗೆ ನಮಿಸಿ ಆಶೀರ್ವಾದ ಪಡೆದುಕೊಂಡರು. ಅಷ್ಟೇ ಅಲ್ಲದೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರುಗಳ ಮನೆಗಳಿಗೆ ತೆರಳಿ ಅವರ ಸಹಕಾರವನ್ನು ಕೇಳಿಕೊಂಡರು.

ಮಂತ್ರಿಗಳನ್ನು ನೇಮಕ ಮಾಡುತ್ತಿದ್ದಂತೆಯೇ ತಮಗೆ ಮಂತ್ರಿ ಪದವಿ ಶತಸ್ಸಿದ್ಧ ಎಂದುಕೊಂಡಿದ್ದು ಪದವಿ ದೊರಕದಿದ್ದಕ್ಕೆ ತಮಗೆ ಅನ್ಯಾಯವಾಯಿತು, ಮೋಸವಾಯಿತು ಎಂದು ಆಕ್ರೋಷಗೊಂಡು ನಾಯಕರನ್ನು ಮನಸಾರೆ ಶಪಿಸಿದರು. ಎಲ್ಲವೂ ಬಹಿರಂಗವಾಗಿ. ಹಿರಿಯ ಮುಖಂಡರೆನೆಸಿಕೊಂಡಿದ್ದ ಜಗದೀಶ ಶೆಟ್ಟರಿಗೆ ಮಂತ್ರಿ ಪದವಿ ದೊರಕದೆ ಇದ್ದುದಕ್ಕೆ ಅವರ ಹಿಂಬಾಲಕರು ಹಿಂಸಾಚಾರಕ್ಕೆ ಇಳಿದು ಕಲ್ಲುತೂರಿ ಬಸ್ಸುಗಳಿಗೆ ಬೆಂಕಿ ಹಚ್ಚಿದರು. ಈ ನಾಯಕರು ತಮ್ಮವರಿಗೆ ಈ ರೀತಿ ಮಾಡಬಾರದೆಂದು ಗದರಿಸದೆ ತಿಳುವಳಿಕೆ ಹೇಳದೆ ಮೌನವಾಗಿದ್ದರು. ತಮಗೆ ಮಂತ್ರಿ ಪದವಿ ವಿನಃ ಬೇರೆ ಏನೂ ಬೇಡವೆಂದೂ, ವಿಧಾನಸಭಾಧ್ಯಕ್ಷಸ್ಥಾನ ಬೇಡವೇ ಬೇಡವೆಂದು ಎಳೆಯಮಕ್ಕಳಂತೆ ಹಟ ಮಾಡಿದರು. ಕಡೆಗೆ ವಿಧಾನಸಭಾದ್ಯಕ್ಷ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರು.

ಹೊಸದಾಗಿ ಚುನಾಯಿತರಾದವರು ಭಗವಂತ, ಸತ್ಯನಿಷ್ಠೆ ಅಥವಾ ರಾಜ್ಯಾಂಗದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸುವುದು ನಾಗರಿಕ ಸಂಪ್ರದಾಯ. ಆದರೆ ಅನೇಕ ಶಾಸಕರು ತಮ್ಮ ಮನೆದೇವರುಗಳು, ಊರದೇವರುಗಳು, ಗ್ರಾಮದೇವತೆಗಳ ಹೆಸರಿನಲ್ಲಿ ಇನ್ನೂ ಕೆಲವರು ಯಡಿಯೂರಪ್ಪನವರ ಮತ್ತು ಬಳ್ಳಾರಿಯ ಗಣಿ ಸಾಮ್ರಾಟರ ಹೆಸರುಗಳಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಒಬ್ಬ ಮಹಾನುಭಾವರು ವಿಧಾನಸೌಧದ ಮೆಟ್ಟಲನ್ನು ಎರಡೂ ಕೈಗಳಿಂದ ಮುಟ್ಟಿ ಎರಡೂ ಕಣ್ಣುಗಳಿಗೆ ಒತ್ತಿಕೊಂಡರು. ಕಂದಾಚಾರ, ಮೂಢನಂಬಿಕೆಗಳು ಭದ್ರವಾಯಿತು.

ಅದ್ವಾನಿ ಮುಂತಾದ ಕೆಲವು ನಾಯಕರು ವಿಶೇಷ ವಿಮಾನದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದರು. ಎಲ್ಲ ಒಂದು ಗಂಟೆಯೊಳಗೆ ಮುಗಿದು ಹೋಯಿತು. ಅನಂತರ ಅದೇ ವಿಮಾನದಲ್ಲಿ ದೆಹಲಿಗೆ ವಾಪಸ್ ಹೋದರು. ಈ ವಿಶೇಷ ವಿಮಾನದ ಬಾಡಿಗೆ ಕೇವಲ ಇಪ್ಪತ್ತೇಳು ಲಕ್ಷ ರೂಪಾಯಿಗಳು ಎಂದು ಪ್ರಖ್ಯಾತ ಇಂಗ್ಲಿಷ್ ದಿನ ಪತ್ರಿಕೆಯಲ್ಲೂ ವರದಿಯಾಗಿತ್ತು. ಇವರುಗಳು ತಂಗುವ ಮತ್ತು ಊಟ ಪಾನೀಯಗಳ ವೆಚ್ಚ ಬೇರೆ ಇರುತ್ತದೆ.

ಸ್ವಾತಂತ್ರ್ಯ ಬಂದ ಅರವತ್ತೊಂದನೆ ವರ್ಷದಲ್ಲಿ ನಾವು, ಈ ನಾಡಿನ ಪ್ರಜೆಗಳು, ಪ್ರಭುಗಳು ಇಂಥವರನ್ನು ಚುನಾಯಿಸಿ ಅಧಿಕಾರಕ್ಕೆ ಏರಿಸಿದೆವಲ್ಲ ಎಂದು ನಾಚಿಕೆ ಪಡಬೇಕಾಗಿದೆ. ತಲೆ ತಗ್ಗಿಸಬೇಕಾಗಿದೆ.

– ಎ. *ವೆಂಕಟರಮಣಶೆಟ್ಟಿ*, ಮೈಸೂರು

* * *

ಭೂಮಿಯ ಮಿತಿಮೀರಿದ ಶೋಷಣೆ

– ನಾಗೇಶ ಹೆಗಡೆ

ಒಂದು ವಿಲಕ್ಷಣ ಜೀವಿ ದಕ್ಷಿಣ ಅಮೆರಿಕದಲ್ಲಿ ಪತ್ತೆಯಾಗಿದೆಯೆಂದು ವಿಜ್ಞಾನಿಗಳು ಕಳೆದವಾರ ವರದಿ ಮಾಡಿದ್ದಾರೆ ಅದು ತನ್ನ ಅಮ್ಮನ ತ್ವಚೆಯನ್ನೇ ಕೆರೆದು ಕೆರೆದು ತಿನ್ನುತ್ತ ಬೆಳೆಯುತ್ತದೆ. ನಮ್ಮಲ್ಲಿ ಮಳೆಗಾಲದಲ್ಲಿ ಕಾಣಬರುವ ಸಹಸ್ರಪದಿಯನ್ನೇ ಹೋಲುವ ಈ ಜೀವಿಯ ವೈಜ್ಞಾನಿಕ ಹೆಸರು ಸೈಫೊನಾಪ್ಸ್ ಅನುಲೇಟಸ್. ನೀರಲ್ಲೂ ಮಣ್ಣಿನಲ್ಲೂ ವಾಸಿಸಬಲ್ಲ ಈ ದ್ವಿಚರಿ ಜೀವಿಗೆ ಅಮ್ಮನ ಹೊರಮೈಯನ್ನು ಕೆರೆದು ತಿನ್ನಲೆಂದೇ ವಿಶೇಷ ಹಲ್ಲುಗಳು ಇವೆ; ಅಮ್ಮನೂ ಅಷ್ಟೆ; ಸಂತಾನವೃದ್ಧಿಗೆ ಮುನ್ನ ತನ್ನ ತ್ವಚೆಯಲ್ಲಿ ಕೊಬ್ಬಿನ ವಿಶೇಷ ಆಹಾರವನ್ನು ಸಜ್ಜಾಗಿಡುತ್ತದೆ.

ವಂಶದ ಉಳಿವಿಗಾಗಿ ತನ್ನ ಸುಖವನ್ನು ಬಲಿಕೊಡಬೇಕೆಂಬ ತಂದೆ ತಾಯಿಗಳ ಇಂಥ ಚರ್ಯೆಗಳಿಗೆ ಜೀವ ವಿಜ್ಞಾನದಲ್ಲಿ ಸಾಕಷ್ಟು ಉದಾಹರಣೆಗಳಿವೆ. ಮರಿಯನ್ನು ಚೀಲದಲ್ಲಿ ಹೊತ್ತು ಕುಪ್ಪಳಿಸುವ ಕಾಂಗರೂಗಳು ನಮಗೆ ಗೊತ್ತು. ಹಾಗೆಯೇ ಮರಿಗಳನ್ನು ತನ್ನ ಬಾಯಿಯಲ್ಲೇ ಇಟ್ಟುಕೊಂಡು, ಅವು ಸುಪುಷ್ಟವಾಗಿ ಬೆಳೆಯುವವರೆಗೂ ತಾನು ಉಪವಾಸವಿರುವ ಕಪ್ಪೆಗಳ ಬಗ್ಗೆ ಕೇಳಿದ್ದೇವೆ. ಅಷ್ಟೇಕೆ, ಮಳೆಯಿರಲಿ, ಚಳಿಯಿರಲಿ ಬೆಂಗಳೂರಿನ ಗಿಜಿಗಿಜಿ ಟ್ರಾಫಿಕ್‌ನಲ್ಲಿ ಮಗುವನ್ನು ಅವುಚಿಕೊಂಡು ಸ್ಕೂಟಿಯನ್ನು ಶಾಲೆಯತ್ತ ಓಡಿಸುವ ತಾಯಂದಿರನ್ನೂ ನೋಡುತ್ತಿರುತ್ತೇವೆ. ಆದರೆ ಹಸಿದ ಮರಿಗೆ ತನ್ನ ದೇಹದ ಭಾಗವನ್ನೇ ತಿನ್ನಿಸುವ ಈ ಪ್ರಾಣಿ ನಿಜಕ್ಕೂ ಅಪರೂಪವೇ ಸರಿ.

ಇದನ್ನೇ ಒಂದು ರೂಪಕವಾಗಿ ನೋಡಿದರೆ, ಇಡೀ ಜೀವಸಂಕುಲವೇ ಭೂಮಿ 'ತಾಯಿಯ' ತ್ವಚೆಯನ್ನು ಹರಿಹರಿದು ತಿನ್ನುತ್ತ ಹಸಿವೆ ನೀಗಿಸಿಕೊಳ್ಳುವ ಚಿತ್ರಣ ಸಿಗುತ್ತದೆ. ಅದು ಅರಣ್ಯವಿರಲಿ, ಗೋಮಾಳವಿರಲಿ, ಹುಲ್ಲಗಾವಲಿರಲಿ, ನದಿತೀರವಿರಲಿ, ಅಲ್ಲಿನ ಜೀವಿಗಳನ್ನೆಲ್ಲ ಹೊಸಕಿ ಹಾಕಿ ಮೇಲುಗೈ ಪಡೆದ ಮನುಷ್ಯನ ಕೃತ್ಯಕ್ಕೆ ನಾವು ಉಳುಮೆ ಎನ್ನುತ್ತೇವೆ. ಮನುಷ್ಯನ ಈ ಉಪಟಳವನ್ನು ತಕ್ಕಮಟ್ಟಿಗೆ ಭೂಮಿ ಸಹಿಸಿಕೊಂಡಿದೆ. ನಮ್ಮ ಈ ಚರ್ಯೆ ಸೈಫೋನಾಪ್ಸಕ್ಕಿಂತ ತೀರ ಭಿನ್ನವೇನಲ್ಲ. ಆದರೆ ಈಚಿನ ದಶಕಗಳಲ್ಲಿ ಈ ರೂಪಕವನ್ನೂ ಮೀರಿ ನಾವು ಬೆಳೆದಿದ್ದೇವೆ. ನೆಲವನ್ನು ಆಳವಾಗಿ ಕೊರೆದು ಅದರೊಳಗಿನ ನೀರನ್ನು, ತೈಲವನ್ನು, ಅನಿಲವನ್ನು ಮೇಲೆತ್ತಿ ತೈಲಶಕ್ತಿಯಿಂದಲೇ ಭಾರೀ ಗಾತ್ರದ ಯಂತ್ರಗಳನ್ನು ಓಡಿಸಿ ನೆಲವನ್ನು ಸಮತಟ್ಟಾಗಿ ಮಾಡಿ, ಕಾಲುವೆಗಳನ್ನು ಕೊರೆದು, ಅದೇ ತೈಲವನ್ನೇ ರಸಗೊಬ್ಬರವನ್ನಾಗಿ ಪರಿವರ್ತಿಸಿ, ಭೂಮಿಯ ಧಾರಣ ಶಕ್ತಿಯನ್ನೂ ಮೀರಿ ಬೇಸಾಯ ಮಾಡುತ್ತಿದ್ದೇವೆ, ಭೂಮಿತಾಯಿ ಮೈಪರಚಿಕೊಳ್ಳಬೇಕಿತ್ತು. ಆದರೆ ಆಹಾರ ಅಭಾವವೆಂದೋ, ರಸಗೊಬ್ಬರದ ಗೋಟಾವಳಿ ಎಂದೋ ಸರ್ಕಾರಗಳು ಮೈಪರಚಿಕೊಳ್ಳುವಂತಾಗಿದೆ.

ಕರ್ನಾಟಕದ ವಿಪರ್ಯಾಸ ಏನೆಂದರೆ, ರಸಗೊಬ್ಬರ, ಕೀಟನಾಶಕಗಳ ಬಳಕೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡುವ ನಿಟ್ಟಿನಲ್ಲಿ 'ಸಾವಯವ ಕೃಷಿ ನೀತಿ'ಯನ್ನು

ಜಾರಿಗೆ ತಂದ ಮೊದಲ ರಾಜ್ಯವೆಂಬ ಹೆಗ್ಗಳಿಕೆ ನಮ್ಮದು. ರಸಗೊಬ್ಬರದ ಬಳಕೆ ಇಲ್ಲದೆಯೇ ಅಲ್ಪ ವೆಚ್ಚದಲ್ಲಿ , ಸುಸ್ಥಿರ ವಿಧಾನದಲ್ಲಿ, ಉತ್ತಮ ಗುಣಮಟ್ಟದ ಬೆಳೆ ಬೆಳೆಯಲು ಸಾಧ್ಯ ಎಂಬುದನ್ನು ಹುಲಕೋಟಿಯ ಗಾಂಧೀ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಣ್ಣಾರೆ ನೋಡಿದ ಅಂದಿನ ಕೃಷಿ ಸಚಿವ ಎಚ್.ಕೆ.ಪಾಟೀಲರು ಕೆಲವು ಆಸಕ್ತ ಕೃಷಿತಜ್ಞರ ಸಲಹೆಯ ಮೇರೆಗೆ ಸಾವಯವ ನೀತಿಯನ್ನು ಜಾರಿಗೆ ತಂದರು. ಸರಕಾರದ ಹಾಗೂ ಪಟ್ಟಭದ್ರ ಕೃಷಿ ತಂತ್ರಜ್ಞರ ಧೋರಣೆಯನ್ನೇ ಬದಲಿಸುವ ಮೊದಲ ಹೆಜ್ಜೆ ಅದಾಗಿತ್ತು. ಒಂದರ್ಥದಲ್ಲಿ ರೈತರ ಹಿತರಕ್ಷಣೆಗೆಂದು 'ಹಿಂದಿಟ್ಟ' ಹೆಜ್ಜೆ ಅದು. ಮರತೇ ಹೋಗುವಂತಿದ್ದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಹಾಗೂ ತಳಿಗಳನ್ನು ಮತ್ತೆ ನವೀಕರಿಸುವ ಈ ಯತ್ನದಿಂದ ಮಣ್ಣು, ನೀರು, ಭೂಜಲ, ಗಾಳಿ ಮತ್ತು ವಾಯುಮಂಡಲದ ಆರೋಗ್ಯ ಚೆನ್ನಾಗಿರುತ್ತದೆ. ಇಳುವರಿಯೂ ಹೆಚ್ಚುತ್ತದೆ; ಫಸಲಿನ ಗುಣಮಟ್ಟವೂ ಉತ್ತಮವಾಗುತ್ತದೆ. ಇದನ್ನೆಲ್ಲ ಪ್ರತ್ಯಕ್ಷ ತೋರಿಸಲೆಂದೇ ನಾಲ್ಕು ವರ್ಷಗಳಿಂದ ಪ್ರತಿ ಜಿಲ್ಲೆಯಲ್ಲಿ ೨೫೦ಎಕರೆ; ಹಾಗೂ ಈ ವರ್ಷದಿಂದ ಪ್ರತಿ ತಾಲ್ಲೂಕಿನಲ್ಲಿ ೨೫೦ ಎಕರೆಯಲ್ಲಿ ಸಾವಯವ ಕೃಷಿ ಪ್ರಯೋಗ ನಡೆದಿದೆ. ಇಲ್ಲಿ ರಸಗೊಬ್ಬರದ ಜಂಜಾಟವಿಲ್ಲ; ಕೀಟನಾಶಕಗಳನ್ನು ಸುರಿಯುವ ಅಥವಾ ಗಂಟಲಿಗೆ ಸುರಿದುಕೊಳ್ಳುವ ತಾಪತ್ರಯ ಇಲ್ಲ. ಗೋಲಿಬಾರ್‌ಗೆ ಎದೆಕೊಡಬೇಕಿಲ್ಲ.

ಹೀಗಿದ್ದರೂ ರಸಗೊಬ್ಬರಕ್ಕೆ ಪರದಾಡುವ ರೈತರನ್ನು ದೂಷಿಸುವಂತಿಲ್ಲ. ದುಡಿಮೆಯ ಶ್ರಮವನ್ನು ಕಡಿಮೆ ಮಾಡುತ್ತಲೇ ಇಳುವರಿಯನ್ನು ಇಮ್ಮಡಿ ಮಾಡಬಲ್ಲ ತಂತ್ರಗಳನ್ನೇ ಎಲ್ಲರೂ ಬಯಸುತ್ತಾರೆ. ಅವರ ಆಸೆಗೆ ತಂತ್ರಜ್ಞಾನಿಗಳು ನೀರೆರೆಯುತ್ತಾರೆ. ಅಮೆರಿಕದ ಟೆಕ್ಸಾಸ್‌ನಲ್ಲಿ ಭತ್ತದ ಬಿತ್ತನೆಯನ್ನೂ ವಿಮಾನದಿಂದಲೇ ಮಾಡುತ್ತಾರೆ. ಮಳೆ ಬಾರದಿದ್ದರೆ ಮೋಡ ಬಿತ್ತನೆಯನ್ನೂ ಮಾಡಿ ಮಳೆ ಸುರಿಸುತ್ತೇವೆಂದು ಹೇಳುತ್ತಾರೆ. ಇನ್ನೇನು ಮಳೆಯೊಂದಿಗೆ ರಸಗೊಬ್ಬರವೂ ಆಕಾಶದಿಂದ ಸುರಿಯುವಂತೆ ಮಾಡುತ್ತೇವೆಂದು ವಿದೇಶಿ ಕಂಪನಿಗಳು ಹೇಳಿದರೆ ನಮ್ಮ ಸರ್ಕಾರಿ ಪ್ರತಿನಿಧಿಗಳುಅದಕ್ಕೂ ವ್ಯವಸ್ಥೆ ಮಾಡುತ್ತಾರೆ. (ಅಂದಹಾಗೆ, ನಿಸರ್ಗವೇ ಆಕಾಶದಿಂದ ರಸಗೊಬ್ಬರವನ್ನು ಬೀಳಿಸುವ ವೈಚಿತ್ರ್ಯ ಗೊತ್ತೆ? ಪ್ರತಿ ಮುಂಗಾರಿಗೂ ತುಸು ಮುನ್ನ ಗುಡುಗು ಮಿಂಚಿನ ಕಿಡಿ ಸಿಡಿಯುತ್ತಲೇ ಗಿಡಮರಗಳು ಹಸಿರಾಗುತ್ತವೆ. ಏಕೆಂದರೆ, ಗಾಳಿಯಲ್ಲಿನ ಸಾರಜನಕದ ಕೆಲವು ಭಾಗ ಅಯಾನೀಕೃತಗೊಂಡು ಸಸ್ಯಗಳಿಗೆ ಲಭ್ಯವಾಗುತ್ತದೆ)

ನಮ್ಮಲ್ಲಿ ರಸಗೊಬ್ಬರಕ್ಕೆ ನೂಕು ನುಗ್ಗಲು ಹೆಚ್ಚಾದ ವೇಳೆಯಲ್ಲೇ ಜಗತ್ತಿನ ಮಾಧ್ಯಮಗಳಲ್ಲಿ ಆಹಾರದ ಅಭಾವ ತಲೆದೋರಿದೆ. ದಕ್ಷಿಣದ ಸುಮಾರು ಮೂವತ್ತು ದೇಶಗಳಲ್ಲಿ ಇದೀಗ ಆಹಾರ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ, ಲಾಠೀಚಾರ್ಜು ನಡೆದಿದೆ. ಅಂದಾಜು ಹತ್ತು ಕೋಟಿ ಜನರು ಮತ್ತೆ ಬಡತನದ ಕಂದರಕ್ಕೆ ಬೀಳಲಿದ್ದಾರೆ ಎಂದು ವಿಶ್ವಬ್ಯಾಂಕ್ ಹೇಳಿದೆ. ಬ್ರಿಟನ್ನಿನ 'ನ್ಯೂ ಸೈಂಟಿಸ್ಟ್' ಪತ್ರಿಕೆಯ ಈ ವಾರದ ವರದಿಯ ಪ್ರಕಾರ ಆಹಾರ ಉತ್ಪಾದನೆ ಹೆಚ್ಚಿಸುವತ್ತ ಶ್ರೀಮಂತ ದೇಶಗಳು ಈಚಿನ ವರ್ಷಗಳಲ್ಲಿ ಹೊಸ ಸಂಶೋಧನೆಗೆ ಹಣ ಹೂಡುತ್ತಿಲ್ಲವಾದ್ದರಿಂದ ಭತ್ತ, ಗೋಧಿ, ಜೋಳದ ಉತ್ಪಾದನೆ ಮೊದಲಿನಂತೆ ವರ್ಷ ವರ್ಷಕ್ಕೆ ಹೆಚ್ಚುತ್ತಿಲ್ಲ; ಜನಸಂಖ್ಯೆಯ ಹೆಚ್ಚಳದ ಜತೆಜತೆಗೇ ನಾನ್‌ವೆಜ್ ತಿನ್ನಬಯಸುವ ಮಧ್ಯಮವರ್ಗದ ಜನಸಂಖ್ಯೆಯೂ

ದಕ್ಷಿಣ ದೇಶಗಳಲ್ಲಿ ಹೆಚ್ಚಾಗಿದೆ; ಸಾಲದ್ದಕ್ಕೆ ಭೂಮಿಯ ತಾಪಮಾನದ ಏರಿಕೆಯನ್ನು ತಡೆಗಟ್ಟಲೆಂದು ಕೃಷಿ ಭೂಮಿಯಲ್ಲಿ ಇಂಧನ ಬೆಳೆಗಳು ಹೆಚ್ಚುತ್ತಿವೆ ಎಂದೆಲ್ಲ ಕಾರಣಗಳನ್ನು ಅದು ಪಟ್ಟಿ ಮಾಡಿದೆ. ತುರ್ತಾಗಿ, ಅತಿ ತುರ್ತಾಗಿ, ಕೃಷಿ ಸಂಶೋಧನೆ ಹೆಚ್ಚಬೇಕೆಂದು ಒತ್ತಾಯಿಸಿದೆ.

ಆಹಾರದ ಅಭಾವ ನಿಜವೊ ಮಾಟವೊ ಹೇಳುವಂತಿಲ್ಲ. ವಿಶ್ವ ಕೃಷಿ ಮತ್ತು ಆಹಾರ ಸಂಸ್ಥೆಯ ವರದಿಯ ಪ್ರಕಾರ ಕಳೆದ ವರ್ಷ ಆಹಾರ ಧಾನ್ಯಗಳ ಉತ್ಪಾದನೆ ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿ ೨೧೩ ಕೋಟಿ ಟನ್‌ಗೆ ಏರಿದೆ. ಆದರೆ ಅದರಲ್ಲಿ ಕೇವಲ ೧೦೧ ಕೋಟಿ ಟನ್ ಆಹಾರ ಧಾನ್ಯ ಮಾತ್ರ ಊಟಕ್ಕೆ ಬಳಕೆಯಾಗಲಿದೆ. ಇನ್ನುಳಿದವು ಪಶುಗಳ ಮೇವಿಗೆ, ವಾಹನಗಳ ಇಂಧನಕ್ಕೆ ಹಾಗೂ ಗೋದಾಮಿನ ಹೆಗ್ಗಣಗಳಿಗೆ ಹೋಗುತ್ತಿವೆ. ಇಂಗ್ಲೆಂಡಿನಲ್ಲಿ ಏಪ್ರಿಲ್ ೧೫ ರಿಂದ ಎಲ್ಲ ವಾಹನಗಳಿಗೂ ಸಸ್ಯಗಳಿಂದ ಲಭಿಸುವ ಇಥೆನಾಲ್ ಅಥವಾ ಬಯೊಡೀಸಲ್ಲನ್ನು ಕಡ್ಡಾಯವಾಗಿ ಮಿಶ್ರಣ ಮಾಡಬೇಕೆಂಬ ಶಾಸನವೊಂದು ಜಾರಿಗೆ ಬಂದಿದೆ. ಒಂದು ಕಾರಿನ ಪೆಟ್ರೋಲ್ ಟ್ಯಾಂಕ್ ತುಂಬಿಸಲು ಬೇಕಾದಷ್ಟು ಇಥೆನಾಲ್‌ಗಾಗಿ ಒಬ್ಬ ವ್ಯಕ್ತಿಯ ಒಂದಿಡೀ ವರ್ಷದ ಊಟಕ್ಕೆ ಸಾಲುವಷ್ಟು ಧಾನ್ಯವನ್ನು ಹಿಂಡಬೇಕಾಗುತ್ತದೆ ಎಂದು ವಿಶ್ವಬ್ಯಾಂಕ್ ಅಂದಾಜು ಮಾಡಿದೆ. 'ಆಹಾರದ ಅಭಾವದಿಂದ ಜಗತ್ತು ತತ್ತರಿಸುತ್ತಿರುವಾಗ ಧಾನ್ಯರಸವನ್ನು ಪೆಟ್ರೋಲ್ ಟ್ಯಾಂಕಿನಲ್ಲಿ ತುಂಬಿಸುವ ಕುಕೃತ್ಯದಲ್ಲಿ ಈ ದೇಶದ ಪ್ರತಿಯೊಬ್ಬ ಡ್ರೈವರೂ ಭಾಗಿಯಾಗ ಬೇಕಿದೆ' ಎಂದು ಬರೆಯುತ್ತಾನೆ, ಬ್ರಿಟನ್ನಿನ ಖ್ಯಾತ ಅಂಕಣಕಾರ ಜಾರ್ಜ್‌ಮಾನ್‌ಬಯೋಟ್.

ಅಂತೂ ಆಹಾರ ಫಸಲಿನ ಇಳುವರಿ ಹೆಚ್ಚಿಸಲೆಂದು ವಿಜ್ಞಾನಿಗಳು ಹೊಸ ಹೊಸ ಪ್ರಯೋಗಕ್ಕೆ ಅಣಿಯಾಗಿದ್ದಾರೆ. ಕುಲಾಂತರಿ ತಳಿಗಳೇ ಏಕೈಕ ಉಪಾಯವೆಂದು ಬಿಂಬಿಸಲಾಗುತ್ತಿದೆ. ಕಾರ್ಖಾನೆಗಳಲ್ಲೇ ಕೃತಕ ಮಣ್ಣನ್ನೂ ಉತ್ಪಾದಿಸುವ ಯತ್ನಗಳು ನಡೆದಿವೆ. ಅಮೆಝಾನ್ ಅರಣ್ಯಶ್ರೇಣಿಯ ಅತ್ಯಂತ ಸಮೃದ್ಧ ಮಣ್ಣಿನಲ್ಲಿ ಇದ್ದಿಲ ಅಂಶ ಹೇರಳ ಇರುವುದನ್ನು ಪತ್ತೆ ಮಾಡಿದ ವಿಜ್ಞಾನಿಗಳು 'ಬಯೋಚಾರ್' ಎಂಬ ವಿಶೇಷ ಇದ್ದಿಲನ್ನು ರೂಪಿಸಿದ್ದಾರೆ. ಅಮೆರಿಕದ ಎರಡು ಕಂಪನಿಗಳು ಅದರ ಮಾರಾಟಕ್ಕೆ ತೊಡಗಿವೆ. ಉಳುಮೆಗೆಂದೇ ಕಾಡನ್ನು ಕಡಿದು ಸುಡುತ್ತಿದ್ದ ಬುಡಕಟ್ಟು ಜನರ ತಂತ್ರ ಮತ್ತೆ ಊರ್ಜಿತಕ್ಕೆ ಬರುತ್ತಿದೆ. ಹೊಸ ತಂತ್ರಗಳ ಹುಡುಕಾಟ ತೀವ್ರವಾಗಿದೆ.

ಅಮ್ಮನ ಮೈಯನ್ನು ಪರಚಿ ತಿಂದು ಬಲಿತ ಸೈಫೋನಾಪ್ಸ್ ಜಂತು ಕ್ರಮೇಣ ಊಟ ಹುಡುಕಲೆಂದು ಅಮ್ಮನಿಂದ ದೂರ ಹೋಗಲೇಬೇಕು. ನಾವೂ ದೂರ ಭವಿಷ್ಯದಲ್ಲಿ ಬೇರೆ ಗ್ರಹಗಳಲ್ಲಿ ಬೇಸಾಯ ಮಾಡಬೇಕೇನೊ.

ಅಂದಹಾಗೆ, ಮಂಗಳ ಲೋಕದಲ್ಲಿ ಫೀನಿಕ್ಸ್ ನೌಕೆ ನಿಧಾನವಾಗಿ ತನ್ನ ಅಗೆತವನ್ನು ಮುಂದುವರೆಸಿದೆ. ಮೊದಲ ಬಾರಿಗೆ ಎತ್ತಿದ ಮಣ್ಣು ಮುದ್ದೆ ಮುದ್ದೆಯಾಗಿದ್ದು ಅದನ್ನು ಪುಟ್ಟ ಕ್ಯಾಪ್ಸೂಲ್ ಗಾತ್ರದ ಮೂಸೆಯುಲ್ಲಿ ಸುರಿಯಲು ಯಾಂತ್ರಿಕ ತೋಳು ಸಾಕಷ್ಟು ತಿಣುಕಿತು. ಮೊದಲ ಅಗೆತದಿಂದ ತೆಗೆದ ಮಣ್ಣು ಬಿಸಿಯಾಗುತ್ತಿದ್ದಂತೆ ಇದೀಗ ಎರಡನೆಯ ಅಗೆತ ಆರಂಭವಾಗಿದೆ. ಪರಗ್ರಹದ ಮೈ ಪರಚುವ ಕೆಲಸ ಮುಂದುವರೆದಿದೆ.

* * *

(ಸಾಭಾರ : ಪ್ರಜಾವಾಣಿ)

ಸನ್ಮಾನ್ಯರಿಂದ

ತಮ್ಮ ಪತ್ರಿಕೆಯ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಬಿ.ಎಂ.ಪುಟ್ಟಯ್ಯ ಅವರ 'ದಲಿತ ಹೋರಾಟಕ್ಕೆ ನಿದ್ದೆ ಮಾತ್ರೆ' ಎಂಬ ಲೇಖನ ಓದಿದೆ. ಅದರಲ್ಲಿ ಅವರು ಬರೆದಿರುವ ಬಹಳಷ್ಟು ವಿಚಾರಗಳು ನಿಜವೇ ಆಗಿವೆ. ಆದರೆ ಲೇಖನದ ಕೊನೆಯಲ್ಲಿ ಅವರು ಪ್ರಸ್ತಾಪಿಸುವ ಎಂ.ಕೆ. ಗಾಂಧಿಯವರ (ಇವರು ಮಹಾತ್ಮ ಗಾಂಧಿಯವರೇ ಆಗಿರಬಹುದೆಂದು ಪಾಮರರ ನಂಬಿಕೆ!) ಊಳಿಗಮಾನ್ಯಶಾಹಿ ಶೋಷಣೆಯ ರಾಮರಾಜ್ಯದ ಕನಸು, ನೆಹರೂ ಅವರ ಬಂಡವಾಳಶಾಹಿ ಸಮಾಜವಾದ ಇತ್ಯಾದಿಗಳನ್ನು ಸ್ವಲ್ಪ ವಿವರಿಸಿದ್ದರೆ ಚೆನ್ನಾಗಿತ್ತು. ಏಕೆಂದರೆ ಗಾಂಧಿ ಊಳಿಗಮಾನ್ಯಶಾಹಿ ಶೋಷಣೆಯನ್ನು ಬೆಂಬಲಿಸುತ್ತಿದ್ದರು ಎಂದು ಹೀಗೆ ಸರಳವಾಗಿ ಹೇಳುವುದು ಒಂದು ದೊಡ್ಡ ಆಪಾದನೆಯ ಮಾತಾಗುತ್ತದೇನೋ ಹೊರತು ವಿಚಾರವೆನ್ನಿಸಿಕೊಳ್ಳುವುದಿಲ್ಲ. ಹಾಗೇ ಬಂಡವಾಳಶಾಹಿ ಸಮಾಜದವಾದವೆನ್ನುವುದು ಪುಟ್ಟಯ್ಯನವರ ಬಾಯಿಂದಲೇ ಮೊದಲಬಾರಿಗೆ ಕೇಳುತ್ತಿರುವ ಒಂದು ಹಚ್ಚ ಹೊಸ ಪರಿಕಲ್ಪನೆಯಾಗಿದೆ! ಹಾಗಾಗಿ ಅದೂ ವಿವರಣೆಯನ್ನು ಬೇಡುತ್ತದೆ.

ಇನ್ನು ಅಂಬೇಡ್ಕರ್ ಭೂಮಿ ಮತ್ತು ಸಂಪತ್ತನ್ನು ರಾಷ್ಟ್ರೀಕರಿಸಬಯಸಿದ್ದರು ಎಂದು ಪುಟ್ಟಯ್ಯ ಹೇಳಿದ್ದಾರೆ. ಅಂಬೇಡ್ಕರ್ ಸಾಮೂಹಿಕ ಕೃಷಿಯನ್ನು ಪ್ರತಿಪಾದಿಸಿದ್ದರೆಂದು ಬಲ್ಲೆ. ಹಾಗಾಗಿ ಉಳಿದ ವಿಚಾರಗಳನ್ನು ಅವರು ಎಲ್ಲಿ, ಹೇಗೆ ಪ್ರತಿಪಾದಿಸಿದ್ದರು ಎಂಬುದನ್ನು ಪುಟ್ಟಯ್ಯನವರು ಸೂಚಿಸಿದರೆ ಒಳಿತು. ಓದಿ ತಿಳಿದುಕೊಳ್ಳಲು ನಮಗೆ ಸಹಾಯವಾಗುವುದು. (ಸಂಪಾದಕರು ಲೇಖಕರಿಂದ ಉತ್ತರ ತರಿಸಿ ಪ್ರಕಟಿಸಬೇಕೆಂದು ಕೋರುತ್ತೇನೆ)

– *ಡಿ.ಎಸ್.ನಾಗಭೂಷಣ, ಶಿವಮೊಗ್ಗ*

* * *

ತಮ್ಮ ಜೂನ್ ತಿಂಗಳಿನ 'ಜನಪದ ವಿಚಾರ' ಪತ್ರಿಕೆಯಲ್ಲಿ ತಾವು ಬರೆದಿರುವ "ಕರ್ನಾಟಕದ ಚುನಾವಣೆ" ಒಂದು ಅಭಿಪ್ರಾಯ ಅತ್ಯುತ್ತಮವಾಗಿದೆ. ಓದಿ ನನಗೆ ತುಂಬಾ ಸಂತೋಷವಾಯಿತು. ತಮ್ಮಂತಹ ಅನುಭವಿ ಸಂಪಾದಕರು ಪ್ರಸ್ತುತ ಕರ್ನಾಟಕದ ರಾಜಕೀಯದ ಬಗ್ಗೆ ಬರೆದಿರುವ ವಿಚಾರ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ. ತಮ್ಮ ಮಾತು ಕಾಂಗ್ರೆಸ್ ಪಕ್ಷದ ಬುಡ ಟೊಳ್ಳಾಗಿದೆ; ಕರ್ನಾಟಕವು ಸರ್ವಜನಾಂಗದ ಶಾಂತಿಯ ತೋಟ; ಬಿ.ಜೆ.ಪಿ ತನ್ನ ಆತ್ಮಪರೀಕ್ಷೆಯನ್ನು ಮಾಡಿಕೊಳ್ಳಬೇಕಿದೆ; ಬಿ.ಜೆ.ಪಿ ತನ್ನ ಹಿಂದುತ್ವದ ಕನ್ನಡಕವನ್ನು ಬದಲಾಯಿಸಿಕೊಳ್ಳುವುದು ಅಗತ್ಯವಾಗಿದೆ; ಮುಂದಿನ ಶತಮಾನಗಳು ಸರ್ವಧರ್ಮ ಸಮಭಾವದ ಕಾಲ; ಕಾಂಗ್ರೆಸ್ ಬಿದ್ದು ಹೋಗುತ್ತಿರುವ ಮರ; ಸಂವಿಧಾನವನ್ನೇ ಕುಲಗೆಡಿಸಿದ ಪಕ್ಷ ಕಾಂಗ್ರೆಸ್; ಮತದಾರ ಸಂವಿಧಾನದ ಆಶೋತ್ತರಗಳ ಪರ.

ಇತ್ಯಾದಿ ಸತ್ಯ ನಿಷ್ಠುರವಾಗಿ ಬರೆದಿದ್ದೀರಿ. ನಾನು ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ರಾಜಕೀಯ ಪಕ್ಷಗಳ ಕಾರ್ಯವೈಖರಿಗಳನ್ನು ನೋಡುತ್ತಾ ಬಂದಿದ್ದೇನೆ. ನಿಮ್ಮ ವಿಚಾರಗಳನ್ನು ಓದಿ ತುಂಬಾ ಸಂತೋಷಪಟ್ಟೆ, ಈ ಪತ್ರಿಕೆಯ ಪ್ರತಿಗಳು ರಾಜಕೀಯ ವ್ಯಕ್ತಿಗಳಿಗೂ ದೊರಕಲಿ.

– *ಎಸ್. ಶಂಕರಪ್ಪ, ಮೈಸೂರು*

ಜನಪದ ಸೇವಾ ಟ್ರಸ್ಟ್ ಸಮಾಚಾರ

ಪ್ರತಿವರ್ಷದಂತೆ ಈ ವರ್ಷವೂ ಮೇ ಮಾಹೆಯ ಕೊನೆವಾರದಲ್ಲಿ ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಮೇಲುಕೋಟೆ ಮತ್ತು ಪಕ್ಕದ ಗ್ರಾಮಗಳ ೪೦ ಮಕ್ಕಳು ಭಾಗವಹಿಸಿದರು. ಶಿಬಿರದ ಮುಕ್ತಾಯದ ದಿನ ಶಿಬಿರಾರ್ಥಿಗಳು ತಾವು ಶಿಬಿರದಲ್ಲಿ ಕಲಿತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದರು. ಗ್ರಾಮದ ನೂರಾರು ಜನ ಬಂದು ಮಕ್ಕಳ ಕಾರ್ಯಕ್ರಮವನ್ನು ವೀಕ್ಷಿಸಿ ಸಂತೋಷ ಪಟ್ಟರು. ಈ ಶಿಬಿರಕ್ಕೆ 'ದೊಡ್ಡ ಮರದಾ ನೆರಳಿನಲಿ' ಎಂದು ನಾಮಕರಣ ಮಾಡಲಾಗಿತ್ತು.

ವಾಡಿಕೆಯಂತೆ ಮೇಲುಕೋಟೆ ಹಿರಿಯ ನಾಗರಿಕರ ಸಭೆ ಪ್ರತಿ ಮಂಗಳವಾರ ನಡೆಯಿತು. ವಾರದ ಪ್ರತಿ ಸಭೆಯಲ್ಲೂ ಸುಮಾರು ೩೦ ಜನ ಭಾಗವಹಿಸಿದ್ದರು. ಕೆಲವು ಹಿರಿಯ ನಾಗರಿಕರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಅವರ ಆರೋಗ್ಯ ತಪಸಣೆಯನ್ನು ಮಾಡಿಸಲಾಯಿತು. ಹಿರಿಯ ನಾಗರಿಕರ ಆರೋಗ್ಯ ವಿಷಯದಲ್ಲಿ ಸ್ಥಳೀಯ ಸರ್ಕಾರಿ ಆಸ್ಪತ್ರೆಯೊಂದಿಗೆ ಸಂಬಂಧವಿರಿಸಿಕೊಳ್ಳಲಾಗಿದೆ.

ಟ್ರಸ್ಟಿನ ಅಧ್ಯಕ್ಷರು ಮಲ್ಲಾಡಿಹಳ್ಳಿ ಮತ್ತು ಚಿಕ್ಕಜಾಜೂರಿಗೆ ಹೋಗಿ ಅಲ್ಲಿ ಕರ್ನಾಟಕ ಸರ್ವೋದಯ ಸಂಘದವರ ಆಶ್ರಯದಲ್ಲಿ ಎಂಟು ಕದರುಗಳ ಅಂಬರ್ ಚರಕಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸುಮಾರು ನೂರು ಮಹಿಳೆಯರಿಗೆ ಚರಕಗಳನ್ನು ಕೊಡಲಾಯಿತು.

ಟ್ರಸ್ಟಿನ ಅಭಿಮಾನಿ ಮಿತ್ರರಾದ ವಿ.ಎಸ್. ಶ್ರೀಧರ್ ಮತ್ತು ಅವರ ಪತ್ನಿ ಸರ್ವಮಂಗಳಾ ತಮ್ಮ ವಿವಾಹ ಮಹೋತ್ಸವದ ನೆನಪಿನ ಸಂದರ್ಭದಲ್ಲಿ ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ಧನಸಹಾಯ ಮಾಡಿದರು.

ಮೇಲುಕೋಟೆ ರಸ್ತೆಬದಿ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರು ನೆರವೇರಿಸಿದರು.

ಮೈಸೂರಿನಲ್ಲಿರುವ ಟ್ರಸ್ಟಿನ ಅಭಿಮನಿಗಳಾದ ಶ್ರೀರಾಮಾನುಜ ಮತ್ತು ವೈದೇಹಿ ಹಾಗೂ ಅವರ ಬಂಧುಗಳು ಟ್ರಸ್ಟಿಗೆ ಭೇಟಿಕೊಟ್ಟರು.

ರಾಷ್ಟ್ರೀಯ ಸೇವಾ ಯೋಜನೆಯ ದಕ್ಷಿಣ ಭಾಗದ ಸಂಯೋಜಕರಾದ ಡಾ.ಹೆಚ್.ಎಸ್.ಸುರೇಶ್ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಡಾ.ಶಿವಣ್ಣ ಭೇಟಿಕೊಟ್ಟರು.


೨೦೦೮-೦೯ ನೇ ಸಾಲಿಗೆ ಕರುಣಾಗೃಹಕ್ಕೆ ಹೊಸ ವಿದ್ಯಾರ್ಥಿಗಳಿಗೆ ಪ್ರವೇಶಕೊಡಲಾಯಿತು. ಈಗ ಕರುಣಾಗೃಹದ ವಿದ್ಯಾರ್ಥಿಗಳ ಸಂಖ್ಯೆ ಹದಿನೈದು ಇದೆ. ಈ ಸಂಖ್ಯೆಯು ಕ್ರಮೇಣ ಮೂವತ್ತಕ್ಕೆ ಏರುವ ಸಂಭವವಿದೆ. ಈ ಮಕ್ಕಳೆಲ್ಲ ಸಾಮಾನ್ಯವಾಗಿ ಮಾಧ್ಯಮಿಕ ಐದನೆ ತರಗತಿ ಓದುವ ಗ್ರಾಮಾಂತರ ಪ್ರದೇಶದ ಮಕ್ಕಳಾಗಿದ್ದಾರೆ. ಈ ಮಕ್ಕಳ ಒಂದು ದಿನದ ಊಟೋಪಚಾರದ ಖರ್ಚು ಒಂದು ಸಾವಿರ ರೂ ಗಳಷ್ಟಾಗುತ್ತದೆ. ಮಕ್ಕಳ ಅಭಿವೃದ್ಧಿ ವಿಷಯದಲ್ಲಿ ಆಸಕ್ತಿ ಇರುವ ಮಹನಿಯರು ಒಂದು ದಿನದ ಊಟದ ಖರ್ಚನ್ನು ನಿರ್ವಹಿಸಿಕೊಳ್ಳಲು ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

೨೦೦೮ ಜೂನ್ ಮಾಹೆಯ ದಾನಿಗಳು

೧. ಶ್ರೀ ಸಿ.ಎಸ್.ಕೃಷ್ಣಗುಪ್ತ, ಬೆಂಗಳೂರು ; ೨. ಶ್ರೀ ವಿ.ಎಸ್.ಶ್ರೀಧರ್ ಮತ್ತು ಶ್ರೀಮತಿ ಸರ್ವಮಂಗಳಾ, ಬೆಂಗಳೂರು : ೩. ಶ್ರೀಮತಿ ಟಿ.ಎಸ್.ಲಕ್ಷ್ಮೀದೇವಿ, ಮೈಸೂರು ; ೪.ಶ್ರೀ ಸಿ.ಪಿ.ಶೇಷಾದ್ರಿ, ಬೆಂಗಳೂರು ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳು.

ಜನಪದ ನಿಲಯದ ಅಂತರಂಗದಲ್ಲಿ . . . ೫೬

– ಸುರೇಂದ್ರ ಕೌಲಗಿ



ಕರುಣಾಗೃಹದಲ್ಲಿ ಅಂಗವಿಕಲ ಮಕ್ಕಳ ವ್ಯಕ್ತಿತ್ವ ವಿಕಸನದ ಬಗ್ಗೆ ವಿಶೇಷ ಗಮನವನ್ನು ಕೊಡಲಾಗುತ್ತಿತ್ತು. ನಮಗೆ "ಕರುಣೆ ಬೇಕಿಲ್ಲ, ಅವಕಾಶಗಳು ಬೇಕು" ಎಂಬ ಮಾತು ಅವರಲ್ಲಿದ್ದ ಕರ್ತೃತ್ವ ಶಕ್ತಿ ಸದಾ ಸಾರುತ್ತಿತ್ತು. ಆ ಎಲ್ಲ ಮಕ್ಕಳು ತುಂಬಾ ಕ್ರಿಯಾಶೀಲರಾಗಿದ್ದರು ಮತ್ತು ವ್ಯಾಸಂಗದಲ್ಲಿ ಅಭಿರುಚಿಯುಳ್ಳವರಾಗಿದ್ದರು. ಅವರು ಪ್ರಾರ್ಥನಾ ಸಮಯದಲ್ಲಿ ನೂಲನ್ನೆ ತೆಗೆಯಲಿ, ತೋಟದ ಕೆಲಸವನ್ನೆ ಮಾಡಲಿ, ಕರುಣಾಗೃಹದ ಸ್ವಚ್ಛತೆಯನ್ನೆ ಮಾಡಲಿ, ಸಾಂಸ್ಕೃತಿಕ ಕೆಲಸಗಳನ್ನೆ ನಡೆಸಲಿ ಎಲ್ಲವನ್ನು ತುಂಬಾ ಶ್ರದ್ಧೆಯಿಂದ ಮತ್ತು ತಮ್ಮ ಸಾಮರ್ಥ್ಯಕ್ಕೆ ಒಳಪಡುವಷ್ಟು ದಕ್ಷತೆಯಿಂದ ಮಾಡುತ್ತಿದ್ದರು. ಆಗ ಇನ್ನೂ ಪ್ಲಾಸ್ಟಿಕ್ ಕೈ ಚೀಲಗಳು ವಾಡಿಕೆಗೆ ಬರದೆ ಇದ್ದುದರಿಂದ ಚಿಲ್ಲರೆ ಅಂಗಡಿಗಳಲ್ಲಿ ವೃತ್ತಪತ್ರಿಕೆಗಳ ಹಾಳೆಯಿಂದ ತಯಾರಾದ ಕವರುಗಳನ್ನೆ ಪದಾರ್ಥಗಳನ್ನು ಕಟ್ಟುವುದಕ್ಕಾಗಿ ಉಪಯೋಗಿಸುತ್ತಿದ್ದರು. ಆದ್ದರಿಂದ ಆಗಿನ ಕಾಲದಲ್ಲಿ ಹಳೆಯ ಕಾಗದಗಳಿಂದ ಕವರುಗಳನ್ನು ತಯಾರಿಸುವುದೇ ಒಂದು ಗೃಹೋದ್ಯೋಗದಂತೆ ಇತ್ತು. ಈಗಲೂ ಕೆಲವು ಕಡೆ ಇರಬಹುದು. ಕರುಣಾಗೃಹದ ಮಕ್ಕಳು ಈ ಕವರ್ ತಯಾರಿಕೆಯನ್ನು ಮಾಡುತ್ತಿದ್ದರು. ಕೆಲವು ಮಕ್ಕಳು ಕೆಂಡದಿಂದ ಕಾಯಿಸಿದ ಇಸ್ತ್ರಿ ಪಟ್ಟಿಗೆಯಿಂದ ಒಗೆದ ಬಟ್ಟೆಗಳನ್ನು ಇಸ್ತ್ರಿ ಮಾಡುವುದನ್ನು ಕಲಿತರು. ಊಟಕ್ಕೆ ಬೇಕಾದ ಅಕ್ಕಿಯನ್ನು ಅವರೆ ಸ್ವಚ್ಛ ಮಾಡಿಕೊಳ್ಳುತ್ತಿದುದು ಉಂಟು. ಕೆಲವು ಮಕ್ಕಳಲ್ಲಿ ಚಿಂತನಾಶಕ್ತಿ ಸಹ ಇದ್ದುದ್ದನ್ನು ಗಮನಿಸಿ ಅವರಿಗೆ ಆ ಕ್ಷೇತ್ರದಲ್ಲಿ ಕೆಲವು ಅವಕಾಶಗಳನ್ನು ಮಾಡಿಕೊಡಲಾಗುತ್ತಿತ್ತು. ಉದಾಹರಣೆಗೆ ಪಿ.ಎಲ್.ಕುಮಾರಸ್ವಾಮಿಯವರಿಗೆ ವೈಚಾರಿಕ ಸಾಹಿತ್ಯದಲ್ಲಿ ತುಂಬಾ ಆಸಕ್ತಿ ಇತ್ತು. ಅವರು ಪತ್ರಿಕೆಗಳನ್ನು ಓದುವ ಹವ್ಯಾಸವನ್ನಿಟ್ಟುಕೊಂಡಿದ್ದರು. ಈ ಮಕ್ಕಳೆಲ್ಲರನ್ನೂ ಸೇರಿಸಿ ಒಂದು ಸಲ ಗಾಂಧೀಜಿಯವರ ಜೀವನಕ್ಕೆ ಸಂಬಂಧಿಸಿದ ಒಂದು ಪುಟ್ಟ ಇಂಗ್ಲಿಷ್ ನಾಟಕವನ್ನು ಸಹ ಕಲಿಸಲಾಗಿತ್ತು. ಕುಮಾರಸ್ವಾಮಿಯವರು ಗಾಂಧೀಜಿಯವರ ಸಂಭಾಷಣೆಗಳನ್ನು ಚೆನ್ನಾಗಿ ಕಂಠಪಾಠಮಾಡಿ ಅಭಿವ್ಯಕ್ತಗೊಳಿಸುತ್ತಿದ್ದರು. ಪಶ್ಚಿಮವಾಹಿನಿಯಲ್ಲಿ ಪ್ರತಿವರ್ಷ ನಡೆಯುವ ಸರ್ವೋದಯ ಮೇಳಕ್ಕೆ ಕರುಣಾಗೃಹದ ಮಕ್ಕಳನ್ನು ಕರೆದುಕೊಂಡು ಹೋಗಲಾಗಿತ್ತು. ಆ ಮೇಳದಲ್ಲಿ ಸೇರಿದ್ದ ಗಾಂಧೀ ವಿಚಾರ ಪ್ರೇಮಿಗಳ ಮುಂದೆ ಕರುಣಾಗೃಹದ ಮಕ್ಕಳು ತಾವು ಕಲಿತಿದ್ದ ಗಾಂಧೀಜಿಯವರ ನಾಟಕವನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಅಂತೆಯೇ ನರಸಿಂಹರವರ ಕಂಠವೂ ಚೆನ್ನಾಗಿದ್ದುದರಿಂದ ಅವರಿಗೆ ಹಾಡುವುದಕ್ಕೆ ಪ್ರೋತ್ಸಾಹಿಸಲಾಗುತ್ತಿತ್ತು. ಅಲ್ಲದೆ ಅವರಿಗೆ ಕವನಗಳನ್ನು ಬರೆಯುವುದಕ್ಕೂ ಪ್ರೋತ್ಸಾಹಿಸಲಾಯಿತು. ಅವರು ಬರೆದಿದ್ದ ಹಲವಾರು ಕವನಗಳನ್ನು ಸಂಗ್ರಹಿಸಿ "ಇಂದಲ್ಲ ನಾಳೆ" ಎಂಬ ಹೆಸರಿನಲ್ಲಿ ಆ ಪುಸ್ತಕವನ್ನು ಸಹ ಟ್ರಸ್ಟಿನ ಆಶ್ರಯದಲ್ಲಿ ಪ್ರಕಟಿಸಲಾಯಿತು. ಹೀಗೆ ಪತ್ತಾರು ಬಗೆಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಸಾಮರ್ಥ್ಯದ ಸದುಪಯೋಗ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇವೆಲ್ಲದರ ಜೊತೆಗೆ ಪ್ರತಿವರ್ಷ ಮೂರು ದಿನಗಳ ಕಾಲ ನಡೆಯುತ್ತಿದ್ದ ಗಾಂಧೀ ಜಯಂತಿಯ ಸಂದರ್ಭದಲ್ಲಿ ಒಂದು ದಿನ ಕೈತೋಟದ ಪ್ರದರ್ಶನವನ್ನು ಸಹ ಏರ್ಪಡಿಸಲಾಗುತ್ತಿತ್ತು. ಆಗ ಪ್ರದರ್ಶನಕ್ಕಾಗಿ ಕೈತ್ತೋಟವನ್ನು ಸಿದ್ಧಪಡಿಸುವಲ್ಲಿ ಅವರು ತೋರುತ್ತಿದ್ದ ಉತ್ಸಾಹ, ಜಾಣ್ಮೆ ತುಂಬಾ ಮೆಚ್ಚುವಂಥದಾಗಿರುತ್ತಿತ್ತು. ಅಕ್ಟೋಬರ್ ತಿಂಗಳ ಕಾಲಕ್ಕೆ ಸರಿಯಾಗಿ ಬೆಳೆಯುವ ತರಕಾರಿಗಳನ್ನು, ಹೂಗಳನ್ನು ಮುಂಚಿತವಾಗಿಯೆ ಬೆಳಸಿ ಅಕ್ಟೋಬರ್ ಎರಡರಂದು ಅವು ಸಕಾಲಕ್ಕೆ ಪ್ರದರ್ಶನಕ್ಕೆ ಯೋಗ್ಯವಾಗುವಂತೆ ಮಾಡುತ್ತಿದ್ದರು. ಈ ಕಾರ್ಯಕ್ರಮದಲ್ಲಿ ತುಂಬಾ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದವರು ಆಗಿನ ಹಿರಿಯ ವಿದ್ಯಾರ್ಥಿಗಳಾಗಿದ್ದ ಪಿ.ಎಲ್.ಕುಮಾರಸ್ವಾಮಿ, ರಾಚಪ್ಪ, ನರಸಿಂಹ, ವಿಶ್ವನಾಥ್ ಮುಂತಾದವರು. ಮುಂದೆ ಕೆಲ ವರ್ಷಗಳ ನಂತರ ಪ್ರತಿವರ್ಷ 'ಭಾರತಿ' ಎಂಬ ಹೆಸರಿನಲ್ಲಿ ರಾಷ್ಟ್ರೀಯ ಪುಸ್ತಕ ದಿನಾಚರಣೆಯ ಸಂದರ್ಭದಲ್ಲಿ ಪುಸ್ತಕ ಪ್ರದರ್ಶನವನ್ನು ಕರುಣಾಗೃಹದಲ್ಲಿ ಏರ್ಪಡಿಸಲಾಗಿತ್ತು. ಆ ಪುಸ್ತಕಗಳ ಪ್ರದರ್ಶನದ ಏರ್ಪಾಡಿನಲ್ಲಿಯೂ ಸಹ ಕರುಣಾಗೃಹದ ಮಕ್ಕಳು ತಮ್ಮ ಕಲಾಭಿರುಚಿಯನ್ನು ಮತ್ತು ವ್ಯವಸ್ಥೆಯ ಬಗ್ಗೆ ಇರಬೇಕಾದ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದರು. ಕರುಣಾಗೃಹದ ಮಕ್ಕಳು ಶಾಲೆಗೆ ಹೋಗಿ ಬರುವುದಕ್ಕಾಗಿ ಇದ್ದ ಒಂಟೆತ್ತಿನ ಗಾಡಿಯನ್ನು ಗ್ರಾಮದ ಗ್ರಾಮಸ್ಥರು ಆರೋಗ್ಯವಿಲ್ಲದವರನ್ನು ಆಸ್ಪತ್ರೆಗೆ ಮತ್ತು ಬಸ್‌ನಿಲ್ದಾಣಕ್ಕೆ ಕರೆದುಕೊಂಡು ಹೊಗಲು ಕೇಳಿದಾಗ ತುಂಬಾ ಕಳಕಳಿಯಿಂದ ಅವರನ್ನು ಕರೆದುಕೊಂಡು ಹೋಗಿ ಬರುತ್ತಿದ್ದರು. ಆಗ ಮೇಲುಕೋಟೆಯಲ್ಲಿ ಆಟೋರಿಕ್ಷಾಗಳಿರಲಿಲ್ಲ. ಕರುಣಾಗೃಹದ ಗಾಡಿ ಗ್ರಾಮದ ಸೇವೆಗಾಗಿ ಇದ್ದ ಗಾಡಿಯಾಗಿತ್ತು. ವಯಸ್ಕರ ಶಿಕ್ಷಣದ ಕಾರ್ಯಕ್ರಮವನ್ನು ಸಹ ಕರುಣಾಗೃಹದಲ್ಲಿ ನಡೆಸಲಾಗುತ್ತಿತ್ತು. ಪ್ರತಿದಿನ ಸಂಜೆ ಗ್ರಾಮದ ಕೆಲ ನಿರಕ್ಷರ ಯುವಕರು ಕರುಣಾಗೃಹಕ್ಕೆ ಬಂದು ಅಕ್ಷರಾಭ್ಯಾಸ ಮಾಡುತ್ತಿದ್ದರು. ಈ ಪ್ರಕಾರದ ಅನೇಕ ಕಾರ್ಯಕ್ರಮಗಳು ಕರುಣಾಗೃಹದ ಮಕ್ಕಳ ಮನೋವಿಕಾಸಕ್ಕೆ ಮತ್ತು ಬುದ್ಧಿ ವಿಕಾಸಕ್ಕೆ ಸಹಕಾರಿಯಾಗಿದ್ದವು. ಅಲ್ಲದೆ ತಮಗೆ ಅಂಗವಿಕಲತೆ ಇದ್ದಾಗ್ಯೂ ತಾವು ಉಪಕಾರಿ ಎಂಬುದನ್ನು ತೋರಿಸಿಕೊಡುತ್ತಿದ್ದರು. ಈ ಎಲ್ಲ ಕಾರ್ಯಕ್ರಮಗಳು ಅವರ ಬೇಡಿಕೆಯಾಗಿದ್ದ "ನಮಗೆ ಕರುಣೆ ಬೇಕಿಲ್ಲ, ಅವಕಾಶಗಳು ಬೇಕು" ಎಂಬುದನ್ನು ಪೂರೈಸುವಲ್ಲಿ ತಕ್ಕಮಟ್ಟಿಗೆ ಉಪಯೋಗಕರವಾಗಿದ್ದವು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

೧. ಶ್ರೀಮತಿ ಮಂದಾಕಿನಿ, ಮೈಸೂರು

೨. ಎಂ.ಕೆ.ಮಾಧವಿ, ಮೈಸೂರು

೩. ಶ್ರೀ ಕೆ. ರಾಘವೇಂದ್ರರಾವ್, ಮೈಸೂರು

೪. ಶ್ರೀ ಎಚ್.ಎಂ. ನಾಗರಾಜರಾವ್, ಮೈಸೂರು

೫. ಶ್ರೀಮತಿ ವೀಣಾರಮೇಶ್, ಮೈಸೂರು

೬. ಶ್ರೀ ಆರ್.ಕೆ. ಶ್ರೀಕಂಠಕುಮಾರಸ್ವಾಮಿ, ಬೆಂಗಳೂರು

೭. ಶ್ರೀ ಕೆ.ಜಿ. ಪ್ರಕಾಶ್, ಮೈಸೂರು

೮. ಪ್ರಾಂಶುಪಾಲರು, ಬಾಪೂಜಿ ಪದವಿ ಪೂರ್ವ ಕಾಲೇಜು, ತುಮಕೂರು

೯. ಮುಖ್ಯೋಪಾಧ್ಯಾಯರು ಬಾಪೂಜಿ ಪೌಢಶಾಲೆ, ತುಮಕೂರು

೧೦. ಶ್ರೀಮತಿ ವೈದೇಹಿ, ಮೈಸೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಕೃತಜ್ಞತೆಗಳು.

* * *

ಸಂತಾಪ

ಕನ್ನಡ ವಿಜ್ಞಾನ ಸಾಹಿತಿ ಜಿ.ಟಿ.ನಾರಾಯಣರಾವ್ (೮೩) ಮತ್ತು ಋಗ್ವೇದ ಅಧ್ಯಯನ ಪಾರಂಗತ ಮತ್ತು ಸಂಶೋಧಕ ಪ್ರೊ॥ ಜಿ.ಎನ್ ಚಕ್ರವರ್ತಿ (೯೪) ಹಾಗೂ 'ಸೈನಿಕರ ಜನರಲ್' ಎಂದೇ ಕರೆಯಲ್ಪಡುತ್ತಿದ್ದ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣಿಕ್‌ಷಾ (೯೪) ರವರು ದಿನಾಂಕ ೨೭-೬-೨೦೦೮ ರಂದು ನಿಧನರಾದರು. ಈ ಮೂವರ ನಿಧನಕ್ಕಾಗಿ ಜನಪದ ವಿಚಾರವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(-ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 209016 e-mail : janapada@yahoo.com
Printed at Sanketh Mudrana, Melkote.